ವೇರಾಳು



ಶಿರಗಾನಹಳ್ಳಿ ಶಾಂತನಾಯ್ಕ

ಶಿರಗಾನಹಳ್ಳಿ ಶಾಂತನಾಯ್ಕ

ಕನ್ನಡದ ಪ್ರತಿಭಾವಂತ ನಾಟಕಕಾರರಲ್ಲಿ ಒಬ್ಬರು. ಅವರ ಮೊದಲ ಕೃತಿ ಪಾತ್ರಗಳು ನಾಟಕಕ್ಕೆ ಬಿ.ವಿ. ಕಾರಂತ ಪ್ರತಿಷ್ಠಾನದ ಮೊದಲ ಪ್ರಶಸ್ತಿ ಬಂದಿದೆ. ಎರಡನೇಯ ನಾಟಕ ನಮ್ಮೊಳಗಿನ ಮನುಷ್ಯ ಮತ್ತು ಇತರ ನಾಟಕಗಳು ಕೃತಿಗೆ ಮಾಸ್ತೇರಿ ಎಂ. ಕೆ. ನಾಯಕ ಪ್ರಶಸ್ತಿಯನ್ನ ಪಡೆದಿದ್ದಾರೆ. ಕತೆ ಕಾದಂಬರಿ, ವೈಚಾರಿಕ ಹಾಗೂ ಕವಿತೆ ಎಲ್ಲಾ ಪ್ರಕಾರಗಳಲ್ಲಿಯೂ ಪರಿಣಿತಿ ಹೊಂದಿರುವ ಶಾಂತನಾಯ್ಕ. ಕತ್ತಲು ಕರಗುವ ಮುನ್ನ – 2004 ಗುಡ್ಡಜ್ಜ ಕಥಾಸಂಕಲನ – 1999, ಮೀನು ಮತ್ತು ಹುಡುಗಿ – 2002, ಮನು ಹಿಟ್ಲರ್ ಮತ್ತು ಅಂಬೇಡ್ಕರ್ ಒಂದು ಚಿಂತನೆ – 2004, ನಮ್ಮೊಳಗಿನ ಮನುಷ್ಯ – 2004, ಪಾತ್ರಗಳು (ನಾಟಕ)–2004, ಕೊಂಯ್ಯ ಮತ್ತು ಧೊತ್ರ – 2004 (ಕಥಾ ಸಂಕಲನ) ಹಳೆಭಾವನೆಯ ಹೊಸಮನುಷ್ಯ – 2004 (ಕಾವ್ಯ), ಕಲ್ಲೆ ಕಲ್ಲೆ ಕತೆಹೇಳು –2013 (ಕಥಾಸಂಕಲನ) ಕತ್ತಲು ಕರಗುವ ಮುನ್ನ – 2004 (ಕಾದಂಬರಿ) ಗೋರ್‌ಮಾಟಿ (ಕಾದಂಬರಿ) – 2009 ಮಲಾಣ್ – 2018 (ಕಾದಂಬರಿ) ಲಮಾಣಿ ಚಿಮ್ನಿ ಆತ್ಮಚರಿತೆ 2013 (ಕಾದಂಬರಿ) ಲಮಾಣಿ – 2010 (ಆತ್ಮಕಥನ ಕಾವ್ಯ) ಬರವಣಿಗೆ ಮತ್ತು ಸಿದ್ಧಾಂತಗಳು (ವೈಚಾರಿಕ ಲೇಖನಗಳು) ಚರಗ– ನಾಟಕ ಒಂದು ಹಗಲು ಎರಡ ರಾತ್ರಿಗಳು (ಕಾದಂಬರಿ) ಗೋರ್ ಬೋಲಿ – ಬಂಜಾರ ಭಾಷಾ ಮತ್ತು ಸಂಸ್ಕೃತಿ ನಿಘಂಟು (2019)– ಹೀಗೆ ಎಲ್ಲಾ ಪ್ರಕಾರಗಳಲ್ಲಿ ಅಷ್ಟೆ ಪ್ರಬಲವಾದ ಅಭಿವ್ಯಕ್ತಿಯನ್ನ ಹೊರಸೂಸಿರುವ ಪ್ರೊ. ಶಿರಗಾನಹಳ್ಳಿ ಶಾಂತನಾಯ್ಕ ಇಂಗ್ಲಿಷ್‌ನಲ್ಲೂ ಕೂಡ ಅಷ್ಟೆ ಪ್ರಬಲವಾಗಿ ಬರೆಯುವ ಸಾಮರ್ಥ್ಯವನ್ನು ಉಳ್ಳವರಾಗಿದ್ದಾರೆ. ಸುಮಾರು ಎಂಟು ಇಂಗ್ಲಿಷ್ ಲೇಖನಗಳ ಸಂಗ್ರಹಗಳು, ಗೋರ್‌ಮಾಟಿಆ್ಯನ್ ಅನ್ ಎಂಡಿಂಗ್ ಜರ್ನಿ ಎನ್ನುವ ಕಾದಂಬರಿ, 'ಬಂಜಾರ ವಾರಿಯರ್' (ವೀರಾಳು) ಎನ್ನುವ ನಾಟಕವನ್ನು ಭಾರತೀಯ ಓದುಗರಿಗೆ ನೀಡಿದ್ದಾರೆ. ಇತ್ತೀಚೆಗೆ ಇವರು ಅಮೇರಿಕಾದ ಮ್ಯಾಡಿಸನ್ ವಿಸ್ಕಾನ್‌ಸಿನ್ ವಿಶ್ವವಿದ್ಯಾಲಯದ ಆಹ್ವಾನದ ಮೇಲೆ ಆದಿವಾಸಿ ಬಂಜಾರರ ಸಾಂಸ್ಕೃತಿಕ ಹಿನ್ನೆಲೆಗಳು ಹಾಗೂ ಆದಿವಾಸಿ ಶಿಕ್ಷಣ ವ್ಯವಸ್ಥೆಯ ಮೇಲೆ ಭಾಷಣವನ್ನು ಮಾಡಿದ್ದಾರೆ. ಇವರ ಕತೆಗಳಿಗೆ ಪಾ.ಪು ಪ್ರಶಸ್ತಿ, ಮುಂಬೈನ ಪತ್ರಿಕೆ ನೀಡುವ ಬಿಲ್ಲವ ಪ್ರಶಸ್ತಿ ಗುಲ್ಬರ್ಗ ವಿವಿ ರಾಜ್ಯೋತ್ಸವ ಪ್ರಶಸ್ತಿ ಹೀಗೆ ಅನೇಕ ಬಹುಮಾನಗಳು ದೊರೆತಿವೆ.

ವೇರಾಳು

(ನಾಟಕ)

ಶಿರಗಾನಹಳ್ಳಿ ಶಾಂತನಾಯ್ಕ

ಗಗನ ಪ್ರಕಾಶನ

ನಂ. ೮೮೩/ಬಿ, ೧೭ನೇ ಕ್ರಾಸ್
ರಾಮಾನುಜ ರಸ್ತೆ, ಕೆ.ಆರ್. ಮೊಹಲ್ಲಾ
ಮೈಸೂರು–೫೭೦ ೦೦೪

Veralu

(Drama)

Written by: Shiraganahalli Shanthanaik (N. SHANTHANAIK)
Professor of English, VSK University, Ballari.
Mob: 944 902 1006, Email: akampan2000@gmail.com

Published by : GAGANA PRAKASHANA
No. 883/B, 17th Cross, Ramanuja Road
K.R. Mohalla, Mysore-570 004

Inner Pages : Maplitho
Size : 1/8th Demmy
First impression : 2019
Pages : 120+ iv = 124 Price : ₹ 100

ISBN: 978-81-942307-1-7

ವೇರಾಳು

ಮೊದಲನೇ ಮುದ್ರಣ: ೨೦೧೯
ಪುಟಗಳು: ೧೨೦+iv = ೧೨೪
ಬೆಲೆ: ₹ ೧೦೦
ಮುಖಪುಟ ವಿನ್ಯಾಸ: ರೂಪ ಗ್ರಾಫಿಕ್ಸ್
ಪ್ರಕಾಶನ: ಗಗನ ಪ್ರಕಾಶನ
ನಂ. ೮೮೩/ಬಿ, ೧೭ನೇ ಕ್ರಾಸ್, ರಾಮಾನುಜ ರಸ್ತೆ
ಕೆ.ಆರ್. ಮೊಹಲ್ಲಾ, ಮೈಸೂರು-೫೭೦ ೦೦೪

ಮುದ್ರಣ: ಧರಣಿ ಪ್ರಿಂಟರ್ಸ್, ಬೆಂಗಳೂರು.

ಲೇಖಕರ ಮಾತು

ಬಂಜಾರರ ಇತಿಹಾಸ ಬಹಳ ಪುರಾತನದ್ದಾಗಿದ್ದು ಇದನ್ನ ಸಮರ್ಥಿಸಿಕೊಳ್ಳಲು ಪುರಾವೆಗಳು ಸಿಗದ ಕಾರಣ ಅಲ್ಲಿ, ಇಲ್ಲಿ ಹರಿದು ಹಂಚಿಹೋಗಿದೆ. ರೇವ ಕುಂಡದಲ್ಲಿ ಉಗಮಿಸುವ ನರ್ಮದಾ ನದಿಯು ರೇವಾನಾಯ್ಕ ಎನ್ನುವ 'ಹರಾ, ಭರಾ ಮತ್ತು ಆಮ್ಲ' ಮಾರಾಟ ಮಾಡುತ್ತಿದ್ದ ಬಂಜಾರ ವ್ಯಾಪಾರಿ ನಿರ್ಮಿಸಿರುವುದನ್ನ ಅಲ್ಲಿಯ ಪೂಜಾರಿಗಳು, ಮೌಖಿಕ ಪರಂಪರೆಯಿಂದ ಬಂದಂತಹ ಅನೇಕ ಐತಿಹ್ಯಗಳು ಇವತ್ತಿಗೂ ಸಾರಿ ಹೇಳುತ್ತಿವೆ. ಹೀಗಾಗಿಯೆ ದಂಡಿಯ ದಶಕುಮಾರ ಚರಿತೆಯಲ್ಲಿ ಬಂಜಾರರ ಉಲ್ಲೇಖವಿದೆ, ಹರಪ್ಪ ಮೆಂಜೊದಾರೊ ನಾಗರಿಕತೆಯ ಕಾಲಘಟ್ಟದಲ್ಲಿ ಇರುವ ಕುರುಹುಗಳು ಸರಿಯಾಗಿ ದಾಖಲೆಗಳನ್ನು ಒದಗಿಸಲಾಗದೆ ಹಾಗೆಯೆ ಉಳಿದುಕೊಂಡಿವೆ. ಇತ್ತೀಚೆಗೆ ಇತಿಹಾಸವನ್ನೆ ಬುಡಮೇಲು ಮಾಡಿದ ದೆಹಲಿಯ ಷೇರ್ ಷಾ ಸೂರಿಯ ಮಂತ್ರಿ ಹೇಮು, ಪಂಜಾಬ್, ಹರಿಯಾಣದಲ್ಲಿ ಉಪ್ಪಿನ ವ್ಯಾಪಾರಿಯಾಗಿದ್ದ ಎನ್ನುವ ಸತ್ಯ ಮತ್ತು ಇವತ್ತು ಬಂಜಾರರಲ್ಲಿ ಕಂಡುಬರುವ, ಹೇಮ, ಹೇಮ್ಲ, ಗೋಮ್ಲ, ಎನ್ನುವ ಪುರುಷರ ಹೆಸರುಗಳು ಮತ್ತು ಹೇಮಿ, ಹೇಮ್ಲಿ ಎನ್ನುವ ಮಹಿಳೆಯರ ಹೆಸರುಗಳು ಹೇಮುವಿಕ್ರಮಾದಿತ್ಯನಿಗೆ ಸಮೀಪವಾದಂತಹವುಗಳು ಮತ್ತು ಅವನ ಮೂಲ ಹೆಸರು ಹೇಮು, ಹೇಮ್ಲಾ ಆಗಿರಬಹುದು. ಕೊನೆಯ ಪಾಣಿಪತ್‌ನಲ್ಲಿ ಹತನಾದ ಹೇಮು, ಬಂಜಾರನೆ ವಿನಃ ಬನಿಯಾ ಅಲ್ಲಾ ಎನ್ನುವುದಕ್ಕೆ ಈ ಪುರಾವೆಗಳು ಸಾಕಾಗುತ್ತವೆ. ಇಂತಹ ವಿಶಿಷ್ಟವಾದ ಮತ್ತು

ವಿಭಿನ್ನವಾದ ಭಾರತದ ಏಕೈಕ ದೊಡ್ಡದಾದ ಬುಡಕಟ್ಟು ಜನಸಮುದಾಯ ಇವತ್ತು ಬುದ್ಧಿ ಇಲ್ಲದ ರಾಜಕಾರಣಿಗಳಿಂದಾಗಿ ಮತ್ತು ದೆಹಲಿಯ ಭಾಗದಲ್ಲಿ ಆಲೋಚನೆ ಮಾಡದೆ ಇರುವಂತಹ ಬಂಜಾರ ಬೌದ್ಧಿಕ ವಲಯ ಇಲ್ಲದೆ ಇರುವುದರಿಂದಾಗಿ ಎಲ್ಲಿಯೂ ಸಲ್ಲದಾಗಿದೆ. ಇಂತಹ ಚೂರುಪಾರು ಇತಿಹಾಸವನ್ನ ಸಂಗ್ರಹಿಸಿ, ಈ ದೇಶಕ್ಕಾಗಿ, ಈ ಮಣ್ಣಿಗಾಗಿ ಮಡಿದ ಯೋಧರ ಚಿರನೆನಪು ಇರಲೆಂದು ಸಾಹಿತ್ಯದ ರೂಪದಲ್ಲಿ ಪ್ರಸ್ತುತಪಡಿಸಿ ಅವರ ತ್ಯಾಗ, ಬಲಿದಾನ ವ್ಯರ್ಥವಾಗದಿರಲಿ ಎಂದು ಬಗೆದು ಈ ನಾಟಕವನ್ನು ಬರೆದಿದ್ದೇನೆ. ಈ ತುಣುಕು ಸುದ್ಧಿಯನ್ನ ಪ್ರಕಟಿಸಿದ ಪ್ರಜಾವಾಣಿ ದಿನಪತ್ರಿಕೆಗೆ ನಾನು ಋಣಿಯಾಗಿದ್ದೇನೆ. ಈ ನಾಟಕವನ್ನು ಪ್ರಕಟಿಸಲು ಮುಂದೆ ಬಂದ ಗಗನ ಪ್ರಕಾಶನದವರಿಗೆ, ಈ ನಾಟಕ ಬರೆಯಲು ನೆರವಾದ ಡಾ.ಜಿ ದಾಕ್ಷಾಯಣಿ, ಮಕ್ಕಳಾದ ಅನಿಕೇತನ್, ಅಕಂಪನ್, ಹಾಗೂ ನನಗೆ ಸದಾ ಸ್ಫೂರ್ತಿಯಾಗಿರುವ ನನ್ನ ಸಹೋದರರಿಗೆ, ಸಹೋದರಿಯರಿಗೆ, ಅನಕ್ಷರತೆಯ ಅವಮಾನವನ್ನುಂಡು ಅಕ್ಷರ ಕಲಿಸಿದ ಅಪ್ಪ-ಅಮ್ಮನಿಗೆ ನಾನು ಸದಾ ಋಣಿಯಾಗಿದ್ದೇನೆ.

– ಪ್ರೊ.ಶಿರಗಾನಹಳ್ಳಿ ಶಾಂತನಾಯ್ಕ

ವೇರಾಳು

ಭಾರತದ ಇತಿಹಾಸ ಬರಿ ಸುಳ್ಳಿನ ಕಂತೆಯೆ ವಿನಃ ನಿಜವಾದದ್ದಲ್ಲಾ. ಯಾರೋ ಕೆಲವು ಅಕ್ಷರ ಬಲ್ಲವರು ತಮಗೆ ತಿಳಿದವರ ಬಗ್ಗೆ ಹೊಗಳಿ ಬರೆದಿರುವ ಕಟ್ಟುಕತೆಯೆ ಹೊರತು ಸತ್ಯವಂತು ಅಲ್ಲ. ಈ ಇತಿಹಾಸ ನಿಜವೇ ಆಗಿದ್ದರೆ ಸ್ವಾತಂತ್ರ್ಯ ಸಿಕ್ಕ 70 ವರ್ಷಗಳಾದರೂ ಕೂಡ ಸ್ವಾತಂತ್ರ್ಯಕ್ಕಾಗಿ ದುಡಿದು ಮಡಿದ ಸಾವಿರಾರು ಜನರು ಇತಿಹಾಸ ಪುಸ್ತಕದಲ್ಲಿ ದಾಖಲಾಗಬೇಕಿತ್ತು.

ಕಾರ್ಲ್‌ಮಾರ್ಕ್ಸ್ ಹೇಳುವಂತೆ ಇತಿಹಾಸ 'ಉಳ್ಳವರ ಮತ್ತು ಇಲ್ಲದವರ ನಡುವಿನ ಸಂಘರ್ಷ'. ಉಳ್ಳವರು ತಮ್ಮ ಸಂಪತ್ತಿನ ಬಲದಿಂದ ಅಕ್ಷರ ಬಲ್ಲವರನ್ನ ಕೊಂಡುಕೊಂಡು ತಮಗೆ ಬೇಕಾದಂತೆ ಇತಿಹಾಸವನ್ನು ಬರೆಯಿಸಿಕೊಂಡಿದ್ದಾರೆ. ಆದರೆ ದುರಾದೃಷ್ಟವೆಂಬಂತೆ ಇತಿಹಾಸಕಾರ ಅಕ್ಷರಬಲ್ಲವನಾಗಿದ್ದರಿಂದಾಗಿ ಇಲ್ಲದವರು ಇತಿಹಾಸದ ಪುಟಗಳನ್ನು ಸೇರಲೇ ಇಲ್ಲ. ಸೇರುವುದೂ ಇಲ್ಲ. ಭಾರತ ಖಂಡ ಎಷ್ಟು ವಿಶಾಲವಾಗಿದೆಯೋ ಅಷ್ಟೇ ವಿಶಾಲವಾಗಿ ಬೇರೆ ಬೇರೆ ಜನಾಂಗವನ್ನು ಹೊಂದಿದೆ. ಭಾರತ ಸ್ವಾತಂತ್ರ್ಯಗೊಂಡನಂತರ 563ಕ್ಕಿಂತ ಹೆಚ್ಚು ಪ್ರಾಂತ್ಯಗಳು ರಾಜ್ಯಗಳಾಗಿ, ಭಾಷಾವಾರು ಪ್ರಾಂತ್ಯಗಳಾಗಿ ವಿಭಜನೆಗೊಂಡ ನಂತರ, ಭಾರತದ ಆದಿವಾಸಿಗಳು, ಬುಡಕಟ್ಟು ಜನರು ವಲಸೆ ಬಂದವರು ಅಲ್ಲಲ್ಲೆ ವಸತಿ ಉಳಿದರು. ಹೊಸ ನೀರಿಗೆ ನದಿಯಿಂದ ಮೀನುಗಳು ಹಳ್ಳಕ್ಕೆ ಏರುವಂತೆ ಏರಿ ನೀರಿನ ಹರಿವು ಕಡಿಮೆಯಾದಂತೆ ಅಲ್ಲಲ್ಲೇ ಗುಂಡಿಗಳಲ್ಲಿ ಉಳಿದು ಬಿಟ್ಟಂತೆ ಆದಿವಾಸಿ-ಬುಡಕಟ್ಟು

ಜನರು ಅಲ್ಲಿಯೇ ನೆಲೆನಿಂತು ಉಳಿದುಕೊಂಡರು. ಉಳಿದು ಕೊಂಡವರು ತಮ್ಮ ಮೂಲವನ್ನು ಸಂಪೂರ್ಣವಾಗಿ ಮರೆತು ಉಳಿದುಕೊಂಡರು, ನಂತರ ಅವರ ಸ್ಥಿತಿ. ಮೀನು ಮೀನುಗಾರನ ಕೈಗೆ ಸಿಕ್ಕು ಪ್ರಾಣವನ್ನೆ ಕಳೆದುಕೊಂಡ ಮೀನಿನಂತೆ ಇವರು ಬಹುಸಂಖ್ಯಾತ ಜಾತಿ ಜನರ ನಡುವೆ ತಮ್ಮ ಆಸ್ಮಿತೆಗಾಗಿ ಹೋರಾಟವನೆ ಮಾಡಬೇಕಾಯಿತು. ಈ ಹೋರಾಟದಲ್ಲಿ ತಮ್ಮ ಸರ್ವಸ್ವವನ್ನೆ ಕಳೆದುಕೊಂಡರು. ಇದು ಸ್ವಾತಂತ್ರ್ಯ ನಂತರ ಭಾರತದ ಸತ್ಯವಾದರೆ, ಸ್ವಾತಂತ್ರ್ಯಪೂರ್ವದಲ್ಲಿ ಇಡೀ ಭಾರತದಲ್ಲೇ ದೊಡ್ಡ ವ್ಯಾಪಾರಿಯಾಗಿದ್ದ ಲಾಕಾ ಬಂಜಾರ-ಮಧ್ಯ ಪ್ರದೇಶದ ಈಗಿನ ಸಾಗರ ಜಿಲ್ಲೆಯಲ್ಲಿ ಇತಿಹಾಸವೆ ಅಚ್ಚರಿಯಾಗೊಳ್ಳಂತಹ ಅತಿದೊಡ್ಡ ಕೆರೆಯನ್ನು ನಿರ್ಮಿಸಿದ. ಆದರಿಂದಲೆ ಅದಕ್ಕೆ ಸಾಗರ ಎಂದು ಹಸರು ಬಂದಿತು. ಈಗ ಆ ಕೆರೆ 'ಲಾಕಾ ತಲಾಬ್' ಎಂದು ಖ್ಯಾತಿಗೊಂಡಿದೆ. ಆದರೆ ಈತನೆಂದೂ ಇತಿಹಾಸವನ್ನು ಸೇರಲಿಲ್ಲ. ಗುರುಗೊಂವಿಂದಸಿಂಗ್‌ನ ತಲೆ ಮತ್ತು ದೇಹವನ್ನು ಕ್ರೂರಿ ಮೊಗಲ್ ಚಕ್ರವರ್ತಿ ಔರಂಗಜೇಬ್ ಬೇರ್ಪಡಿಸಿ ಗುರು ಗೋವಿಂದಸಿಂಗ್ ದೇಹಕ್ಕೆ ಅಗ್ನಿ ಸ್ಪರ್ಶ ಆಗಬಾರದೆಂದು ತೊಟ್ಟ ಪಣವನ್ನು ಹುಸಿಯಾಗಿಸಿದ. ಲಾಕಾಬಂಜಾರನ ತ್ಯಾಗಬಲಿದಾನವನ್ನು ಸಿಖ್ ಸಮುದಾಯವೂ ಗುರುತಿಸಿದೆ. ಗುರುಗೋವಿಂದ್ ಬಂಜಾರನ ಹೋರಾಟ, ಹೈದ್ರಾಬಾದ್ ನಿಜಾಮನನ್ನು ಎದುರಿಸಿದ ಜಮಣಿ ನಾಯ್ಕಣ್ ಯಾರ ಸ್ಮೃತಿಗೂ ಬರಲೇ ಇಲ್ಲ.

ಇನ್ನೂ ಆರನೇಯ ಶತಮಾನದಲ್ಲಿ ನರ್ಮದಾ ನದಿ ಹುಟ್ಟುವಲ್ಲಿ ಪುಷ್ಕರಣಿಯನ್ನು ಕಟ್ಟಿಸಿದ ರೇವಾನಾಯ್ಕ ಇತಿಹಾಸದಲ್ಲಿ ಭಾಗವನ್ನು ಪಡೆದುಕೊಳ್ಳಲೇ ಇಲ್ಲ. ಯಾರು ಆತನ ಬಗ್ಗೆ ಮಾತನಾಡುವುದಿಲ್ಲ. ಅದೇ ಆ ಭಾಗದಲ್ಲಿ ಪ್ರಬಲವಾಗಿರುವ ಜನಾಂಗದಲ್ಲಿ ಆ ವ್ಯಕ್ತಿ ಜನಿಸಿದ್ದೆಯಾಗಿದ್ದರೆ ಅವನನ್ನು ವೈಭವಿಕರಿಸಲಾಗುತ್ತಿತ್ತು. ಇಲ್ಲ ಬಹಳ ಮುಖ್ಯವಾಗುವುದು ಬಹುಸಂಖ್ಯಾತರು, ಅಲ್ಪಸಂಖ್ಯಾತರು, ಶ್ರೀಮಂತರು, ಬಡವರು ಭೂಮಾಲೀಕರು, ಭೂಮಿಯೇ ಇಲ್ಲದವರು ಈ ಸಂಘರ್ಷದಲ್ಲಿ ಶ್ರೀಮಂತರು ದಾಖಲಾಗುತ್ತಾರೆ ಹೊರತು ಬಡವರು ಎಲ್ಲೂ ದಾಖಲಾಗುವುದಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಸಾವಿರಾರು ಜನ ಆದಿವಾಸಿಗಳು, ಬುಡಕಟ್ಟು ಜನರು ಜೈಲಿನಲ್ಲಿಯೇ ಇದ್ದರು. ಈ 2,50,000 ಆದಿವಾಸಿಗಳಿಗೆ ಸ್ವಾತಂತ್ರ್ಯ ಸಿಗಲು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಬರೋಬ್ಬರಿ 5 ವರ್ಷ 11 ದಿನಗಳು ಬೇಕಾದವು. ಪಂಡಿತ್ ಜವಾಹರ್‌ಲಾಲ್ ನೆಹರೂ ಜೈಲಿನಲ್ಲಿರುವ ಖೈದಿಗಳು ನಮ್ಮವರೇ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರಸೇನಾನಿಗಳು ಎಂದು ತಿಳಿಯಲು ಐದು ವರ್ಷಗಳು ಬೇಕಾಯಿತೆ? ಮೂಲನಿವಾಸಿಗಳು ಕಾಡಿನ ಸಂಪತ್ತನ್ನ ಕಾಪಾಡಿಕೊಳ್ಳುತ್ತಲೆ ಬರುತ್ತಿದ್ದಾರೆ. ಆದರೆ ಅದರ ಸಂಪತ್ತನ್ನು ಬೇರೆಯವರು

ಅನುಭವಿಸುತ್ತಲೆ ಬರುತ್ತಿದ್ದಾರೆ. ಬುಡಕಟ್ಟು ಜನರ ಪರಿಸ್ಥಿತಿ ಸ್ವಾತಂತ್ರ್ಯ ಸಿಕ್ಕು 70 ವರ್ಷಗಳೆ ಉರುಳಿದರೂ ಸುಧಾರಿಸಿದೆಯೇ? ಕಾಫಿ ಬೀಜ ಹರಿಯುವ, ರಸ್ತೆ ನಿರ್ಮಾಣ ಮಾಡುವ, ರದ್ಧಿ ಆಯುವ, ಗೋಡೆ ಕಟ್ಟುವ ದಾರಸೂಜಿ, ಪಿನ್ನ ಮಾರುವ ಹಂದಿಜೋಗಿಗಳು ಎಷ್ಟು ಅಕ್ಷರಸ್ಥರಾಗಿದ್ದಾರೆ? ಅವರ ಮಕ್ಕಳು ಎಷ್ಟು ಮಂದಿ ಐಎಎಸ್ ಉತ್ತೀರ್ಣರಾಗಿದ್ದಾರೆ? ಇಂತಹ ಸಾವಿರಾರು ಉದಾಹರಣೆಗಳು ನಮ್ಮೆದುರಿಗಿದ್ದರೂ ಕೆಲವರು ಎಲ್ಲಾ ಸವಲತ್ತುಗಳನ್ನು ಅನುಭವಿಸಿಯೂ ಭಾರತದಲ್ಲಿ "ಜಾತಿ ಅನಿವಾರ್ಹ" ಎನ್ನುತ್ತಾರೆ.

ಇಂತಹ ಸಮಾಜವನ್ನು ಕಲುಷಿತಗೊಳಿಸುವವರಿಂದ ಎಚ್ಚರವಾಗಿರಬೇಕಿದೆ. ಬದುಕಿನ ಹೋರಾಟದಲ್ಲಿ ಕೆಲಸದ ಜಾಗದಲ್ಲಿಯೇ ಪ್ರಾಣ ಕಳೆದುಕೊಳ್ಳುವ ಸಾವಿರಾರು ಜನರಿಗೆ ನಾವು ಏಕೆ ಸತ್ತೆವು ಎನ್ನುವ ಅರಿವು ಇರದು. ತಾವು ಬದುಕಿರುವ ಬದುಕಿನ ಹಿನ್ನೆಲೆ ಮುನ್ನೆಲೆಗಳನ್ನೇ ಅರಿಯದ ಜನರಿಗೆ ಸಾವಿನ ಅರಿವು ಇರುವುದಾದರೂ ಹೇಗೆ. ಈ ಜಗತ್ತಿನ ನಿಯಮ ಬಲುಸೋಜಿಗ, ಕೆಲವರು ಸುಖ ಅನುಭವಿಸುವ ಸಲುವಾಗಿಯೆ ಹುಟ್ಟಿದರೆ ಇನ್ನೂ ಕೆಲವರು, ಬರಿದುಡಿಯುವುದಕ್ಕಾಗಿಯೆ ಹುಟ್ಟಿರುವಂತೆ ಅನಿಸುತ್ತದೆ.

ಈಗ ಆದಿವಾಸಿಗಳ ಹತ್ತಿರ ಕಾಡಿಲ್ಲ. ಬಹುರಾಷ್ಟ್ರೀಯ ಕಂಪನಿಗಳಿಗೆ ಭೂಮಿಯನ್ನು ಮಾರಾಟ ಮಾಡಿರುವ ಸರ್ಕಾರಗಳಿಗೆ ಈ ಜನ ಇರುವುದೆ ಬೇಕಿಲ್ಲ. ಜನಾಂಗೀಯ ವೈರುಧ್ಯ ಬೆಳೆಸುತ್ತಿರುವ ಈ ಸಂದರ್ಭದಲ್ಲಿ ಬುಡಕಟ್ಟು ಜನಾಂಗಗಳು ಮೇಲೆ ಬರುವುದಾದರೂ ಹೇಗೆ?

ಕೇವಲ ಒಂದೂವರೆಯಿಂದ ಎರಡೂವರೆ ಪ್ರತಿಶತ ವಿದ್ಯಾವಂತರಾಗಿರುವ ನಿಜವಾದ ಬುಡಕಟ್ಟುಗಳ ಸಾಹಿತ್ಯ ಶೇ.1% ಕೂಡ ಹೊರಗಡೆ ಬಂದಿಲ್ಲ. ಮತ್ತೊಂದು ಸಂತೋಷದ ವಿಷಯವೆಂದರೆ ನಿಜವಾದ ಸಾಹಿತ್ಯ ಉಳಿದಿರುವುದೆ ಬುಡಕಟ್ಟು ಜನರ ಹತ್ತಿರ. ಏಕೆಂದರೆ, ವೈವಿಧ್ಯ ಬದುಕಿನ ಹರಿಕಾರರಾಗಿರುವ ಈ ಜನರು ತಮ್ಮ ಭಾವನೆಗಳನ್ನು ಹೊರಹಾಕಿಲ್ಲ. ಹಾಗೆಯೇ ತಾಜ ಭಾವನೆಗಳನ್ನು ಇಟ್ಟುಕೊಂಡಿರುವ ಇವರ ಬದುಕು ತೆರೆದುಕೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿ 'ವೇರಾಳು' ಅಂದರೆ ಯೋಧ, ವೀರ, ಶೌರ್ಯವಂತ, ಪ್ರತಾಪಿ ಎಂಬ ನಾನಾರ್ಥಗಳನ್ನು ಹೊಂದಿರುವ ಬಂಜಾರ ಭಾಷೆಯ ಈ ಶಬ್ದ ಕನ್ನಡದಲ್ಲಿ ಬರಲಿ ಎನ್ನುವ ಉದ್ದೇಶದಿಂದ ಇದನ್ನು ಇಲ್ಲಿ ಬಳಸಲಾಗಿದೆ. 'ವೇರಾಳು' ಬಹಳ ವರ್ಷಗಳ ಹಿಂದೆ ಒಂದು ಪತ್ರಿಕೆಯಲ್ಲಿ ಸಣ್ಣ ತುಣುಕೊಂದು ಸುದ್ದಿಯಾಗಿತ್ತು. ಎಲ್ಲರೂ ಓದುವಂತೆ ನಾನು ಪತ್ರಿಕೆ ಓದಿದೆ ಸುಮ್ಮನೆ ವಿಷಯವನ್ನು ಮರೆತೆ. ಮುಂದೆ ನಾನು ಆಕಾಶವಾಣಿ ಬಿಟ್ಟು ಮೈಸೂರು ಮಹಾರಾಜ ಕಾಲೇಜು ಸೇರಿದಾಗಲೂ ಅದರ ಬಗ್ಗೆ ಯೋಚನೆ ಮಾಡಲಿಲ್ಲ.

ಹಾಗೆ ಬಂಜಾರ ಸಮುದಾಯದ ಸಂಶೋಧನೆ ಮಾಡುವ ಅನಿವಾರ್ಯತೆ ಉಂಟಾದಾಗ ನಿಜವಾಗಿಯೂ ಬೇಸರವಾಗಿತ್ತು. ಏಕೆಂದರೆ ಇತಿಹಾಸವೇ ಇಲ್ಲದ ಜನರ ಹೊಸದೊಂದು ಇತಿಹಾಸವನ್ನು ಸೃಷ್ಟಿ ಮಾಡುವುದು ಕಠಿಣ ಕೆಲಸ. ಸ್ಥಿತಿ ಹೀಗಿರುವಾಗ ಅಂದು ಓದಿದ ಪತ್ರಿಕೆಯ ಭಾಗ ನಾನು ತೆಗೆದುಕೊಂಡು ಇಡಬೇಕಿತ್ತು. ಇಲ್ಲವೆ ದಿನಾಂಕ ಮತ್ತು ವರ್ಷವನ್ನು ದಾಖಲಿಸಿಕೊಳ್ಳಬೇಕಿತ್ತು. ಆದರೆ ಒಂದು ದಶಕವೆ ಕಳೆದು ಹೋಗಿದೆ. ಈಗ ಅದರ ತೀವ್ರತೆ ಕಾಡತೊಡಗಿತ್ತು. ಹಾಗೆಯೆ ಶೋಧನೆ ಮಾಡುತ್ತಿರುವಾಗ ಚಿಕ್ಕ ಜೋಗಿಹಳ್ಳಿ ತಾಂಡದಲ್ಲಿ ಭೀಮದಾದನ ಗುಡಿ ಇರುವುದಾಗಿ ಕೇಳಲ್ಪಟ್ಟೆ. ಒಂದೆರಡು ಸಂದರ್ಭದಲ್ಲಿ ಚಿಕ್ಕ ಜೋಗಿಹಳ್ಳಿ ತಾಂಡಕ್ಕೆ ಹೋದಾಗ ಗುಡಿಗೂ ಬೆಟ್ಟ ನೀಡಿದೆ. ಆದರೆ ನನಗೆ ನಿರಾಶೆಯಾಗಿದ್ದು, ಅಲ್ಲಿಯ ಜನರಿಗೆ ಈ ಭೀಮದಾದ ಯಾರು? ಈತನ ಕತೆ ಏನು? ಈ ದೇವಸ್ಥಾನ ಯಾಕೆ ಕಟ್ಟಲಾಗಿದೆ ಎನ್ನುವ ಪರಿಜ್ಞಾನವೇ ಇಲ್ಲದಿರುವುದು. ಯಾರಿಗೂ ಭೀಮಾದಾದನ ನಿಜವಾದ ಚರಿತ್ರೆ ತಿಳಿದಿಲ್ಲ. ಆ ತಾಂಡದಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ಮನೆಗೆ ಒಬ್ಬ ಡಾಕ್ಟರ್, ಇಂಜಿನೀಯರ್, ಮಂತ್ರಿಗಳಿದ್ದರೂ ಭೀಮದಾದನ ಗುಡಿ ಮಾತ್ರ ಅನಾಥವಾಗಿದೆ. ಪೂಜಾರಿ ಗಂಟೆ ಬಾರಿಸಿ ಪೂಜೆ ಮಾಡಿ ಊದಿನಕಡ್ಡಿ ಬೆಳಗಿ ಬಾಗಿಲು ಹಾಕಿದರೆ ಮುಗಿಯಿತು. ಇಂತಹ ಒಬ್ಬ ವೀರ ಸೇನಾನಿ ಬೆಳಕಿಗೆ ಬಾರದೆ ಕತ್ತಲೆಯ ಕೂಪದಲ್ಲಿ ಇರುವುದು ಕಂಡು ಖೇದವೆನಿಸಿತು. ಈ ಯೋಧನಿಗೆ ಮರುಜೀವ ನೀಡಲೇ ಬೇಕು ಎನ್ನುವ ಅಭಿಪ್ಸೆಯಿಂದ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬರೆದು ಮುಗಿಸಿದೆ.

ಭೀಮಾನಾಯ್ಕ ಆಂದ್ರ ಪ್ರಾಂತ್ಯದ ಕಡೆಯಿಂದ ವ್ಯಾಪಾರಕ್ಕೆ ಬಂದ ವ್ಯಾಪಾರಿ. ತಂದೆ-ತಾಯಿ ಬಂದು ಬಳಗದ ಜೊತೆಗೆ ವಲಸೆ ಬಂದು ಟಿಪ್ಪುಸುಲ್ತಾನ್ ಬಾದಷನ ಸ್ನೇಹ ಬೆಳೆಸಿಕೊಂಡು ವ್ಯಾಪಾರ ಮಾಡತೊಡಗಿದ್ದ. ಆದರೆ ಆದಿನಗಳು ಅಷ್ಟೇನೂ ಸುಲಭದ ದಿನಗಳಾಗಿರಲಿಲ್ಲಾ. ಒಂದು ಕಡೆ ವ್ಯಾಪಾರದಲ್ಲಿನ ಸ್ಪರ್ಧೆ, ಮತ್ತೊಂದು ಕಡೆ ಇಂಗ್ಲೆಂಡಿನಿಂದ, ವ್ಯಾಪಾರಕ್ಕೆಂದು ಬಂದು ಇಡೀ ಭಾರತದ ರಸ್ತೆಯನ್ನು ನಮ್ಮಿಂದಲೆ ತಿಳಿದು ನಮ್ಮ ವ್ಯಾಪಾರಕ್ಕೆ ಪೆಟ್ಟು ಬೀಳಬಹುದೆಂದು ಬಂಜಾರ ಹಾಗೂ ಇತರೆ ಹಲವು ಬುಡಕಟ್ಟು ಜನರು ಯಾರು ಕಾಡನ್ನು ಆಶ್ರಯಿಸಿದ್ದರೂ ಅವರನ್ನು 'ಕಳ್ಳರು' ಎಂದು ಹಣೆ ಪಟ್ಟಿಯನ್ನು ಕಟ್ಟಿ ಅವರನ್ನು ಕಾಡಿನಿಂದ ದೂರ ಉಳಿಯುವಂತೆ ಮಾಡಿದ್ದ ಬ್ರಿಟೀಷರು. ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಮಾಡಿಕೊಂಡಿದ್ದ ಯುವಕ ಭೀಮನಾಯ್ಕ ಟಿಪ್ಪುಸುಲ್ತಾನ್‌ಗೆ ಯಾವುದೆ ಪರಿಸ್ಥಿತಿಯಲ್ಲಿ ಸಹಾಯಮಾಡಲು ತಯಾರಾಗಿದ್ದು. ಕಠಿಣ ಮಾರ್ಗವನ್ನ ಆಯ್ದುಕೊಂಡಿದ್ದ ಭೀಮನಾಯ್ಕ ಆಂತರೀಕ ಮತ್ತು ಬಾಹ್ಯ ಶತ್ರುಗಳ ನಡುವೆ ನಲಗಿ

ಹೋಗಿದ್ದ ಟಿಪ್ಪುಗೆ ಅನಿವಾರ್ಯವಾಗಿ ಹತ್ತಿರವಾಗಿದ್ದ. ಸ್ನೇಹಿತರ ಸಹಾಯಸಿಗದೆ ಟಿಪ್ಪುಸುಲ್ತಾನ್ ಒಬ್ಬಂಟಿಯಾಗಿದ್ದ. ಅವನಿಗೆ ಹೊರಗಿನ ಸುದ್ಧಿಯನ್ನು ತರುವಂತಹ ಗೂಡಾಚಾರರ ಮೇಲು ನಂಬಿಕೆ ಹೋಗಿತ್ತು. ಅದೇ ಸಮಯದಲ್ಲಿ ದವಸ ಧಾನ್ಯಗಳನ್ನು ಸಾಗಿಸುತ್ತಿದ್ದ ಭೀಮ ಗುಪ್ತ ಮಾರ್ಗದಿಂದ ಅವನಿಗೆ ಆರು ತಿಂಗಳಿಗೆ ಬೇಕಾಗುವಷ್ಟು ಆಹಾರ ಧಾನ್ಯವನ್ನ ಕೋಟೆಯ ಒಳಗೆ ಸಾಗಿಸಿದ್ದ. ಭೀಮ ಮತ್ತು ಟಿಪ್ಪುಗೆ ಒಬ್ಬನೆ ಸಾಮಾನ್ಯ ಶತ್ರು ಬ್ರಿಟೀಷ್. ತಮ್ಮ ವ್ಯಾಪಾರಕ್ಕೆ ಗಂಡಾಂತರವಾಗಲಿರುವ ಬಂಜಾರರ ಲದೇಣಿಯಾವನ್ನು ಸಂಪೂರ್ಣವಾಗಿ ಧ್ವಂಸಮಾಡಿದ್ದೆ ಆದರೆ ಬ್ರಿಟೀಷರ ಏಕಚಕ್ರಧಿಪತ್ಯವಾಗುತ್ತದೆ ಎಂಬ ನಂಬಿಕೆಯ ಮೇಲೆ, ತಮ್ಮ ವ್ಯಾಪಾರವನ್ನ ಉಳಿಸಿಕೊಳ್ಳಲು 'ಅಪರಾಧಿ' ಪಟ್ಟಕಟ್ಟಿ ಹೊರಗೆ ಬರದಂತೆ ಮಾಡಿದ್ದರು. ಹಾಗೆನೆ ಸಣ್ಣಪುಟ್ಟ ರಾಜರನ್ನ ಬಗ್ಗುಬಡಿಯಬೇಕಾದರೆ ಅವರಿಗೆ ಸಹಾಯ ಮಾಡುವ ಪ್ರತಿಯೊಬ್ಬರಿಗೂ ತೊಂದರೆ ಕೊಟ್ಟು ದೂರ ಮಾಡುತ್ತಿದ್ದರು. ಇದು ಮುಂದುವರೆದು ಬಂದಿದ್ದರಿಂದಾಗಿಯೆ ಭೀಮನಾಯ್ಕನ ಬಗ್ಗೆ ಬ್ರಿಟೀಷರಿಗೆ ಅನುಮಾನಗಳು ಬಂದಿದ್ದವು. ಆಂತರಿಕ ರಹಸ್ಯ ಬಯಲಾದ ಕಾರಣ ಟಿಪ್ಪು ಮಾನಸಿಕವಾಗಿ ಆಘಾತಕ್ಕೆ ಒಳಗಾಗಿದ್ದ. ಅವನು ನಂಬಿದ ಸೇನಾಧಿಪತಿ ಮೀರ್‌ಸಾಧಕ್ ಬ್ರಿಟೀಷರ ಕೈಗೊಂಬೆಯಾಗಿದ್ದ. ದಿವಾನ್ ಪೂರ್ಣಯ್ಯ ಮೇಲೆನೂ ಕೂಡ ವಿಶ್ವಾಸ ಹೋಗಿತ್ತು. ಈ ಹಿನ್ನೆಲೆಯಲ್ಲಿ ಆತನಿಗೆ ಮಾನಸಿಕವಾಗಿ ಹತ್ತಿರವಾದವನು ಕೇವಲ ಒಬ್ಬ ಬಂಜಾರ. ಅವನು ಗೂಢಾಚಾರನೂ ಆಗಿದ್ದ. ವ್ಯಾಪಾರಿಯಾಗಿದ್ದ, ಸೈನಿಕ ಪಾತ್ರವನ್ನು ಮಾಡಿದ್ದ ಎನ್ನುವುದಕ್ಕೆ ಈ ನಾಟಕವೆ ಪುರಾವೆಯಾಗಿದೆ.

ಟಿಪ್ಪುಸುಲ್ತಾನನ ಕೊನೆಯ ಕಾಲಕ್ಕೆ ಸಹಾಯ ಮಾಡಲು ಮುಂದೆ ಬಂದವನೆ ಭೀಮ. ಆದರೆ ಭೀಮನಾಯ್ಕನ ತ್ಯಾಗ, ಬಲಿದಾನ ದಾಖಲಾಗದೆ ಇರುವುದು ಈ ದೇಶದ ದೊಡ್ಡದುರಂತ. ಇದನ್ನ ನಾವು ಇತಿಹಾಸದ ಅಪಯಶಸ್ಸು ಎಂದೆ ತಿಳಿಯಬೇಕಿದೆ. ಯಾವಾಗಲೂ ಇತಿಹಾಸ ಉಳ್ಳವರ ಪರವಾಗಿಯೆ ಇರುತ್ತದೆ. ಬ್ರಿಟೀಷರು ಮೋಸದಿಂದ ಭಾರತವನ್ನು ತಮ್ಮ ಚಕ್ರಾಧಿಪತ್ಯವನ್ನಾಗಿ ಮಾಡಿಕೊಂಡ ನಂತರ, ಕೊಂದವನನ್ನ ಅವರೇಕೆ ಹಿರೊ ಮಾಡಲು ಸಾಧ್ಯ. ನಾಯಿಯನ್ನ ಕೊಂದ ಹಾಗೆ ಹೊಸಕಿ ಹಾಕಿದೆವು ಅಂತಲೆ ಬರೆಯುತ್ತಾರೆ. ಏಕೆಂದರೆ ಅವರು ನಾಯಕನ ಪಟ್ಟಕಟ್ಟಿಕೊಳ್ಳಬೇಕಾದರೆ ಮತ್ತೊಬ್ಬನನ್ನು ಖಳನಾಯಕನನ್ನ ಪ್ರತಿಬಿಂಬಸಲೇಬೇಕಾದ ಅನಿವಾರ್ಯತೆ ಇರುವಾಗ ಅದು ಹೇಗೆ ಅವರು ಟಿಪ್ಪು ಆಗಲಿ, ಭೀಮನಾಯ್ಕನ ಬಗ್ಗೆ ಒಳ್ಳೆಯ ಮಾತುಗಳನ್ನ ದಾಖಲಿಸಲು ಸಾಧ್ಯ. ಬ್ರಿಟೀಷರಿಗೆ ಒಡೆದು ಆಳುವ ನೀತಿಯನ್ನು ಕಲಿಸಿದ ಮಂದಿಯ ಕೈಯಲ್ಲಿ ಲೇಖನಿಯಿತ್ತು. ಜಹಾಗೀರ್ ಮತ್ತು

ದೇಶ್‌ಗತಿಗಾಗಿ ಬ್ರಿಟೀಷರನ್ನು ಹೊಗಳಿ ಹೊನ್ನಶೂಲಕ್ಕೇರಿಸಿ ತಮ್ಮ ಬೆಳೆಕಾಳು ಬೇಯಿಸಿಕೊಂಡ ಧೂರ್ತರಿಗೆ ಬ್ರಿಟೀಷರೆ ಯಜಮಾನರು, ಧಣಿಗಳು, ದೇವರೆ ವಿನಃ ಅವರ ನರಿಬುದ್ಧಿ ಗೊತ್ತಿದ್ದ ಭಾರತೀಯರು ಅವರಿಗೆ ಪ್ರಿಯರಾಗಬಲ್ಲರೆ? ಹೀಗಾಗಿಯೆ ಬುಡಕಟ್ಟು, ಆದಿವಾಸಿ, ನಿರ್ವಂಚಿತ ಜನಸಮುದಾಯಗಳ ಇತಿಹಾಸ ಹೊರಬಾರದೆ ಇರುವುದು. ಈ ಜನರ ಇತಿಹಾಸವನ್ನ ಅವರೆ ಖುದ್ದಾಗಿ ಬರೆದುಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಈ ನಾಟಕ ಬಹಳ ಅಪರೂಪದ ಕೃತಿ. ಎಲ್ಲೊ ಸಿಕ್ಕ ತುಣುಕು ಮಾಹಿತಿ ಹಿಡಿದು ಬಳ್ಳಾರಿಯವರೆಗೆ ಬಂದು ಅದನ್ನ ಮನಸ್ಸಿನೊಳಗೆ ಕೊಳೆಹಾಕಿ, ಸರಿಯಾದ ಸಂದರ್ಭದಲ್ಲಿ ಸಿಕ್ಕ ಮಾಹಿತಿ ಕಲೆಹಾಕಿ, ಬಂಜಾರ ಜನಸಮುದಾಯ ಬ್ರಿಟೀಷರ ವಿರುದ್ಧ ಈ ಹಿಂದೆ ಸಾಕಷ್ಟುಸಲ ಮುಖಾ-ಮುಖಿಯಾಗಿದೆ ಎನ್ನುವುದನ್ನ ಪ್ರತಿಪಾದಿಸಬೇಕಾಗಿದೆ.

ಪರಿವಿಡಿ

ವೇರಾಳು

(ನಾಟಕ)

ದೃಶ್ಯ ೧

ಸನ್ನಿವೇಶ ೧

ವಾಜಮೇಳ : ಹಾಂಕೆ ಮಾರುಚು ಸೇವಾತೋನ
ಯಾಜೋ ಯಾಜೋನಿ ರಾ..........
ಎ.......
ಹಾಂಕೆ ಮಾರು ಮರಿಯಾಡಿ ತೋನ
ಯಾಜೋ ಯಾಜೋನಿಯಾ
ಏಯ್.........
ನೇಕಿ ಫೇಲಿರಾ ಭೀಮನಾಯಕೇರಿ ಜಗೇಮ
ಜಗದಂಬವಾಳೊ
ಸಾಂಬಳನೀರ........
ಸಾತುಯಾಡಿ ತಮುನ ಕೊಂಚು ಕಳಾನ
ಸಾಂಬಳೋನಿಯಾ.......
ಏಯ್........
ಭೀಮ ಕಜಕೊಬಾಳ
ನೇಕಿ ಫೇಲಾರೊ ಸಂಸಾರೆಮ
ಸಾಂಬಳೊ ಗೊರಬಂಜಾರವೋ.......
ಏಯ್
ಭೀಮಾರಿ ಗುಡಿ ಭಂದಿರ ತಾಂಡೇಮ

ಲೋಕ ಜಾಣೆ ಕೋನಿ ಒರ ಬಾರೇಮರಾ.

ಗೋರಲೋಗುತಿ ಲಡೊಭಾಯ.

ರೇಗೊನಾಮ ಅಪಣಮಾಯೀರ.........

ಬಾವ : ಹೀಗೆ ಜೋಗಿಹಳ್ಳಿ ಪ್ರಾಂತದ ಕಡೆಗೆ ಬಂಜಾರ ಮಂದಿ ತಮ್ಮ ಎತ್ತುಗಳ ಮೇಲೆ, ದವಸ, ಧಾನ್ಯ ಉಪ್ಪು, ಬಟ್ಟೆ ಸಾಗಿಸುತ್ತಾ, ಆಗಿನ ಮೈಸೂರು ರಾಜ್ಯದ ಸೀಮೆಯಲ್ಲಿ ಶ್ರೀರಂಗಪಟ್ಟಣದ ದೊರೆಯೊಂದಿಗೆ ವ್ಯಾಪಾರ ಕುದುರಿಸಲು ಹೊರಟಾಗ.....

ಏನಾಯ್ತಪ್ಪ ಅಂದ್ರೆ......

ಚೇಲ : ಅಲ್ಲಾ ಕರಿತಲೆಯ ನರಮನುಷ್ಯರು ನಾವು ನಮಗೆ

ಹೇಗೆ ತಿಳಿಯಲು ಸಾಧ್ಯವಾದೀತು. ಅಂತರ್‌ಜ್ಞಾನಿಗಳು

ನೀವು, ದಿವ್ಯ ದೃಷ್ಟಿಯುಳ್ಳವರು ಎಲ್ಲದನ್ನು

ನೀವೆ ಹೇಳಬೇಕು. ಜನಸಾಮಾನ್ಯರಾದ ನಾವು

ಸುಮ್ಮನೆ ಕೇಳಬೇಕು.

ಭಾವ ಏನು ನಡೆಯಿತು ಅಂತ ಹೇಳಿ........

ನಡೆದದ್ದು ಕೇಳಿ ಪಾವನರಾಗೋಣ.

ಬಾವ : ಆಗ ಅವನ ವಯಸ್ಸು ಹದಿನಾರು ವರ್ಷಗಳಿರಬೇಕು

ಆಗತಾನೆ ಮುಖದ ಮೇಲೆ ಒಡೆದಿದ್ದ ಚಿಗುರು ಮೀಸೆ

ಎತ್ತರದ ಮೈಕಟ್ಟು, ಬಲಶಾಲಿ ಬಾಹುಗಳು ಅಷ್ಟೆ ತೀಕ್ಷಣ

ಬುದ್ಧಿ ಭೀಮ....ಹೆಸರಿಗೆ ತಕ್ಕಂತೆ ಭೀಮನ ಬಲ

ವುಳ್ಳವನಾಗಿದ್ದು. ತಂದೆಯ ಅಪ್ಪಣೆ ಮೇರೆಗೆ

ದವಸ ಧಾನ್ಯ ಮತ್ತು ಉಪ್ಪು ತುಂಬಿದ ಮೂಟೆಗಳನ್ನು ಹೊತ್ತಿ

ಹತ್ತು ಸಾವಿರ ಎತ್ತುಗಳನ್ನು ಮೈಸೂರು ಪ್ರಾಂತದ ಕಡೆಗೆ

ಹೊಡೆಯುವಂತೆ ಅಜ್ಞೆಮಾಡಿದ್ದ.

ಆಗ........

(ಎತ್ತುಗಳು ಒಮ್ಮಿಂದೊಮ್ಮಿಗೆ)

ಬೆದರಿ ಕಂಗಾಲಾಗಿ ಹಿಂದಕ್ಕೆ ಸರಿಯ ತೊಡಗಿದವು. ಮುಂದಿದ್ದ

ಬದ್ಯನಾಯ್ಕ ಮತ್ತು ಇತರರಿಗೆ ಏನು ಮಾಡಲು ತೋಚದೆ

ಬೆಕ್ಕಸ ಬೆರಗಾಗಿದ್ದರು.

ಬಾವ : ಹೀಗೆ ಜೋಗಿಹಳ್ಳಿ ಪ್ರಾಂತದ ಕಡೆಗೆ ಬಂಜಾರ ಜನರು ಎತ್ತುಗಳ ಮೇಲೆ ದವಸ, ಧಾನ್ಯ, ಉಪ್ಪು ಸಾಗಿಸುತ್ತಿರುವಾಗ ಏನಾಯ್ತಪ್ಪ ಅಂದ್ರೆ...

ಚೇಲ : ಏನಾಯ್ತು ಬಾವ... ಹೇಳಿ ಮತ್ತೆ...

(ಹದಿನಾರು ವರ್ಷದ ಬಾಲಕ ಭೀಮ ತನ್ನ ತಂದೆ ನಾನುಸಾದ್ ಹೇಳಿದಂತೆ ಎತ್ತುಗಳನ್ನು ಮೈಸೂರು ಪ್ರಾಂತದ ಕಡೆಗೆ ಸಾಗಿಸುವಂತೆ ಆಜ್ಞಾಪಿಸಿದ್ದನ್ನು ಸಿರಸಾವಹಿಸಿ ಪಾಲಿಸುತ್ತಿರಲು ಸಾವಿರ ಎತ್ತುಗಳು ಒಮ್ಮಿಂದೊಮ್ಮಿಗೆ ಬೆದರಿದವು).

ಜೇಮು : ಹೋ.. ಹೋ.. ಏಯ್, ಮುಂದೆ ಯಾರಲೇ ಅಲ್ಲಿ ಎತ್ತುಗಳು ಹಿಂಗ್ಯಾಕ ಬೆದರ್ಯಾವ ಜಾನ್ವರ್ ಏನಾರು ಬಂದ್ಯೈತೇನು ನೋಡು...?

ಬದ್ಯನಾಯ್ಕ : (ಮುಂದಿನಿಂದ ಎತ್ತುಗಳ ಸಂದಿಯೊಳಗೆ ದಾಟಿ) ಜೇಮು ಮಾಮ, ಯಾರೊ ಸೈನಿಕರು ನಮ್ಮ ಎತ್ತುಗಳನ್ನು ತಡದವ್ರೇ... ಯಾಕಂತ ಕೇಳಿದ್ರ ನೋಡಿಲ್ಲಿ ಹೆಂಗ ಹೊಡದವ್ರೇ... ಅಯ್ಯೊ ಸೇವಾಭಾಯ ಸತ್ತೆ.

ಜೇಮು : (ಕುದುರೆಯನ್ನು ಮುಂದೆ ಓಡಿಸಿ ಅನುಮಾನದಿಂದ ಅವರನ್ನು ನೋಡುತ್ತ) ಹೂಜೂರ್, ಯಾರು ನೀವು? ನಾವೇನು ಮಾಡಿದೆವು ತಮಗೆ ಇದೊಳ್ಳೆ ಗ್ರಾಹಚಾರ ಅಂತೀನಿ. ಅಲ್ಲಾ ನಾವು ವ್ಯಾಪಾರಕ್ಕೆ ಮೈಸೂರು ಸಂಸ್ಥಾನದ ಕಡೆಗೆ ಹೊರಟಿದ್ದೇವೆ. ನಮ್ಮ ಪಾಡಿಗೆ ನಾವು ವ್ಯಾಪಾರಕ್ಕೆ ಹೊಂಟಿರುವ ನಮ್ಮ ಎತ್ತುಗಳನ್ನು ಏಕೆ ತಡೆದಿದ್ದೀರಿ.?

ಅಫ್ಜಲ್‌ಖಾನ್ : ಏಯ್, ಬದ್ಮಾಷ್, ಬಾದಷ ಟೀಪು ಸುಲ್ತಾನ್ ಹೂಜಾರ್ ಬಳ್ಳಾರಿದುಕೆ ಕೋಟೆಗೆ ಹೋಗ್ತಾರೆ ನಡುವೆ ಅವರ ಸೈನ್ಯದ ಎದುರಿಗೆ ನಿಮ್ಮ ಎತ್ತುಗಳನ್ನ ಬಿಡೋದಕೆ ಎಷ್ಟು ಧೈರ್ಯ ಬಂತು...ಬೊಗಳಲೇ. ಬಾದಷ ಅಂದ್ರೆ ಏನಂದ್ಕೊಂಡಿದ್ದಿರಾ.

ಜೇಮು : ಹೂಜೂರ್ ಬಾದಾಷ್ ಬರ್ತಿರೋದು ಗೊತ್ತಿಲ್ಲ ಏನೋ ಚೋಟ-ಮೋಟಾ ವ್ಯಾಪಾರಿ, ನಾವು ನಮ್ಮ ಪಾಡಿಗೆ ಹೊರಟಿದ್ದೆವು ಮಾಫ್ ಕರ್ನಾ ಏನೊ ತೆಪ್ಪಾಯ್ತು.

ಅಫ್ಜಲ್‌ಖಾನ್ : ಬೇಖೂಫ್, ಹಮಾರೆ ಸಾಮ್ನೆ ಮಾತಾಡ್ತಾರೆ ಘೇರಲೊ ಸಬ್ ಬೈಲ್‌ಕೋ. ಸಾಮಾನ ಎಲ್ಲಾ ಕಬ್ಜ ಮಾಡಿಕೊಳ್ಳಿ. ಆಮೇಲೆ ಗೊತ್ತಾಗುತ್ತೆ ನಾವು ಯಾರು ಅಂತ.

ಜೇಮು	:	ಬುದ್ಧಿ ನನ್ನ ಮಾತ ಕೇಳಿ ನಾವು ಸಿರ್ಫ್ ವ್ಯಾಪಾರಿಗಳು, ಬೇಕಾದರೆ ನಾನು ಬಾದಾಷರ ಹತ್ತಿರ ಮಾತಾಡ್ತೇನೆ. ನಮ್ಮ ಮೇಲೆ ಅನುಮಾನ ಬೇಡ.
ಅಫ್ಜಲ್‌ಖಾನ್	:	ಕ್ಯಾ ಬಾದ್‌ಷ್‌ಕೆ ಸಾಮ್ನೆ ಹೋಗ್ತಿ. ಹೊಡಿರಿ ಈ ಮಗನಿಗೆ... ಏಕ್ ಮಾಮೂಲಿ ಬಂಜಾರ ಬಾದ್‌ಷ ಎದುರಿಗೆ ನಿಲ್ಲುವ ತಾಕತ್ತು ಬಂತಾ, ನಿನಗೆ?
ಜೇಮು	:	ಯಾಡಿ, ಏ, ಬಾ... ಬೇಡಿ ಹೂಜೂರ್ ನಿಲ್ಲಿಸಿ... ಅಯ್ಯೋ ಸೇವಾಭಾಯ, ಸತ್ತೆ. ಭೀಮ.. ಭೀಮ... ಕೊಲ್ತಾರೊ ಇವರು ನಮ್ಮನ್ನ, ಬೇಗಾಬಾರೊ... ಭೀಮ.... (ಕೂಗಿದ)
ಭೀಮ	:	(ಸ್ವಗತ) ಇದು ಜೇಮು ಮಾಮನ ಧ್ವನಿ ನಡಿಯೋ ಚಾಮು. ಹೌದು ಇದು ಜೇಮುಮಾಮನ ಧ್ವನಿಯೆ. ಏನಾಗಿರಬಹುದು? ಕಾಡಲ್ಲಿ ಹುಲಿಏನಾರು ಅಡ್ಡ ಬಂತೆ? (ತನ್ನ ಕುದುರೆಯನ ಏರಿದವನೆ, ಕ್ಷಣಾರ್ಧದಲ್ಲಿ ಜೇಮುನ ಧನಿ ಬಂದ ಕಡೆಗೆ ಹೊರಟ) ಯಾರು? ಏನಾಯ್ತು ಜೇಮುಮಾಮ, ಏನಾಯ್ತು...
ಅಫ್ಜಲ್‌ಖಾನ್	:	ಎಯ್, ಛೊಟಬಚ್ಚಾ, ಕೊನ್‌ರೆ ತೂ? ಓ..., ಏಯ್, ಇವನು ಸಣ್ಣ ಹುಡುಗ ಉಟಾರೆ ಇಸ್ಕೋ...ಬಾದ್‌ಷಾ ಸೇನಾಧಿಪತಿ ಅಫ್ಜಲ್ ಖಾನ್ ಎದುರಿಗೆ ಬಂದು ಯಾರು ಅಂತಾ ಕೇಳ್ತೆನೆ.
ಭೀಮ	:	(ಕೈಯಲ್ಲಿದ್ದ ಕೋಲಿಂದ ಕ್ಷಣಾರ್ಧದಲ್ಲಿ ಸೈನಿಕರನ್ನು ಚಿತ್ತ ಮಾಡಿದ) ಹೂಜೂರ್, ಸುಮ್ಮನೆ ನಮ್ಮ ಎತ್ತುಗಳನ್ನು ಬಿಟ್ಟು ಬಂದದಾರಿಗೆ ಹೋಗಿ. ನಾವೇನು ನಿಮ್ಮ ಶತ್ರುಗಳಲ್ಲ ಕೇವಲ ವ್ಯಾಪಾರಿಗಳು ಮಾತ್ರ.
ಅಫ್ಜಲ್‌ಖಾನ್	:	ಎಲಾ ಇವನ್ದುಕೆ, ಏಯ್... (ಮುನ್ನುಗ್ಗುವನು, ಚಿಗುರು ಮೀಸೆಯ ಯುವಕ ಭೀಮ ಮುಂದಿನಿಂದ ಅವನ ಕುದುರೆಯ ಕಾಲುಗಳಿಗೆ ಹೊಡೆದು ಅಫ್ಜಲ್‌ಖಾನ್‌ನನ್ನು ಕೆಳಗುರುಳಿಸುತ್ತಾನೆ. ಇಬ್ಬರು ಮತ್ತೆ ಹೋರಾಡುತ್ತಾರೆ). ವ್ಹಾ.....
ಭೀಮ	:	ಹೋಗು, ಹಿರಿಯ ಅಂತ ಬಿಡುತ್ತಿದ್ದೇನೆ ಇಲ್ಲಾಂದ್ರೆ.. ನಿನ್ನ ಹೆಡಮುರುಗಿ ಕಟ್ತಿದ್ದೆ.
ಅಫ್ಜಲ್‌ಖಾನ್	:	ಷಹಬ್ಬಾಸ್, ಬಚ್ಚಾ ಯಾರನೀನು? ಯುದ್ಧಕಲೆ, ಕೌಶಲ್ಯ ತಿಳಿಯದೆ ಇಪ್ಪತ್ತು ಜನ ಸೈನಿಕರನ್ನ ಕ್ಷಣಾರ್ಧದಲ್ಲೆ ಮಣ್ಣು ಮುಕ್ಕಿಸಿದೆ. ನಾನು ಅಫ್ಜಲ್‌ಖಾನ್, ಶ್ರೀರಂಗಪಟ್ಟಂ ಕೆ ಬಾದಷ

ಟೀಪುಸುಲ್ತಾನ್‌ರ ಸೈನಿಕ ಸಮಯ ಬಂದಾಗ ಭೇಟಿಯಾಗೋಣ (ಹೊರಡಲುನುವಾಗುವನು). ಹಾಂ... ನಿನಗೆ ಧೈರ್ಯ ಬಹಳ ಇದೆ.

ಭೀಮ : ಹೂಜೂರ್ ತಾವು ಸುಲ್ತಾನರ ಸೈನಿಕರೆ ಛೇ, ನಮ್ಮವರು ಎಂಥಹ ಅನರ್ಥ ಮಾಡಿಬಿಟ್ಟರು. ಕ್ಷಮಿಸಿ ಹೂಜೂರ್ ನಾವು ಶ್ರೀರಂಗಪಟ್ಣಂಗೆ ವ್ಯಾಪಾರದ ಸಂಬಂಧ ಮಾಡೋದಕ್ಕೆ ಹೊರಟಿದ್ದೆವು. ಮಧ್ಯದಲ್ಲೆ ಇಂತಹ ಅನರ್ಥ. ನಮಗೆ ತಿಳಿಯದೆ ಎಲ್ಲಿವೂ ಜರುಗಿದೆ ಅದಕ್ಕಾಗಿ ಕ್ಷಮೆ ಇರಲಿ ಈ ಅಲ್ಪನ ಮೇಲೆ.

ಅಫ್ಜಲ್‌ಖಾನ್ : ನಿಂದುಕೆ ನಾಮ್ ಭೀಮನಾಯಕ ಅಲ್ವಾ,

ಭೀಮ : ಹೌದು ಜನಾಬ್, ನನ್ನ ತಂದೆ ಹೈದ್ರಾಬಾದ್ ಕಡೆಯಿಂದ ವ್ಯಾಪಾರಕ್ಕಾಗಿ ವಲಸೆ ಬಂದಿದ್ದಾರೆ. ಉತ್ತರದಲ್ಲಿ ವ್ಯಾಪಾರಕ್ಕೆ ಕೆಂಪು ಜನರ ಅಡ್ಡಿ ಆತಂಕಗಳಿವೆ. ನಿಜಾಮರಿಗೆ ದೊಡ್ಡ ವ್ಯಾಪಾರಿಗಳು ಇದ್ದಾರೆ, ನಮ್ಮಂತ ಮಧ್ಯಮದವರಿಗೆ ವ್ಯಾಪಾರ ತೊಂದರೆಯಾಗಿದೆ. ಬಾಪು ನಾನೂನಾಯ್ಕ ಪರಿಷಾನ್ ಆಗಿದ್ದಾರೆ. ಅಂತಹದರಲ್ಲಿ ಈ ಘಟನೆ ಬೇರೆ ಘಟಿಸಿತು.

ಅಫ್ಜಲ್‌ಖಾನ್ : ಭೀಮ, ಆತಂಕ ಬೇಡ. ತಪ್ಪು ನನ್ನದೆ ಶಕ್ತಿಯ ಅಹಾಂನಿಂದ ನಿಮ್ಮ ಎತ್ತುಗಳನ್ನು ಆಗ್ವಾ ಮಾಡೋದಕ್ಕೆ ಹೇಳಿದ್ದೆ. ಚಿಕ್ಕವನಾದರೂ ಧೈರ್ಯದಿಂದ ನಮ್ಮನು ಎದುರಿಸಿದೆ. ನಿನ್ನ ಧೈರ್ಯಕ್ಕೆ, ಶಕ್ತಿಗೆ ಸಲಾಂ... ಭೀಮ ನೀನು ಅಸಾಧಾರಣ ಯೋಧ ಒಳ್ಳೆಯದಾಗಲಿ. (ನಿರ್ಗಮಿಸುವನು)

* * *

ದೃಶ್ಯ ೧

ಸನ್ನಿವೇಶ ೨

ಜೇಮು : ವ್ವಾ, ಭೀಮ ನಿನ್ನ ಹೆತ್ತ ತಾಯಿ ಧನ್ಯ. ಹದಿನಾರನೇ ವಯಸ್ಸಿಗೆ ಇಷ್ಟೊಂದು ಧೈರ್ಯ, ಬುದ್ಧಿವಂತಿಕೆ. ನೀನು ನನ್ನ ಅಕ್ಕನ ಮಗ ಎನ್ನುವುದಕ್ಕೆ ಹೆಮ್ಮೆಯಾಗುತ್ತೆ ನನಗೆ ಇಪ್ಪತ್ತು ಜನರನ್ನ ಯಾವುದೇ ಅಸ್ತ್ರವಿಲ್ಲದೆ ಎದುರಿಸಿದೆ. ನೀನು ಸಾಧಾರಣ ಬಲಶಾಲಿ ಅಲ್ಲ.

ಭೀಮ : ಅದೇನೊ ಸರಿಮಾಮ, ಬಾದಷರ ಜೊತೆಗೆ ವ್ಯಾಪಾರ ಕುದುರದಿದ್ದರೆ ಅಪ್ಪ...ಎಂಥ ಕೆಲಸ ಆಯ್ತು. ನನಗೆ ಮೊದಲೆ ಟಿಪ್ಪುಸುಲ್ತಾನ್‌ರ ಸೇನಾಧಿಪತಿ ಅಂತ ಹೇಳಬಾರದೆ. ಅವರಿಗೆ ಗೌರವದಿಂದಲೆ ಹೇಳುತ್ತಿದೆ. ಈಗ.... ಏನಾಗುತ್ತೊ.

ಜೇಮು : ಅರೇ ಬೇಟ, ಇದ್ರಲ್ಲಿ ನಮ್ಮದೇನು ತಪ್ಪಿಲ್ಲಾ, ಸುಮ್ಮನೆ ಕಾಡುದಾರಿಗುಂಟ ಹೊರಟಿದ್ದ ಎತ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿದವರು ಬಾದಷನ ಸೈನಿಕರೆ. ಅವರನ್ನ ಕಂಡು ನಾವೆ ಕಕ್ಕಾ ಬಿಕ್ಕಿ ಆದೇವು. ಸಾಲದಕ್ಕೆ ಸುಮ್ಮನೆ ಬಂದೇ ಬಿಟ್ವು ಹೊಡೆಯಲು ಸುರು ಮಾಡಿದರು.

ಭೀಮ : ಆದ್ರೂ, ಅವರು ದೊಡ್ಡವರು. ಆಯ್ತು, ಅವರಿಲ್ಲಾಂದ್ರೆ ಮತ್ತೆ ಬೇರೆ ಕಡೆಗೆ ನೋಡುವ ಬಾಪುಗೆ ಮಾತ್ರ ಸುದ್ದಿ ತಿಳಿಯಬಾರದು. ಏಯ್, ಚತ್ರ್ಯನಾಯ್ಕ, ಬದಿಯಾ, ಖೇಮ ಬಾಪುಗ ಹೋಗಿ ಸುದ್ದಿ ಏನಾದ್ರು ತಿಳಿಸಿದ್ರಿ ನಿಮ್ಮನ್ನ ಅಟ್ಟಾಡಿಸಿ ಹೊಡಿತೀನಿ. ಎಲ್ಲೂ ವ್ಯಾಪಾರ ಇಲ್ಲದೆ ಬಹಳ ಪರಿಷಾನ್ ಆಗಿದ್ದಾರೆ. ಅವರಿಗೇನಾದ್ರು

ಈ ಮುಸಿಬತ್ ಬಗ್ಗೆ ತಿಳಿತು ಅಂದ್ರೆ. ಏನಾಗುತ್ತೊ ದೇವರಿಗೆ ಗೊತ್ತು.

ಚತ್ರ್ಯಾನಾಯ್ಕ : ಇಲ್ಲ ಭೀಮ, ನಾವು ಯಾರು ಹೇಳಲ್ಲ, ನಾನೂ ದೊಡಪ್ಪ ಈಗಾಗಲೇ ಚಿಂತಿತರಾಗಿದ್ದಾರೆ ಅದರಲ್ಲಿ ಈ ಮುಸಿಬತ್ ಬಗ್ಗೆ ಗೊತ್ತಾದರೆ ಅಷ್ಟೇ. ನಿನ್ನನ್ನ ಮುಸಿಬತ್ತಿಗೆ ಹಾಕ್ತಿ ವಾ ನಾವು. ಯಾವತ್ತು ಹಾಗೆ ಯೋಚನೆ ಮಾಡಬೇಡಾ.

ಜೇಮು : ನಾನಂತು ಹೆದರಿ ದೋತ್ರದಲ್ಲೇ ಉಚ್ಚಿ ಹೊಯ್ಕೊಳ್ಳೋ ಹಂಗಾಗಿತ್ತು, ಸೈನಿಕರು ಅಂತ ಕೇಳಿ, ಅವರವ್ವರ ಭಾರಿ ಹೊಡಿತಾರ ಸೈನಿಕರು, ಮನಸ್ಸು ಬಂದಂತೆ ಜೀವಾನ ತಗತಾರ ಏನಪ್ಪ... ಮುದಕ್ರು, ಮುಂಡ್ರು ಅಂತ ಒಂದು ನೋಡಾಕಿಲ್ಲ ಬಿಗಿಯೋದೊಂದೆ. ನೋಡಿಲ್ಲಿ ಹೆಂಗ ಹೊಡದಾರಂತ.

ಭೀಮ : ಜೇಮುಮಾಮ ನಾ ಅದಿನಲ್ಲ ನೀವ್ಯಾರು ಹೆದರಾಕ ಹೋಗಬ್ಯಾಡ್ರಿ... ಈ ಘಟನೆ ಒಳ್ಳೆಯದಾಯ್ತು ಸರಿ, ಇಲ್ಲಾಂದ್ರೆ.

ಬದಿಯಾ : (ವಯಸ್ಸಾದವನು, ಸ್ವಲ್ಪ ಕುಂಟುತ್ತಾ) ಬೇಟಾ ನಿನ್ನಂತ ಶೂರ ಇರೋವರಿಗೆ ಹೆದರಿಕೆ ಊ ಹೂಂ... (ಅಂದವನೆ ಕೈಯಲ್ಲಿದ್ದ ಕೋಲನ್ನ ನಿವಾಳಿಸಿ ಎಸೆಯುವನು) ದುಷ್ಟ ಶಕ್ತಿ ಕಣ್ಣು ನಿನಮ್ಯಾಲ ಬೀಳಬಾರದು. ನೀನು ನೂರಕಾಲ ಬದಕಬೇಕು.

ಭೀಮ : ಎತ್ತುಗಳನ್ನು ಹೊಡೆಯಲು ಏನ್ಮಾಡ್ತಿರಾ, ಇಂತ ಒಳ್ಳೆ ಕೋಲು... ಛೆ ಬಿಸಾಡಬಾರದಿತ್ತು.

ಬದಿಯಾ : ಅರೆ ನಿನ್ನಂತ ಹೊನಾರ್ ಮಗನಿಗಿಂತ ಈ ಕೋಲು ದೊಡ್ಡದ. ಇಂತ ನೂರ ಕೋಲು ಕಡಿಬಹುದು. ನಿನ್ನಂತ ಏಕ್ ಬೇಟಾ ಪಡಿಯಾಕ ಆಗೋದಿಲ್ಲಾ. ನಿನ್ನ ಹಡೆದ ಸಾಮಣಿ ಘೂಪಿ ಧನ್ಯಳು. ಅದೇನು ಧೈರ್ಯ, ಗಾಳಿನುಗ್ಗದಂಗೆ ನುಗ್ಗಿ ಇಪ್ಪತ್ತು ಜನರನ್ನ ಚಿತ್ ಮಾಡಿದೆ ಗಂಡುಗಲಿ ಕಣಪ್ಪ.

ಭೀಮ : ಹೊತ್ತು ನೆತ್ತಿ ಮೇಲೆ ಬಂತು ಬಾಟಿಗೀಟಿ ತಿಂತಿರೋ ಇಲ್ಲ ನನಗಂತು ಹೊಟ್ಟೆ ಹಸಿದು ಚುರ್ ಅಂತೈತೆ. ಎತ್ತುಗಳು ನೀರಡಸಿರ ಬೇಕು ಹತ್ತಿರ ಹಳಕ್ಕೆ ಹೊಡಿರಿ. ಇನ್ನೂ ಮುಂದೆ ನಮ್ಮ ತಂಟೆಗೆ ಯಾರು ಬರುವುದಿಲ್ಲ.

* * *

ದೃಶ್ಯ ೧

ಸನ್ನಿವೇಶ ೩

ಬಾದ್‌ಷ ಟಿಪ್ಪು: ಅಫ್ಜಲ್‌ಖಾನ್, ಮುಂದಿನ ದಾರಿ ಸುಗಮವೆ ಕೋಯಿ ತಕಲಿಪ್... ಯಾಕೆ ನಾವು ನಿಧಾನವಾಗಿ ಹೋಗುತ್ತಿದ್ದೇವೆ.

ಅಫ್ಜಲ್‌ಖಾನ್ : ಹೂಜೂರ್.. ಯಾವ ತಕಲಿಪ್ ಇಲ್ಲಾ... ಆದರೆ...

ಬಾದಷ ಟಿಪ್ಪು : ಕ್ಯಾ.. ಆದರೆ.. ಜಾನ್ವರ್ ಆದ್ಮಿ... ಏನಿದೆ, ಟಿಪ್ಪು ಅಂದರೆ ಸುತ್ತ ರಾಜ್ಯಗಳೇ ನಡಗುವಾಗ ನಮ್ಮ ಪ್ರಯಾಣದಲ್ಲಿ ಅಡ್ಡಿಪಡಿಸುವ... ಧೈರ್ಯ ಬ್ರಿಟೀಷರಿಗೆ ಬಿಟ್ಟರೆ ಇನ್ಯಾರಿಗಿದೆ.

ಅಫ್ಜಲ್‌ಖಾನ್ : ಬಾದ್‌ಷ.. ಬೆಂಕಿಯಂತೆ ನಿಗಿ ನಿಗಿ ಉರಿಯುತ್ತಿರು ಸೂರ್ಯನ ಎದುರಿಗೆ ಹುಲ್ಲಿನ ಸಾಹಸ ಸಾಧ್ಯವೆ. ಕರ್ನಾಟಕ, ತಮಿಳು ದೇಶ, ಮಲೆಯಾಳ ನಾಡುಗಳನ್ನ ಕೆಚ್ಚೆದೆಯಿಂದ ಹೋರಾಡಿ ಗೆದ್ದ ಕಲಿ ನೀವು. ನಿಮ್ಮನ್ನು ಎದುರಿಸುವ ತಾಕತ್ತು ಊ ಹೂಂ.... ಯಾರಿಗೂ ಇಲ್ಲಾ. ಆದರೆ ಬಾತ್ ಒ ನಹಿ....

ಬಾದ್‌ಷ ಟಿಪ್ಪು: ಅಫ್ಜಲ್ ಚಾಚ, ನಮಗೆ ಶತ್ರುಗಳು ಇಲ್ಲಾಂತಲ್ಲಾ ಇದ್ದಾರೆ, ಆದರೆ ಅವರಿಗೆ ಟಿಪ್ಪು ಕೆ ತಾಕತ್ ಮಾಲೂಮ್ ಐತೆ. ಆದರೂ.... ಬಾತ್ ಕ್ಯಾ ಹೈ.. ಯಾಕಿಂಗೆ ಒಗಟಿನಂಗೆ ಹೇಳ್ತಿದ್ದಿಯಾ ಸರಿಯಾಗಿ ಬೋಲೊ.

ಅಫ್ಜಲ್‌ಖಾನ್ : ಹೂಜೂರ್.. ಜಂಗಲ್‌ನಲ್ಲಿ, ಬಂಜಾರಾ ವ್ಯಾಪಾರಿಗಳು ತಮ್ಮ ಎತ್ತುಗಳ ಮೇಲೆ ಧಾನ್ಯ ಹೇರ್ಕೊಂಡು ಹೋಗ್ತಿದ್ದರು ಬಡಪಾಯಿಗಳು, ಎತ್ತುಗಳ ದಂಡು ದೊಡ್ಡದಿದ್ದರಿಂದ ನಮ್ಮ ಸೈನಿಕರು ಸಲ್ಪ ನಿಧಾನವಾಗಿ ಸಾಗುತ್ತಿದ್ದು ಸ್ವಲ್ಪ

ಬಾದ್‌ಷ ಟಿಪ್ಪು: ನಮ್ಮ ಸೈನಿಕರು, ಏನಾಯ್ತು ಆಮೇಲೆ

ಅಫ್ಜಲ್‌ಖಾನ್ : ಅಡ್ಡಗಟ್ಟಿ ತಮ್ಮ ಎದುರಿಗೆ ಹಾಜರ್ ಪಡಿಸಲು ನೋಡಿದ್ರೆ ಭೀಮ... ಎಂಥ ಧೈರ್ಯ, ಮೈಯೊಳಗೆ ಹುಲಿಯ ರೋಷ ಕಣ್ಣುಗಳಲ್ಲಿ ತೇಜಸ್ಸು, ಮುಖದಲ್ಲಿ ಮೂಡುತ್ತಿರುವ ಮೀಸೆ.

ಬಾದ್‌ಷ ಟಿಪ್ಪು: ಯಾರು ಭೀಮ... ಕೊನ್... ಕೊನ್?

ಅಫ್ಜಲ್‌ಖಾನ್ : ಹದಿನಾರು ವರ್ಷದ ಯುವಕ ಹೂಜೂರ್ ಇಪ್ಪತ್ತು ಜನ ಸೈನಿಕರನ್ನು ಕ್ಷಣಾರ್ಧದಲ್ಲೇ ಹೊಡೆದುರುಳಿಸಿದ. ಅವನು ಯುದ್ಧ ಕಲೆ ಕಲಿತರೆ ಒಳ್ಳೆಯ ಸೇನಾಧಿಪತಿಯಾಗಬಲ್ಲ.

ಟಿಪ್ಪುಸುಲ್ತಾನ್ : ಕ್ಯಾ.. ಒಬ್ಬ ಸಾಮಾನ್ಯ ಬಂಜಾರ ಹುಡುಗ, ನುರಿತ ನಮ್ಮ ಸೈನ್ಯವನ್ನು ಧೂಳಿಪಟ, ಅದರಲ್ಲೂ ಅಫ್ಜಲ್‌ಖಾನ್ ನಿಮ್ಮ ನೇತೃತ್ವದಲ್ಲಿ.. ಹಮ್ಕೊ ಅಜೀಬ್ ಲಗರಹಾಹೈ... ಟಿಪ್ಪುಕಾ ಫೌಜ್ ಸೈನ್ಯಾ ಕಮ್ಜೋರರ್ ಹೋಗಯಿ ಕ್ಯಾ.? ಬುಲಾವ್ ಉಸ್ಕೊ ನಾವು ನೋಡಬೇಕು.

ಅಫ್ಜಲ್‌ಖಾನ್ : ಯುದ್ಧಕಲೆ ಗೊತ್ತಿಲ್ಲದೆ ದನ ಮೇಯಿಸುವ ಕೋಲಿನಿಂದಲೆ ನಮ್ಮವರನ್ನ ಹೊಡೆದುರುಳಿಸಿದ. ಓ, ಕಾಮ್ ಕಾ ಆದ್ಮಿ ಹೈ ಸುಲ್ತಾನ್. ಅಪರೂಪದ ವಜ್ರ ತಮ್ಮಬಳಿ ಇರಬೇಕು.

ಟಿಪ್ಪುಸುಲ್ತಾನ್ : ಅಫ್ಜಲ್‌ಚಾಚ, ಒಬ್ಬ ಲಂಬಾಣಿ ಹುಡುಗ ನಾನು ಅವನನ್ನ ನೋಡಬೇಕು. ನೀವು ಹೇಳುವುದನ್ನು ಕೇಳಿದರೆ ಅವನೊಬ್ಬ ಅಪ್ರತಿಮ ಶೂರ. ಹಮಕೋ ದೇಕನಾ ಹೈ ಚಾಚ. ಈ ಗಿಂಧಿಗಲೆ ಸೈನಿಕರನ್ನು ಕಳುಹಿಸಿ ಅವನನ್ನು ರಾಜ ಮರ್ಯಾದೆಯಿಂದ ಕರೆದು ತರುವಂತೆ ಆಜ್ಞೆ ಮಾಡಿ.

ಅಫ್ಜಲ್‌ಖಾನ್ : ತಮ್ಮ ಅಪ್ಪಣೆ ಮಹಾಪ್ರಭು, ತಮ್ಮ ಇಚ್ಛೆ ಆದರೆ ಹೂಜೂರ್, ನಾನೆ ಹೋಗಿ ಬರುತ್ತೇನೆ.

ಟಿಪ್ಪುಸುಲ್ತಾನ್ : ಅವನು? ಏನಾದರೂ ಬ್ರಿಟೀಷ್ ಕಾ ಆದ್ಮಿತೊ ನಹಿ ನಾ.

ಅಫ್ಜಲ್‌ಖಾನ್ : ಅವರು ತಮ್ಮ ಹತ್ತಿರ ವ್ಯಾಪಾರ ಮಾಡಲು ಶ್ರೀರಂಗಪಟ್ಟಣದ ಕಡೆಗೆ ಪ್ರಯಾಣ ಬೆಳೆಸಿರುವುದಾಗಿ ತಿಳಿಸಿದರು. ನೋಡಿದರೆ ಹಾಗೆ ಅನಿಸುವುದಿಲ್ಲಾ ಬಾದ್‌ಷಾ. ಅಲ್ಲದೆ ಅವರಿಗೆ ಬ್ರಿಟೀಷರನ್ನ ಕಂಡರೆ ಅಷ್ಟಕಷ್ಟೆ.

ಟಿಪ್ಪುಸುಲ್ತಾನ್ : ಕೆಂಪು ಜನರು ನಮ್ಮ ಜೀನಾಮುಸ್ಕಿಲ್ ಮಾಡಿರುವ ವೇಳೆಗೆ ಸರಿಯಾಗಿ ಆಹಾರ ಧಾನ್ಯದ ಅವಶ್ಯಕತೆ ಇದೆ. ಆಗಬಹುದು

ಭೆಟ್ಟಿ ಮಾಡಿಸಿ. ನಮ್ಮ ಅರ್ದಮುಸಿಬತ್ ಕಡಿಮೆಯಾದೀತು.

ಅಫ್ಜಲ್‌ಖಾನ್ : ಭೀಮನಾಯ್ಕ ನಂಬಿಗಸ್ಥ ಹೂಜೂರ್, ಅವನ ವಿನಯತೆ ಧೈರ್ಯ, ಕಾರ್ಯಕ್ಷಮತೆ ತಮಗೆ ಪಸಂದ ಆಗುತ್ತೆ. ವಯಸ್ಸು ಚಿಕ್ಕದಾದರು ಬುದ್ಧಿ ಚುರುಕಿದೆ.

ಟಿಪ್ಪುಸುಲ್ತಾನ್ : ನಮ್ಮಲ್ಲಿ ನಡೆದ ಈ ಸಂಗತಿಯನ್ನು ಯಾರಿಗೂ ತಿಳಿಯದಂತೆ ಗೌಪ್ಯತೆಯನ್ನು ಕಾಪಾಡಿ. ಯಾಕಂದ್ರೆ ನಮ್ಮೊಳಗಿನ ಶತ್ರುಗಳೇ ನಮ್ಮನ್ನ ಕೊಲ್ಲುತ್ತಾರೆ. ಇಂತಹ ಓತ ಶತ್ರುಗಳಿಂದ ಜೋಪಾನವಾಗಿರಬೇಕು. ಹಾಂ, ಅವನು ಬರುವುದು ಗೌಪ್ಯವಾಗಿರಲಿ.

ಅಫ್ಜಲ್‌ಖಾನ್ : ಹೂಜೂರ್, ತಾವು ಯಾವ ಗಳಿಗೆಯಲ್ಲಿ ನನ್ನ ತಲೆಯನ್ನ ಬೇಕಾದರೂ ಕೇಳಿದರೆ ಶ್ರೀರಂಗಪಟ್ಟಣ ರಾಜ್ಯಕ್ಕೆ ಅರ್ಪಿಸಲು ಸಿದ್ಧ ಈ ಗುಲಾಮ. ತಾವು ನಂಬಿಕೆಯಿಂದ ಹೇಳಿದ ಮಾತುಗಳು ಈ ಜುಬಾನ್‌ನಿಂದ ಪುನರುಚ್ಚಾರಗೊಳ್ಳುವುದಿಲ್ಲ. ಅವು ನನ್ನ ಸಾವಿನೊಂದಿಗೆ ನಶಿಸಿಹೋಗಿ ಬಿಡುತ್ತವೆ. ಅಲ್ಲಾ ಹಪಿಜ್ ಹೂಜೂರ್

ಟಿಪ್ಪುಸುಲ್ತಾನ್ : ಖುದಾ ಹಪೀಜ್ ಅಫ್ಜಲ್ ಚಾಚ. ಯಾ ಅಲ್ಲಾಖಾನ್ ಚಾಚರಂತಹ ನಿಯತ್ತಿನ ಜನ ಇನ್ನೂ ಸ್ವಲ್ಪ ಇದಿದ್ದರೆ, ನಮಗೆ ಈ ದಿನ ಬರುತ್ತಿರಲಿಲ್ಲಾ.

* * *

ದೃಶ್ಯ ೧

ಸನ್ನಿವೇಶ ೪

ನಾನುಸಾದ್ : ನಮ್ಮ ಕೆಲಸ ಸಂಪೂರ್ಣಗೊಳ್ಳುವ ಮೊದಲೆ ಗಂಡಾಂತರ ಸೇನಾದಿಪತಿ ಅಫ್ಜಲ್‌ಖಾನ್, ದೊರೆಯ ಹತ್ತಿರ ಹೋಗಿ ನಮ್ಮ ಬಗ್ಗೆ ಏನಾದರು ಕೆಟ್ಟದ್ದನ್ನ ಹೇಳಿದರೆ ನಮ್ಮ ಕತೆ ಮುಗಿದಂತೆಯೇ.

ಜೇಮು : ಇದ್ದಕ್ಕಿದ್ದಂತೆ ನಮ್ಮ ಮೇಲೆ ಸುಕಾಸುಮ್ಮನೆ ಆಕ್ರಮಣ ಮಾಡಿದರೆ ಏನು ಮಾಡೋದು ಹೇಳು. ನಾವೇನುಬೇಕಂತ ಅವರ ಹತ್ತಿರ ಹೋಗಿರಲಿಲ್ಲ. ನಮ್ಮ ಪಾಡಿಗೆ ನಾವು ಎತ್ತುಗಳನ್ನು ಹೊಡೆದುಕೊಂಡು ಹೋಗುತ್ತಿದ್ದರೆ, ಅಚಾನಕ್ ದಾಳಿ ಮಾಡಿದರು. ಏಕಾಎಕಿ ಹೊಡೆಯ ತೊಡಗಿದರು ಭಾವ.

ಭೀಮ : ಅಪ್ಪಾ ನೀವು ಸುಮ್ಮನೆ ಇಲ್ಲದ್ದನ್ನ ತಲೆಗೆ ಹಚ್ಚಿಕೊಂಡು ಚಿಂತೆ ಮಾಡಬೇಡಿ. ನಿಮ್ಮ ಆರೋಗ್ಯ ಸರಿಯಿಲ್ಲ. ಕ್ಷೌರಿಕ ಬೋಳಿಸಿದ ಕೂದಲು ಮುಂದೆ ಬೀಳುತ್ತೆ. ಯೋಚನೆ ಬಿಡಿ ದೀಪಾವಳಿ ಅಮವಾಸ್ಯೆ ಬರ್ತಿದೆ, ಗುಳೆ ಬಂದವರಿಗೆಲ್ಲಾ ಹೇಳಿ, ಗುಡಾರ ಇಲ್ಲೇ ಹೂಡೊದಕ್ಕೆ. ಬಾದ್‌ಷಾ ಎಲ್ಲಾ ವಿಷಯವನ್ನು ಕೂಲಂಕುಷವಾಗಿ ನೋಡುತ್ತಾರೆ. ಯಾವುದು ಸರಿ ತಪ್ಪು ಎಂಬುದನ್ನು ತರ್ಕ ಮಾಡುತ್ತಾರೆ. ಹೆಚ್ಚು ಯೋಚನೆ ಮಾಡಬೇಡಿ.

ಜೇಮು : ನೀನು ಇನ್ನೂ ಹುಡುಗ, ಇಂತಹ ಎಷ್ಟು ಸನ್ನಿವೇಶಗಳನ್ನು ಭಾವ ಎದುರಿಸಿಲ್ಲ. ಪಾಳೇಗಾರರು, ಕೆಂಪುಮಂದಿ ಇಂತಹ ರಾಜರು ಒಂದು ಕಡೀಗೆ ಆದ್ರೆ, ಕಳ್ಳರು, ದರೋಡೆಕೋರರು ವಿದ್ರೋಹಿಗಳು ಹೀಗೆ ನಾನಾ ನಮೂನಿ ಜನರನ್ನು ಎದುರಿಸಿ

ಹೋರಾಡಿ ಇಲ್ಲಿಯವರೆಗೆ ಬಂದೀವಿ. ಇಂತಹ ಇಳಿವಯಸ್ಸಿನಲ್ಲಿ ಏನಾದರೂ ಹೆಚ್ಚು ಕಡಿಮೆ ಯಾದರೆ? ಅವರ ಕಳಕಳಿ ಸರಿಯಾಗಿದೆ ಭೀಮ. ಕಾಲ ಪರ್ಯಟನೆ ಗೊಳ್ಳುತ್ತಿದೆ. ಇಲ್ಲಿ ಯಾರು ಮಿತ್ರ. ಯಾರು ಶತ್ರು ಗೊತ್ತೆ ಆಗುವುದಿಲ್ಲ. ನಾವು ಮೈ ತುಂಬಾ ಕಣ್ಣುಗಳನ್ನ ಇಟ್ಟುಕೊಳ್ಳಬೇಕು.

ನಾನುಸಾದ್ : ಅಂತಹವರನ್ನು ಎದುರಿಸುವುದು ಬಹಳ ಸುಲಭ, ಆದರೆ ಜನಾಬ್ ಟಿಪ್ಪುಸುಲ್ತಾನ್ ಸ್ವಲ್ಪ ಕಷ್ಟ. ಹೊರಗಿನಿಂದ ಬಂದ ಕೆಂಪುಮಂದಿಯನ್ನು ಓಡಿಸುವುದಕ್ಕೆ ಛಲದಂಕ ಮಲ್ಲನಂತೆ ತೊಡೆ ತಟ್ಟಿ ನಿಂತಾರಂತೆ. ಒಳ್ಳೆಯದನ್ನ ಆಲೋಚನೆ ಮಾಡಿದರೆ ಸರಿ. ಕೆಟ್ಟದು ತಲೆಗೆ ಬಂತೊ ದಂಡಿಸುವುದಂತು ದಿಟವೆ. ಆಗಲಿ ಆ ಸೇವಾಭಾಯ ಮರಿಯಾಯಾಡಿ ಮಾಡಿದಂತಾಗುತ್ತದೆ.

ಭೀಮ : ಬಾಪೂ, ಅಂತಹದ್ದೇನು ಆಗಬಾರದ್ದು ಆಗಲ್ಲ. ಇದರಲ್ಲಿ ನಮ್ಮ ತಪ್ಪಿಲ್ಲ, ಸೈನಿಕರು ಓಡಿ ಹೊರಟ ಸಂದರ್ಭದಲ್ಲಿ ಅಫ್ಜಲ್‌ಖಾನ್‌ಗೆ ಹೇಳಿದ್ದೇನೆ. ನಾವು ಶ್ರೀರಂಗಪಟ್ಟಣದ ಕಡೆಗೆ ವ್ಯಾಪಾರಕ್ಕೆ ಹೊರಟಿದ್ದೇವೆ ಎಂದು. ನೀವು ಚಿಂತೆಬಿಡಿ. ಆಗುವುದೆಲ್ಲಾ ಒಳ್ಳೆಯದೆ ಆಗುತ್ತದೆ.

ನಾನುಸಾದ್ : ಬೇಟಾ, ಅವರು ಮಹಾರಾಜರು, ಅವರ ವಿಚಾರಲಹರಿ ಸ್ನೇಹದ ಕಡೆಗೆ ತಿರುಗಿದರೆ ಒಳ್ಳೆಯದು. ಶತ್ರುತ್ವದ ಕಡೆಗೆ ತಿರುಗಿತೋ ನಮಗೆ ಅಪಾಯ ಅಷ್ಟೇ. ನಾವು ಬರಿ ವ್ಯಾಪಾರಿಗಳು ಅವರು ಸಾಮ್ರಾಜ್ಯವನ್ನ ಆಳುವವರು.

ಜೇಮು : ನಾವೇನು ಅವರ ವಿರೋಧಿಗಳಾಗಲಿ, ಅವರಿಗೆ ತೊಂದರೆ ಕೊಡುವ ಆಲೋಚನೆ ಉಳ್ಳವರಲ್ಲ. ಸಾಲದಕ್ಕೆ ನಾವು ಅವರ ಸ್ನೇಹಹಸ್ತಕ್ಕಾಗಿ ಬಂದವರು. ಭಾವ ನೀನು ಅಪ್ಪಣೆ ಕೊಟ್ಟರೆ ನಾನು ಭೀಮ ಹೋಗಿ ಬಾದಷರನ್ನ ಭೇಟಿಯಾಗಿ ಅವರ ಅನುಮಾನಗಳನ್ನು ದೂರಮಾಡಿ ಬರೋಣವೆ.

ನಾನುಸಾದ್ : ಬೇಡ ಜೇಮು, ನನಗಿರುವವನು ಒಬ್ಬನೆ ಮಗ ಅವನನ್ನ ಹುಲಿಯ ಬೋನಿಗೆ ತಳ್ಳೋದಕ್ಕೆ ನನಗಿಷ್ಟವಿಲ್ಲ.

ಜೇಮು : ನಿನ್ನ ಮಗನ ಬಗ್ಗೆ ನಿನಗೆ ನಂಬಿಕೆ ಇಲ್ವಾ. ಅವನು ಸಿಂಹ ಕಾಡಿನೊಳಗೆ ಒಮ್ಮೆ ಘರ್ಜಿಸಿದನೆಂದರೆ ಆನೆ, ಹುಲಿಗಳ ಎದಿ ನಡಗುತ್ತೆ. ಗೊತ್ತಿಲ್ಲದೆ ಕ್ಷಣಮಾತ್ರದಲ್ಲಿ ಅಫ್ಜಲ್ ಮತ್ತು ಸೈನ್ಯವನ್ನು ದಿವಾಳಿ ಎಬ್ಬಿಸಿದ್ದ. ಅವನ ಬಗ್ಗೆ ಅನುಮಾನ ಬೇಡ.

ನಾನುಸಾದ್ : ಚವ್ಹಾಣ್, ನೀನು ಸೋದರಮಾವನೂ ಹೌದು, ಅಕ್ಕನ ಗಂಡ ಅವನನ್ನ ಸರಿಯಾಗಿ ಬೆಳಸಿ ಶಕ್ತಿಶಾಲಿ ಮಾಡುವ ಜವಾಬ್ದಾರಿ ನಿನಗೆ ಬಿಟ್ಟಿದ್ದೆ. ಕೇವಲ ತೋಳ್ಬಲದಿಂದೇನಾಗದು ಬುದ್ಧಿಬಲ ಕೂಡ ಬೇಕು. ಎದುರಾಳಿ ಯಾರು? ಅವನ ಆಲೋಚನೆ ಏನು? ಯೋಚಿಸಿ ತನ್ನ ನಡೆಯನ ನಡೆಯಬೇಕು.

ಜೇಮು : ಭಾವ, ನೀನು ಅಂದುಕೊಂಡಷ್ಟು ಸಣ್ಣವನಲ್ಲ ನನ್ನ ಅಳಿಯ ಈಗಾಗಲೇ ಯುದ್ಧಜ್ಞಾನ, ವ್ಯವಹಾರಜ್ಞಾನ ಅಷ್ಟೇ ಅಲ್ಲ ಜನರೊಂದಿಗೆ ಸಂಪರ್ಕಜ್ಞಾನವನ್ನು ಹೊಂದಿದ್ದಾನೆ.

ರಾಮಿಬಾಯಿ : (ಟೆಂಟಿನಿಂದ ಹೊರಗೆ ಬಂದು) ಏನಾಯ್ತು, ಅಳಿಯಮಾವ ಘನಗೋರ ವಿಚಾರದಲ್ಲಿ ಮುಳುಗಿರುವ ಹಾಗಿದೆ? ಯಾರಾದರೂ ದಾಳಿ ಮಾಡಿದರ. ಇಲ್ಲಾ ಯಾವುದಾದರೂ ಜಾನ್‌ವರ ತೊಂದರೆ ಮಾಡ್ತಿದೆಯಾ? ನನ್ನ ಮಗ ಭೀಮನಿಗೆ ಹೇಳಿ.

ನಾನೂಸಾದ್ : ಇಲ್ಲರಾಮಿ ಅಂತಹದ್ದೇನು ಇಲ್ಲ. ಶ್ರೀರಂಗಪಟ್ಟಣದ ಬಾದ್‌ಷ ಟಿಪ್ಪುಸುಲ್ತಾನ್ ಬಳ್ಳಾರಿ ಕೋಟೆಗೆ ಹೊರಟಿದ್ದಾರೆ.

ರಾಮಿಬಾಯಿ : ನಾವು ಆ ಕಡೆಗೆ ಹೋಗ್ತಾ ಇದ್ರೆ, ಬಾದ್‌ಷ ಈ ಕಡೆಗೆ ನೀವು ಏನಾರು ಮಾಡಬಾರದೆ.

ನಾನೂಸಾದ್ : ಅದೇ ದೊಡ್ಡ ಸಮಸ್ಯೆ ಆಗಿದೆ. ನಮ್ಮ ಎತ್ತುಗಳನ್ನ ಬಾದಷ ಅವರ ಸೈನ್ಯ ಮುತ್ತಿಗೆ ಹಾಕಿದೆ. ಭೀಮಸೈನ್ಯವನ್ನು ಹಿಮ್ಮೆಟ್ಟಿದ್ದಾನೆ.

ರಾಮಿಬಾಯಿ : ಏ.. ಭಗವಾನ್, ಯಾಕಿಂಗೆ ಮಾಡಿದೆ. ಪನಾಡ ಪಕ್ಷಿಗಳಂಗೆ ಅಲೆಯುವ ನಮಗೆ ಮುಂದಿನ ದಾರಿ ತೋರಿಸು. (ಅನುಮಾನದಿಂದ) ಬಾದಷ ಹುಕುಮತ್, ಕೆಂಡಮಂಡಲವಾಗಿರಬೇಕು ನೀವೆ ಯಾಕೆ ಹೋಗಿ ಬಾದಷರನ್ನು ಭೇಟಿಯಾಗಿ ಕ್ಷಮೆ ಕೇಳಬಾರದು? ಏನೋ ಸಣ್ಣಮಗು ಗೊತ್ತಿಲ್ಲದೆ ತಪ್ಪು ಆಗಿದೆ. ಬಾದ್‌ಷ ಹೂಜೂರ್ ಕ್ಷಮಿಸಿ ಅಂತ ಪಾದಕ್ಕೆ ಬಿದ್ದು ಬರಬಾರದೆ.

ನಾನೂಸಾದ್ : ಅದನ್ನೇ ಯೋಚನೆ ಮಾಡ್ತಿದ್ದೇವೆ, ನಾಳೆ ಮುಂಜಾನೆವರೆಗೆ ಕಾದು, ನಾಳೆ ಹೊತ್ತಾರೆ ಬಾದಷರನ್ನು ಭೇಟಿಯಾಗಿ ನಡೆದದ್ದನ್ನು ತಿಳಿಸದರಾಗುತ್ತೆ. ಆ ಮೇಲೆ ದೈ ವಿಚ್ಛೆ ಆದಂಗೆ ಆಗಲಿ ಇನ್ನೇನು ಮಾಡಲು ಸಾಧ್ಯ.

ಜೇಮು : ಅಫ್ಜಲ್‌ಖಾನ್ ಸಾಹೇಬ ಹೇಗೆ ಹೇಳುತ್ತಾನೋ ಅದರ ಮೇಲೆ ನಮ್ಮ ವ್ಯವಹಾರದ ದಾರಿ ನಿರ್ಭರವಾಗಿದೆ. ಭಾವ ನಾಕಂಡ ಹಾಗೆ

ಆತ ಒಳ್ಳೆಯವನಂತೆ ಕಂಡ. ಆ ಸೈನಿಕರೆ ಉಪದ್ರವ ಮಾಡಿದರು. ಆದರೂ ಸಮಯ ಸಂದರ್ಭ ಹೇಳಿಕೇಳಿ ಬರುವುದಿಲ್ಲ.

ಭೀಮ : 'ಬಾ' ನಾನೆ ತಪ್ಪುಗಾರ, ನಾನೇ ಯಾಕೆ ಹೋಗಿ ತಪ್ಪು ಒಪ್ಪಿಕೊಂಡರೆ ಬಾದ್‌ಷ ಕ್ಷಮಿಸಬಹುದು. ನಾನೆ ಹೋದರೆ ಅವರಿಗೆ ನಾನು ತಪ್ಪುಗಾರನಲ್ಲ ಅಂತ ಭರವಸೆ ಬರುತ್ತದೆ. ಏನಂತಿ ಮಾಮ.

ರಾಮಿಬಾಯಿ : ಸೇವಾಭಾಯ, ಯಾಡಿ ಮರಿಯಮ್ಮ ಎಂಥ ಧರ್ಮ ಸಂಕಟದಲ್ಲಿ ಹಾಕಿದಿರಿ, ಬೇಡಮಗ ನೀನು ಹೋಗುವುದು ತೊಂದರೆ. ಬಾದಾಷರ ವಿಚಾರಗಳು ಏನೊ ನಮಗೆ ತಿಳಿಯದು ನೀನು ಸುಮ್ಮನಿರು. ನಿನ್ನ ಬಾಪು ಮತ್ತ ಜೇಮು ಹೋಗಿ ಬರಲಿ.

ಭೀಮ : ಯಾಡಿ, ನೀ ಹೆದರಬೇಡ, ಬಾದ್‌ಷ ದಯಾಳು ವಿಶಾಲ ಹೃದಯದವರು. ನಾವೇನು ಬೇಕಂತ ಸೈನಿಕರ ಮೇಲೆ ಬಿದ್ದಿಲ್ಲ. ನಮ್ಮ ರಕ್ಷಣೆ ಮಾಡಿಕೊಳ್ಳುವುದು ಅಪರಾಧವೆನ್ನುವುದಾದರೆ ನನಗೆ ಶಿಕ್ಷೆಯಾಗಲಿ. ನಾನು ಕೇಳುತ್ತೇನೆ ಅವರು ಏಕೆ ಕೆಂಪುಜನರ ವಿರುದ್ಧ ಹೋರಾಡುತ್ತಿದ್ದಾರೆಂದು. ಅವರಿಗೂ ನಾವು ಅವರಪರ ಕೆಲಸ ಮಾಡುತ್ತೆವೆಂದು ತಿಳಿಯುತ್ತದೆ.

ನಾನೂಸಾದ್ : ಬೇಟ ಭೀಮ ನಿನ್ನ ವಯಸ್ಸು ಹೀಗೆ ಮಾತಾಡಿಸುತ್ತಿದೆ. ಬಿಸಿರಕ್ತ ಹುಮ್ಮಸ್ಸು, ಕಿಚ್ಚು ನಿನ್ನ ಪ್ರೇರೇಪಿಸುತ್ತಿದೆ. ಆದರೆ ವಾಸ್ತವ ಸ್ಥಿತಿಯೇ ಬೇರೆ ಇದೆ. ಬದುಕಿನ ಅನುಭವ ಎಲ್ಲಾವನ್ನು ಕಲಿಸುತ್ತದೆ. ತಾಳ್ಮೆಯಿಂದಿರು. ದುಡುಕಿ ಯಾವ ನಿರ್ಣಯವನ್ನು ತೆಗೆದುಕೊಳ್ಳಬಾರದು ಮಗ ಸಮಯವನ್ನು ತನ್ನ ಪಾಡಿಗೆ ನಡೆಯಲು ಬಿಡಬೇಕು ಹೀಗೆ ಜಲ್ದಬಾಜಿಯಲ್ಲಿ ಏನನ್ನು ಯೋಚಿಸಬಾರದು.

ಜೇಮು : ಭಾವ, ಸಮಯ ಸಾಕಷ್ಟು ಆಗಿದೆ. ಟೆಂಟ್‌ಗಳು ಸಂಪೂರ್ಣ ತಯಾರಾಗಿವೆ. ಹೋಗಿ ವಿಶ್ರಮಿಸಿಕೊಳ್ಳಿ. ಪಹರೆಯವರನ್ನು ವಿಚಾರಿಸಿ ಬರುತ್ತೇನೆ. ನಾಳೆ ವಿಚಾರ ಮಾಡೋಣ. ಏಳಿ ಎಲ್ಲರೂ ನಡೆಯಿರಿ. ಎಲ್ಲಾ ಒಳ್ಳೆಯದಾಗುತ್ತದೆ. ನಾವೇನು ಯಾರಿಗೂ ಕೇಡು ಮಾಡಿಲ್ಲ.

ನಾನೂಸಾದ್ : ಆಯ್ತು ನಡೆಯಿರಿ, ಹುಷಾರಾಗಿರಲು ಹೇಳಿ, ಈ ಪ್ರದೇಶದಲ್ಲಿ ಚಿರತೆಗಳು, ಕರಡಿಗಳು ಹೆಚ್ಚಾಗಿವೆ. ನಮ್ಮ ಜಾನುವಾರುಗಳು ಮತ್ತು ಮನುಷ್ಯರು ಸುರಕ್ಷಿತವಾಗಿರಬೇಕು. ರಾತ್ರಿ ನಾಯಿಗಳಿಗೆ

ಊಟ ಕಡಿಮೆ ಹಾಕಿ. ತಿಂದು ಗಡದ್ದಾಗಿ ಮಲಗಿಬಿಡುತ್ತವೆ ಇಲ್ಲಾಂದ್ರೆ. ಹಾಗೆನೆ ಪಹರೆಯವರನ್ನು ಎರಡು ಜಾವಗಳಲ್ಲಿ ವಿಂಗಡಿಸಿ, ಸರಿಯಾಗಿ ನೋಡಿಕೊಳ್ಳುವಂತೆ ಎಚ್ಚರವಹಿಸಿ.

ಭೀಮ : ಮಾವ, ನಾನು ನಿನ್ನ ಸಂಗಡ ಬರುತ್ತೇನೆ. ಮಕ್ಕರಗೌಳ ಆಗ್ತಾ ಇದೆ ಒಬ್ಬನೆ ಹೋಗುವುದು ಬೇಡ.

ರಾಮಿಬಾಯಿ : ಬೇಟ ಭೀಮ, ಗಡಾನೆ ಬರ್ರಿ, ಊಟ ಮಾಡುವಿರಂತೆ ಮಧ್ಯಾಹ್ನ ಅದೇನು ತಿಂದ್ರೋ ಬಿಟ್ರೋ...

ಭೀಮ : ಆಯ್ತು, ಯಾಡಿ, ಮಾವನ ಕೂಡ ಬೇಗನೆ ಬರುತ್ತೇನೆ. (ನಿರ್ಗಮನ)

* * *

ದೃಶ್ಯ ೧

ಸನ್ನಿವೇಶ ೫

ಜೇಮು : ಭೀಮ.. ದೂರದಲ್ಲಿ ಕುದುರೆ ಗೊರಸಿನ ಸದ್ದು ಕೇಳ್ತಿಲ್ವಾ...

ಭೀಮನಾಯ್ಕ : (ಸ್ವಲ್ಪ ಮೌನ) ಹೌದಲ್ಲ. ಇಷ್ಟೊತ್ತಿನೊಳಗೆ ಯಾರು ಈ ಕಡೆಗೆ ಬರುತ್ತಿರಬೇಕು. ಒಂದುವೇಳೆ ಸೈನ್ಯವನ್ನು ಸೋಲಿಸಿದ್ದಕ್ಕೆ ಅಫ್ಜಲ್‌ಖಾನ್ ರಾತ್ರಿ ದಾಳಿ ಏನಾರು ಮಾಡಿಸಿದನೆ?

ಜೇಮು : ಯಾವುದಕ್ಕೂ ಎಚ್ಚರಿಕೆಯಿಂದಿರಬೇಕು. ಈ ಗೌವ ಅನ್ನುವ ಕತ್ತಲಲ್ಲಿ ಏನೊಂದು ಕಾಣಿಸುತ್ತಿಲ್ಲ. ಅಲ್ಲ ಸದ್ದಿನ ಮೇಲೆ ಅಂದಾಜು ಮಾಡು ಎಷ್ಟು ಕುದುರೆಗಳಿರಬಹುದು.

ಭೀಮ : ಒಂದೆರಡು ಮೂರು. ಅಂದ್ರೆ, ಯುದ್ದಕಂತು ಅಲ್ಲ ಮತ್ತೆ ಯಾಕೆ?

ಜೇಮು : ನಾಕ್ಕು ಮುಂದೆ ಬಂದು ಹಿಂದೆ ದಂಡು ಇದ್ದರೆ?

ಭೀಮ : ಹಿಂಗೂ ಇರಬಹುದು. (ಅನುಮಾನಿಸುತ್ತಾ) ಅಲ್ಲಾ ಏನು ಮಾಡಂತಿಯಾ? ಸರಿಯಾಗಿ ತಿಳಿಯದೆ ಏನು ಮಾಡಲು ಆಗದು ಇವರೆನು ಸ್ನೆಹಕ್ಕೆ ಬರುತ್ತಿದ್ದಾರೊ ಇಲ್ಲಾ ಶತ್ರುತ್ವಕ್ಕೆ? ಅವರ ಮನಸ್ಸಿನೊಳಗಿನ ಆಲೋಚನೆ ತಮಗೆ ತಿಳಿಯುವಂತಿದಿದ್ದರೆ.

ಜೇಮು : ನಾನು ಎಲ್ಲಾ ನಮ್ಮ ಕೆಲಸಗಾರರಿಗೆ ಸಂಕೇತ ನೀಡುತ್ತೇನೆ. (ತೊಂದರೆಯ ಸಮಯದಲ್ಲಿ ನೀಡುವ ಸಂಕೇತದ ಸಂದೇಶವನ್ನು ನೀಡಿದ). ನೀನು ಅವರ ಮೇಲೆ ನಜರ್ ಇಡು ಯಾವ ಕಡೆಗೆ ಬರುತ್ತಾರೆಂದು.

ಭೀಮ : (ಸ್ವಲ್ಪ ಹೊತ್ತಾದರೂ ಸಂಕೇತಗಳು ಬರಲಿಲ್ಲ, ಆತಂಕದಿಂದ) ಮಾಮ ಯಾವ ಸಂಕೇತಗಳು ಬರಲಿಲ್ಲಾ, ಕುದುರೆ ಸದ್ದು

ಸಮೀಪಿಸುತ್ತಿದೆ. ಮತ್ತೊಮ್ಮೆ ಸಂಕೇತ ನೀಡ್ತಿಯಾ ನೋಡು, ಬೇಗಮಾಡು.

ಜೇಮು : ಭೀಮ, ಹೆದರಬೇಡ, ನಮ್ಮವರು ಬಹಳ ಜಾಗರೂಕರಾಗಿದ್ದಾರೆ. ಏನು ಕಾರಣವೊ, ಸಂಕೇತ ಕಳುಹಿಸುತ್ತಿಲ್ಲ ಮತ್ತೊಮ್ಮೆ ಪ್ರಯತ್ನಿಸುತ್ತೇನೆ. (ಸಂಕೇತ ಕಳುಹಿಸುವವನು ಅವನಂತ ಧ್ವನಿ ಮಾಡಿ ನಾಕು ದಿಕ್ಕುಗಳಿಂದ ಸಂಕೇತಗಳು ಬಂದವು. ಹಿಂದೆನೆ ಹದಿನೈದು-ಇಪ್ಪತ್ತು ಸುಸಜ್ಜಿತ ಯುವಕರ ಗುಂಪು ಸದ್ದಿಲ್ಲದೆ ಜೇಮುಚೌವ್ಹಾಣ್ ಕಡೆಗೆ ದೌಡಾಯಿಸಿತು.) ನೋಡಿದೆಯ, ನಾವು ಯಾವತ್ತು ಮೈ ಮರೆತು ಮಲಗುವುದಿಲ್ಲ.

ಭೀಮ : ಶಬ್ಬಾಸ್, ನಿಮ್ಮಂತ ಇಪ್ಪತ್ತು ಜನರಿದ್ದರೆ ಎಂಥ ಸೈನ್ಯವನ್ನು ಹೆಡಮುರಗಿ ಕಟ್ಟಬಹುದು. ಶತ್ರು ಯಾರಂತ ಗೊತ್ತಿಲ್ಲ ಕೇವಲ ಕುದುರೆ ಗೊರಸಿನ ಮೇಲೆ ನಾವು ತೊಂದರೆಯನ್ನು ಗ್ರಹಿಸಿದ್ದೇವೆ. ಕುದುರೆ ಸದ್ದು ಸಮೀಪಿಸುತ್ತಿದ್ದಂತೆ ಒಮ್ಮೆಗೆ ಪ್ರತಿಯೊಬ್ಬರು ಮುತ್ತಿಗೆ ಹಾಕಲು ತಯಾರಾಗಬೇಕು. ಆದರೆ ಯಾರಿದ್ದಾರೆ, ಎಷ್ಟು ಜನರಿದ್ದಾರೆ ತಿಳಿಯದು (ಭೀಮ ಹಟ್ಟಿಯೊಳಗಿನ ಜನರಿಗೆ ಕಳುಹಿಸುವ ಎಚ್ಚರಿಕೆ ಸಂದೇಶ ಕಳುಹಿಸಿದ). ಸಂಕೇತ ನೀಡುವವರೆಗೆ ಯಾರು ದಾಳಿ ಮಾಡಬೇಡಿ, ಕತ್ತಲು ಏನಾದರೂ ಎಡವಟ್ಟ ಆದೀತು ಜಾಗ್ರತೆ. ಆದರೆ ಪ್ರತಿಯೊಬ್ಬರು ತಯಾರಿರಿ, ಶತ್ರು ನಮ್ಮ ಮೇಲೆ ಬೀಳುವ ಮೊದಲು ನಾವು ಅವನ ಮೇಲೆ ಬೀಳಬೇಕು, ಹುಷಾರು.

ಜೇಮು : ಭೀಮ, ಶತ್ರುಗಳ ಕುದುರೆಗಳಲ್ಲ, ಯಾರೋ ನಮ್ಮ ಕಡೆಗೆ ಬರುತ್ತಿದ್ದಾರೆ. ದೊಂದಿಯನ್ನು ಹೊತ್ತಿಸಿ ನಮ್ಮ ಇರುವಿಕೆಯನ್ನು ಸೂಚಿಸಬಹುದು. ಯಾರಲ್ಲಿ ? ಜಾತು, ದೊಂದಿತನ್ನಿ ಬೇಗನೆ.

ಭೀಮ : ತಡಯಾಕೆ, ಏಯ್, ಥಾವು, ಗಡಾನ ದೊಂದಿ ಹಚ್ಚೆ ಮೇಲೆಹಿಡಿ, ಯಾರಂತ ನೋಡುವ. ಹೂಂ ಜಾತು ಬೇಗಮಾಡು. ಯಾರು? ಯಾರಲ್ಲಿ... ಮಾತಾಡಿ

ಥಾವು : ಆಯ್ತು ಭೀಮ, ಇಗೊ ಈಗ ಹೊತ್ತಿಸಿದೆ. (ಬೆಳಕು ಕಂಡ ಕುದುರೆ ಸವಾರರು ಬಿಳಿ ಬಾವುಟವನ್ನು ಮೇಲೆ ಹಿಡಿದರು).

ಜೇಮು : ಯಾರು...ಯಾರು? ಮಾತನಾಡಿ, ನಾವು ನಿಮ್ಮ ಮಿತ್ರರು.

ಅಫ್ಜಲ್‌ಖಾನ್ : ಬಾದಷ ಟಿಪ್ಪುಸುಲ್ತಾನ್‌ರ ಗುಲಾಮ, ಸೇನಾದಿಪತಿ ಅಫ್ಜಲ್‌ಖಾನ್. ನಾವು ನಿಮ್ಮ ಮಿತ್ರರೆ ಭೀಮ ಒಳ್ಳೆಯ ವಿಷಯಕೆ ಬಂದಿದ್ದೇವೆ.

ಭೀಮ : ಸಾನೂಸಾದ್ ಬಂಜಾರರ ತಾಂಡಕ್ಕೆ ತಮಗೆ ಹೃತ್ಪೂರ್ವಕ ಸ್ವಾಗತ ಹೂಜೂರ್... ಮಾಮ, ತುರ್ತಾಗಿ ಅಬ್ಬಾಜಾನ್ ಅವರಿಗೆ ಸಂದೇಶ ರವಾನಿಸಿ. ಅಫ್ಜಲ್ ಸಾಹೇಬರು ಬಂದಿದ್ದಾರೆಂದು ತಿಳಿಸು.

ಅಫ್ಜಲ್‌ಖಾನ್ : ಭೀಮನಾಯ್ಕ, ಬಾದಷ ಟಿಪ್ಪುಸುಲ್ತಾನ್ ನಿಮ್ಮುಕೆ ಕರೆದು ತರಲು ಹೇಳಿದ್ದಾರೆ. ಇಲ್ಲಿ ನಡೆದ ಘಟನೆಯನ್ನು ಕೇಳಿದ ಬಾದ್‌ಷಾ ತುರಂತಾಗಿ ನೋಡಲು ಬಯಸಿದ್ದಾರೆ.

ಜೇಮು : ಹೂಜೂರ್, ಭೀಮ ಚಿಕ್ಕ ಹುಡುಗ ದಯವಿಟ್ಟು ಅವನನ್ನ ಬಂಧಿಸುವುದು ಬೇಡ. ಅವನ ಪರವಾಗಿ ನಾನು ಮಾಫಿ ಕೇಳುತ್ತೇನೆ. ಏನೊ ಬಿಸಿರಕ್ತ ತಪ್ಪು ಮಾಡಿದ್ದಾನೆ ಕ್ಷಮಿಸಿ.

ಅಫ್ಜಲ್‌ಖಾನ್ : ಮಹಾರಾಜರ ಅಪ್ಪಣೆ ಪಾಲಿಸುವ ಗುಲಾಮ ನಾನು ಅಷ್ಟೆ, ಅವರ ವಿರುದ್ಧ ಮಾತಾಡುವ ಧೈರ್ಯ...ನನಗಿಲ್ಲ. ಈಗಿಂದೀಗಲೇ ಹೊರಡುವುದು ಒಳಿತು.

ಭೀಮ : ಹೂಜೂರ್, ನಮ್ಮ ತಂದೆಯವರನ್ನು ಒಮ್ಮೆ ಭೇಟಿಯಾಗಿ ನಮ್ಮ ಆತಿಥ್ಯವನ್ನು ಸ್ವೀಕರಿಸಿ ಹೊಂಟರೆ ಒಳ್ಳೆಯದಾಗುವುದು. ಈಗಾಗಲೆ ಬಾಪುಗೆ ವಿಷಯ ಹೋಗಿದೆ.

ಅಫ್ಜಲ್‌ಖಾನ್ : ಮಹಾಪ್ರಭು ನಾಳೆಯೊಳಗೆ ನಿನ್ನನ್ನು ಹಾಜರುಪಡಿಸಲು ಹೇಳಿರುವ ಹಿನ್ನೆಲೆಯಲ್ಲಿ ಇಂದು ರಾತ್ರಿ ನಾವು ಇಲ್ಲಿ ತಂಗಬಹುದು.

ಜೇಮು : ಥಾವು, ಚೆನ್ನ, ಬದ್ಯಾ, ಈಗಿಂದೀಗಲೇ ನಾನೂಸಾದ್ ಮಾವನವರಿಗೆ ಸುದ್ದಿ ತಲುಪಿಸಿ ಆತಿಥ್ಯಕ್ಕೆ ಬೇಕಾದ ಎಲ್ಲಾ ಏರ್ಪಾಟುಗಳನ್ನು ಮಾಡಲು ಹೇಳು. ತಡಮಾಡಬೇಡಿ, ಕುದುರೆ ಗಳನ್ನು ಜೋರಾಗಿ ಓಡಿಸಿಕೊಂಡು ಹೋಗಿ.

ಥಾವು : ಆಯ್ತು ಕಾರಬಾರಿ, ತಮ್ಮ ಅಪ್ಪಣೆ.

ಅಫ್ಜಲ್‌ಖಾನ್ : ಭೀಮ, ನಮ್ಮ ಸೈನಿಕರು ನೆನಪಿಟ್ಟುಕೊಳ್ಳುವಂತೆ ಚಿತ್ ಮಾಡಿದೆಯಲ್ಲಾ, ಧೈರ್ಯ ಹೇಗೆ ಬಂತು ನಿನಗೆ ಇನ್ನೂ ನಿನ್ನ ಮುಖದ ಮೇಲೆ ಈಗ ಮೀಸೆ ಚಿಗುರುತ್ತಿದೆ. ಭೇಷ್ ನಿಂದುಕೆ ಧೈರ್ಯ ಮೆಚ್ಚ ಬೇಕಾದ್ದೆ ಮಗು.

ಜೇಮು : ಹೂಜೂರು, ಅಲೆಮಾರಿಗಳಾದ ನಾವು ಹಾಗೆ ವ್ಯಾಪಾರ ಮಾಡ್ತಾ ನಾಡಬಿಟ್ಟು ನಾಡು ಸುತ್ತುತ್ತೇವೆ. ಕಳ್ಳರು, ದರೋಡೆಕೋರರು ಪಾಳೆಗಾರರು, ರಾಜರ ಸೈನಿಕರ ಉಪಟಳ ಇದ್ದಿದ್ದೆ. ಈಗಂತು ಕೆಂಪುಮಂದಿ ಸಿಕ್ಕಲ್ಲಿ ನಮ್ಮನ್ನು ಹಿಂಸೆ ಮಾಡುತ್ತಾರೆ. ಅದಕ್ಕೆ

ಹೋರಾಡಲು ಧೈರ್ಯ ಬೇಕಲ್ಲವೆ. ಪ್ರಭು, ತಮ್ಮ ಸೈನ್ಯ ಅಂತ ತಿಳಿದಿದ್ದರೆ ನಾನು ಹುಚ್ಚು ಸಾಹಸಕ್ಕೆ ಇಳಿಯುತ್ತಿರಲಿಲ್ಲಾ. ನನ್ನನ್ನು ಮಾಫ್ ಮಾಡಿ. ಏನೊ ಆಗಬಾರದ್ದು ಆಯ್ತು.

ಭೀಮ : ಏನೋ ಹೂಜೂರ್, ನಮ್ಮ ತಾಯಿನಾಡನ್ನ, ತಾಯಿಯನ್ನು ರಕ್ಷಿಸಿಕೊಳ್ಳಲು ಪ್ರಾಣಹೋದರೆ ತಪ್ಪೇನು? ಬಾಪು ಯಾವಾಗಲು ಹೇಳುತ್ತಾರೆ. ನಮ್ಮನ್ನ ನಾವು ರಕ್ಷಿಸಿಕೊಳ್ಳದಿದ್ದರೆ, ನಾವು ಹೇಡಿಗಳಂತೆ. ಬದುಕಿದ್ದರೂ ಸತ್ತತಂತೆ ಭೂಮಿ ಮೇಲೆ ಹುಟ್ಟಿದ ಪ್ರತಿಯೊಂದು ಜೀವಿ ಸಾಯಲೆಬೇಕು. ಹೋರಾಡಿ ಸಾಯುವುದೆ ಒಳಿತು ಪ್ರಭು.

ಅಫ್ಜಲ್‌ಖಾನ್ : ಷಹಬಾಸ್ ಮೇರ ಷೇರ್, ವಯಸ್ಸಿಗೆ ಮೀರಿದ ಮಾತು. ನಿನ್ನ ಹಡೆದ ತಂದೆ-ತಾಯಿಗಳು ನಿಜವಾಗಲು ಧನ್ಯ. .... ನಿನ್ನಂತವೀರರು ನಮಗೆ ಸಿಕ್ಕಿದ್ದರೆ ನಾವು ಜಗತ್ತನ್ನೆ ಗೆಲ್ಲುತ್ತಿದ್ದೆವು. ಬಾದಷರ ನೆಮ್ಮದಿ ಹಾಳಾಗಿದೆ. ಕಾಲ ಬದಲಾಗುತ್ತಿದ್ದಂತೆ ಮನುಷ್ಯನ ನೀಯತ್ತು ಬದಲಾಗ್ತಿದೆ, ಆಲೋಚನೆಗಳು ಬದಲಾಗುತ್ತಿವೆ. ಈಗ ಸಂದಿದಗ್ದ ಸ್ಥಿತಿ ಬಂದೊದಗಿದೆ. ಅಲ್ಲಾನೆ ಪಾರುಮಾಡಬೇಕು.

ಭೀಮ : ಹುಜಾರ್, ನನಗೆ ತಿಳುವಳಿಕೆ ಬಂದಾಗಿನಿಂದಲೂ ನಾನು ಕೇಳುತ್ತಿದ್ದೇನೆ, ಬಾದಷ ಹುಲಿಯಂತೆ ಯಾರ ಹೆದರಿಕೆಯು ಇಲ್ಲದಂತೆ ಯುದ್ದ ಮಾಡಿದವರು, ಆದರೆ ಈಗೇಕೆ ಅಧಿರರಾಗಿದ್ದಾರೆ.

ಅಫ್ಜಲ್‌ಖಾನ್ : ಭೀಮ, ಕಾಲಯಾವಾಗಲೂ ಒಂದೆ ರೀತಿ ಇರುವುದಿಲ್ಲ ಒಮ್ಮೆ ನಮ್ಮ ಪರವಾಗಿದ್ದರೆ ಮತ್ತೊಮ್ಮೆ ನಮ್ಮ ಶತ್ರುಗಳ ಪರವಾಗಿರುತ್ತದೆ. ಸ್ಥಿತಿ, ಸನ್ನಿವೇಶ ಬದಲಾಗುತ್ತವೆ ಆಗ ಮನುಷ್ಯ ಅಧೀರನಾಗುತ್ತಾನೆ. ಹಾಗೆನೆ ಮಹಾಪ್ರಭುಗಳು, ಅವರೊಳಗೆ ಏನೊ ಆಲೋಚನೆ ನಡೆಯುತ್ತಿದೆ, ಏನೂಂತ ಯಾರಿಗೂ ಹೇಳುತ್ತಿಲ್ಲ.

ಭೀಮ : ತಾವು ಅವರಿಗೆ ಬಹಳ ಹತ್ತಿರವಿದ್ದಿರಿ, ತಮಗೂ ವಿಷಯ ಗೊತ್ತಿಲ್ಲವೆ?

ಅಫ್ಜಲ್‌ಖಾನ್ : ಬಾದ್ ಷ ಹಾಗೆನೆ, ಕೆಲವು ವಿಷಯಗಳನ್ನ ತಾವೆ ನುಂಗಿ ನಮ್ಮನ್ನ ನೆಮ್ಮದಿಯಿಂದರಲು ಹೇಳುತ್ತಾರೆ. ನಮಗೆ ಆತಂಕಗೊಳ್ಳಲು ಬಿಡುವುದಿಲ್ಲ.

* * *

ದೃಶ್ಯ ೨

ಸನ್ನಿವೇಶ ೧

(ಮುಂಜಾನೆ ಬಾದಷನ ಸೈನಿಕರು ಷಹರೆ ಕಾಯುತ್ತಿದ್ದಾರೆ. ಟಿಪ್ಪು ಭೇಟಿಗಾಗಿ ಭೀಮಾನಾಯ್ಕ, ಅಫ್ಜಲ್‌ಖಾನ್ ಪ್ರವೇಶ).

ಅಫ್ಜಲ್‌ಖಾನ್ : ಜಂಹಾಪನಾ ಭೀಮಾನಾಯ್ಕನನ್ನು ಹಾಜರಿಪಡಿಸಲು ಅನುಮತಿ ಕೋರುತ್ತೇನೆ. ಈ ಗುಲಾಮ ತಮ್ಮ ಅಪ್ಪಣ್ಣೆ ಬಯಸುತ್ತಿದ್ದಾನೆ.

ಟಿಪ್ಪು : ಏಕಾಂತ... (ಕಾವಲುಗಾರರು ದೂರ ಸರಿದರು. ಭೀಮ ಒಳಗೆ ಪ್ರವೇಶಿಸಿದವನೆ ಬಗ್ಗಿ ಸಲಾಂ ಮಾಡಿದ).

ಭೀಮ : ದೀನದಯಾಳು, ಬಡವರ ಬಂಧು, ಬಾದ್‌ಷ ಹುಕುಮತ್, ಬಹುಪರಾಕ್, ಬಹುಪರಾಕ್.

ಟಿಪ್ಪು : ಆವೋ.. ಮೇರಾಷೇರ್, ಅಫ್ಜಲ್‌ಖಾನ್ ಹೇಳಿದ ಮೇಲೆ ನಿನ್ನ ನೋಡಲೇಬೇಕಂತ ಅನಿಸಿತು. ಅಫ್ಜಲ್‌ಖಾನ್ ಹೇಳಿದಕ್ಕಿಂತ ಹೋಷಿಯಾರ್, ಶೂರ ಇದ್ದಿಯಾ.

ಭೀಮ : ತಮ್ಮ, ದಯೆ ಹೂಜೂರ್, ಏನೊ ಅಪರಾಧ ಆಗಿದೆ ಕ್ಷಮಿಸಿ ಹುಜೂರ್. ಇನ್ನೂ ನನ್ನ ಜೀವಿತಾವದಿಯನ್ನ ತಮ್ಮ ಸೇವೆಗೆ ಮೀಸಲಿಡುವೆ.

ಟಿಪ್ಪು : ನಮ್ಮಿಬ್ಬರ ಶತ್ರು ಒಬ್ಬನೆ, ಕೆಂಪು ಮಂದಿ. ನಮ್ಮ ಗೂಡಾಚಾರರು ಸುದ್ದಿ ತಂದಿರುವ ಪ್ರಕಾರ ಕೆಂಪುಜನ ಯಾವಾಗ ಬೇಕಾದರೂ ಶ್ರೀರಂಗಪಟ್ಣಂ ಮೇಲೆ ದಾಳಿ ಮಾಡಬಹುದು. ಭೀಮ, ನಾನಿಗ ಒಬ್ಬಂಟಿಯಾಗಿದ್ದೇನೆ. ನನಗೆ ಶತ್ರು ಯಾರು, ಮಿತ್ರಯಾರು ತಿಳಿಯದಾಗಿದೆ. ನನ್ನ ಜೊತೆಗೆ ನೀನು ಇರಬೇಕು.

ಭೀಮ	:	ಈ ಗುಲಾಮ, ತಮ್ಮ ಸೇವೆಗೆ ಹಾಜರ್. ತಮಗಾಗಿ ಈ ಜೀವ ಹಾಜರ್ (ತಮ್ಮ ಅಪ್ಪಣೆ ಒಂಟಿಗಾಲ ಮೇಲೆ ಕುಳಿತು ಅವರ ಆಶೀರ್ವಾದಕ್ಕಾಗಿ ಕಾದ). ತಾವು ಕಾಲಿನಿಂದ ತೋರಿಸಿದ್ದನ್ನ ನಾನು ತಲೆ ಮೇಲಿಟ್ಟು ಮಾಡಲು ಸದಾಸಿದ್ಧ ಹುಜೂರ್.
ಟಿಪ್ಪು	:	ದೇವರು ನಿಮ್ಮ ಇಷ್ಟನ ಪೂರೈಸಲಿ, ಇನ್ನೂಮುಂದೆ ಭೀಮ ನಮ್ಮ ಖಾಸ ಆದ್ಮಿ. ನೀವು ಯಾವಾಗ ಬಂದರೂ ನಮ್ಮನ್ನ ಭೇಟಿಯಾಗಬಹುದು. ಯಾರು ನಿಮ್ಮನ ತಡೆಯುವುದಿಲ್ಲ. ಯಾರಲ್ಲಿ, ಮಂತ್ರಿ ಮೀರ್ ಸಾದಕ್‌ರಿಗೆ ಈ ಸಂದೇಶರವಾನಿಸಿ.
ಭೀಮ	:	ಧನ್ಯನಾದೆ ಪ್ರಭು. ತಮ್ಮ ನಂಬಿಕೆಗೆ ನನ್ನ ಪ್ರಾಣವನ್ನೇ ಮುಡಿಪಾಗಿಡುತ್ತೇನೆ. ಇವತ್ತಿನಿಂದ ನನ್ನ ಪ್ರತಿಯೊಂದು ಕೆಲಸ ಕಾರ್ಯಗಳು ಬಾದ್‌ಷರ ಅನುಮತಿಗೆ ಒಳಪಟ್ಟವುಗಳಾಗಿವೆ.
ಟಿಪ್ಪು	:	ಮೀರ್‌ಸಾದಕ್, ಈ ಹುಡುಗ ನಮ್ಮ ಖಾಸಾ ಆದ್ಮಿ ಹೈ, ಇವರಿಗೆ ಯಾವಾಗ ಬಂದರೂ ಯಾರು ತಡೆಯುವಂತಿಲ್ಲಾ.
ಮೀರ್‌ಸಾದಕ	:	ಬಾದಷ.. (ಅವರೆದುರು ಕತ್ತಿ ಹಿಡಿದ)
ಟಿಪ್ಪು	:	ಇದು ನಿನ್ನ ರಕ್ಷಣೆಗೆ ನಾವು ನೀಡುತ್ತಿರುವರ ಇನಾಮ. ಈ ಕ್ಷಣದಿಂದ ಆಪ್ ಹಾಮಾರೆ ಖಾಸ್ ಆದ್ಮಿ ಹೊ.. ಅಲ್ಲಾ ಆಪ್ ಕಾ ಭಲಾಕರೆ.
ಮೀರ್‌ಸಾಧಕ್	:	ಹುಜೂರ್, ಇವನೆ ಕ್ಯಾ ಭೀಮ. ನಾವು ನಿಮ್ದು ಬಾಯಿಯಲ್ಲಿ ತಾರೀಫ್ ಕೇಳಿದ್ವಿ, ಈ ಚಿಕ್ಕ ವಯಸ್ಸಿನಲ್ಲೇ ನಿಮ್ಮ ಧೈರ್ಯ, ಛಲ ತಾರೀಪ್ ಮಾಡುವಂತಿವೆ.
ಭೀಮ	:	ನಾನು ಬದುಕಿರುವವರೆಗೂ ತಮ್ಮ ಕರುಣೆ, ರಕ್ಷಣೆ ಈ ಬಡಪಾಯಿಯ ಮೇಲಿರಲಿ. ಇನ್ನೂ ಮೇಲೆ ನಿಮ್ಮ ಶತ್ರುಗಳು ನನ್ನ ಶತ್ರುಗಳು, ತಮ್ಮ ಮಿತ್ರರು, ನಮ್ಮ ಮಿತ್ರರು.
ಟಿಪ್ಪು	:	ಏಕಾಂತ (ಮೀರ್‌ಸಾಧಕ್ ನಿರ್ಗಮಿಸುವನು) ಹಾಂ, ಭೀಮ. ಕೆಂಪುಮಂದಿಯ ಉಪಟಳದಿಂದ ನಮ್ಮ ರಾಜ್ಯದಲ್ಲಿ ಧವಸಧಾನ್ಯದ ಕೊರತೆ ಉಂಟಾಗಿದೆ. ಬ್ರಿಟಿಷ್‌ಲೋಗ್, ಯಾವಾಗ ಬೇಕಾದ್ರೂ ನಮ್ಮ ಮೇಲೆ ಯುದ್ದಕ್ಕೆ ಬರಬಹುದು. ಹಾಗಾಗಿ ನಮಗೆ ಬೇಕಾಗುವ ಧವಸ ಧಾನ್ಯಗಳನ್ನ ನೀನೆ ಕೊಡಬೇಕು.
ಭೀಮ	:	ಹೂಜೂರ್, ನಾನು ಅದೇ ವಿನಂತಿಯನಿಟ್ಟುಕೊಂಡು ಬಂದಿದ್ದೆ. ತಮಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಒದಗಿಸುವ ಜಮ್ಮೆ

ದಾರಿ ನಂದು. ಕೆಂಪು ಜನರೇ ಅಲ್ಲ ಯಾರೇ ಬಂದರು ಆಹಾರ ಸಾಮಗ್ರಿ ಲವಣ ನಿಮ್ಮ ರಾಜ್ಯದ ಒಳಗೆ ತಲುಪಿಸುತ್ತೇನೆ. ಇದು ನನ್ನ ವಾದ.

ಟಿಪ್ಪು : ಯಾರಲ್ಲಿ... ಏ ಹಮಾರ ಮೆಹಮಾನ್ ಹೈ ರಾಜ್‌ಖಾನೆಮೆ ಖಾನೆಕಾ ಬಂದೋಬಸ್ತ್ ಕರೋ. ನಡಿ ಭೀಮ ನಮ್ಮ ಆತಿಥ್ಯವನ್ನು ಸ್ವೀಕರಿಸು.

ಭೀಮ : ಧನ್ಯ ಪ್ರಭು, ಅಲ್ಪ ಮಾನವನಾದ ನನಗೆ ಇಷ್ಟೊಂದು ರಾಜಮನ್ನಣೆ. ತಮ್ಮ ಹೃದಯ ಬಹಳ ವಿಶಾಲವಾದದ್ದು.

ಟಿಪ್ಪು : ಅರೇ, ನೀನು ಅದಕ್ಕೆ ಯೋಗ್ಯನಾಗಿದ್ದಿಯಾ, ಯಾರು ಯೋಗ್ಯತೆಯನ್ನು ಪಡೆಯುತ್ತಾರೊ ಅವರಿಗೆ ಮನ್ನಣೆ ತಾನಾಗೆ ದೊರೆಯುತ್ತೆ, ಯಾರು ಅವಕಾಶವಾದಿಗಳಾಗಿ ಸಿರ್ಪ ನೋಟಕ್ಕೆ ನಟನೆ ಮಾಡುತ್ತಾರೊ ಅವರು ಖಲಾಸ್ ಆಗಿಬಿಡುತ್ತಾರೆ. ಅಚ್ಚ ಮಾತ್ರ ಉಳಿಯುತ್ತದೆ ಭೂರಾನಹಿ.

ಭೀಮ : ತಮ್ಮಂತ ಕರುಣಾಳು ಛಲದಂಕಮಲ್ಲ ಮಹಾಪ್ರಭುವಿನ ನೆರಳಲ್ಲಿ ನಡೆಯುವುದೊಂದೆ ನನ್ನ ಜೀವಿತದ ಮಹದಾಸೆ ಪ್ರಭು. ನಾನು ಇಂದೆ ಸೇವಾಭಾಯ ಮತ್ತು ಮರಿಯಮ್ಮಯಾಡಿ ಮೇಲೆ ಶಪಥ ಮಾಡುತ್ತೇನೆ. ಈ ಬಂಜಾರ ಒಮ್ಮೆ ಜುಬಾನ್ ಕೊಟ್ಟರೆ ಪ್ರಾಣವನ್ನೇ ಕೊಡುತ್ತಾನೆ. ನನ್ನ ಇಡೀ ಸಿರಿ-ಸಂಪತ್ತು ಬಿಟ್ಟು ನಿಮ್ಮ ನಂಬಿಕೆಗೆ ಕೆಲಸ ಮಾಡುತ್ತೇನೆ. ಯಾವತ್ತು ನಿಮ್ಮ ನಂಬಿಕೆ ಕಳೆದು ಕೊಳ್ಳುತ್ತೇನೆ ಅವತ್ತೆ ಪ್ರಾಣತ್ಯಾಗ ಮಾಡುತ್ತೇನೆ.

ಟಿಪ್ಪು : ನನಗೆ ನಿನ್ನಂತ ಬಹದ್ದೂರ್ ಜನರ ಅವಶ್ಯಕತೆ ಇದೆ. ನಾವು ಬಳ್ಳಾರಿ ಕೋಟೆಯಿಂದ ಪಟ್ಟಣಕ್ಕೆ ಬರುವುದರೊಳಗೆ ನಿಮ್ಮ ತಂಡ ಬಂದರೆ ಕೆಲವು ಖಾಸಾಬಾತ್ ನಿಮಗೆ ನಾವು ಹೇಳುತ್ತೇವೆ. ಇದು ನಮ್ಮಿಬ್ಬರ ನಡುವೆ ನಡೆಯುವ ರಹಸ್ಯ ಮಾತು. ಯಾರಿಗೂ ತಿಳಿಯುವಂತಿಲ್ಲಾ.

ಭೀಮ : ತಮ್ಮ ಅಪ್ಪಣೆ ಮಹಾಪ್ರಭು (ನಿರ್ಗಮನ). ನಿಮ್ಮ ಮಾತುಗಳು ನನ್ನೊಂದಿಗೆ ಸಾಯುತ್ತವೆ ವಿನಃ ಮತ್ತೊಬ್ಬರ ಕಿವಿಗೆ ಮುಟ್ಟುವುದಿಲ್ಲಾ. ಇದು ನನ್ನ ಶಪಥ.

* * *

ದೃಶ್ಯ ೨

ಸನ್ನಿವೇಶ ೨

ನಾನೂಸಾದ್ : ಅಲ್ಲಾ, ಜೇಮು ಕನಿಷ್ಠ ಪಕ್ಷ ನೀನಾದರೂ ಅವನ ಹಿಂದೆ ಹೋಗಬಾರದಿತ್ತೆ. ನನ್ನ ಮಗನ ಗತಿ ಏನಾಯ್ತೊ. ಒಬ್ಬಂಟಿ ಸುಲ್ತಾನ ಹಿಡಿದು ಒಳಗೆ ಹಾಕಿದ್ರೆ. ನನಗೆ ಯಾಕೊ ಹೆದರಿಕೆ ಆಗುತ್ತಿದೆ.

ರಾಮಿಬಾಯಿ : ಹೊತ್ತು ನೆತ್ತಿಮೇಲೆ ಬಂತು, ಹೊತ್ತಾರೆ ಹೋದವನು ಇನ್ನೂ ವಾಪಾಸು ಬರಲಿಲ್ಲಾ, ಏನಾರು ಹೆಚ್ಚುಕಮ್ಮಿ ಆದ್ರ... ಕಂಕಾಳಿಯಾಡಿ, ಸೀತಾಸತ್ತಿ ನೀನೆ ಕಾಪಾಡು. ಬರೋ ಕಾಳಿಮಾವಸ್ಯೆಗೆ ನಿನಗೆ ಪೂಜೆ ಮಾಡಿಸ್ತಿನವ್ವ. ನನ್ನ ಮಗನ ನೆರಳಾಗು ತಾಯಿ. ಗುಜಾಸತ್ತಿ ನಿನೆ ಕಾಪಾಡು ತಾಯಿ.

ಜೇಮು : ಅಕ್ಕ, ಭಾವ, ಸುಮ್ಮನಾಗ್ರಿ ನಿಮಗೆ ಮಾಡಾಕ ಕೆಲ್ಸ ಇಲ್ಲ. ಬಾದ್‌ಷ ಅವನನ್ನ ದಂಡಿಸೋದಕ್ಕೆ ಕರದಿಲ್ಲ ಏನೋ ಮಾತಾಡಕೆ ಕರದಿರಬೇಕು. ಅವನು ನನ್ನ ಅಳಿಯ ಎಂತ ದೊಡ್ಡ ವೈರಿಯೇ ಇದ್ದರು ಚಾಣಾಕ್ಷತನದಿಂದ ಅವನನ್ನ ಗೆದ್ದು ಹೊರಗ ಬರ್ತಾನ. ಇಲ್ಲದ ಕಲ್ಪನೆ ಮಾಡಿ ನೆಮ್ಮದಿ ಹಾಳು ಮಾಡಿಕೊಳ್ಳಬೇಡಿ. ಅವನ ಧೈರ್ಯ ಚಾಣಕ್ಷತೆಗೆ ಸ್ವಯಂ ಸುಲ್ತಾನರೆ ಮಾರುಹೋಗುತ್ತಾರೆ.

ಪಕ್ಕೀರ : ಅಯ್ಯೋ, ಎಲ್ಲಾ ಕಾಲಕ್ಕೂ ಬುದ್ದಿ ನಡಿಯಾಕಿಲ್ಲ. ತಾಕತ್‌ಬೇಕು. ಬಾದ್‌ಷನ ಎದುರಿಗೆ ಭೀಮನಾಯ್ಕ ಇಲಿಮರಿಯಂಗೆ. ಸರಿಗೆ ಹೋಗಿ ಬೋನಿಗೆ ಬಿದ್ದಾನೆ.

ಇನ್ನೇನು, ಈ ಮುದಿಯನ ಕತೆ ಮುಗಿದಂತೆ. ಮುಂದಿನ ನಾಯಕ ನಾನೆ.

ಪೂಜಾರಿ ಪೋಮಿ : ಮುಗಿತು ಅವನ ಕತೆ ಅವನನ್ನ ಮರತು ನನಮಗ ಸಕ್ರ್ಯನಾಯ್ಕನ ತಂಡದ ಯುವನಾಯಕನನ್ನಾಗಿ ಆಯ್ಕೆ ಮಾಡ್ರಿ. ಹೋದವನು ಬರಲ್ಲಾ. ಟಿಪ್ಪುನ ಹತ್ರ ಹೋಗೋದು ಸಾವಿನ ಹತ್ತಿರ ಹೋದಂತೆ. ಲೇ ಪಕ್ಕೀರ ಗಪ್ಪಾಗು. ನನ ಮಗ ನಿನಗಿಂತ ಧೈರ್ಯವಂತ

ಜೇಮು : ಆಯ್ತು ಪೂಜಾರಿ, ಅವನ ಕತೆ ಮುಗಿತಂತಲೆ ಇಟ್ಕೊಳ್ಳೋಣ. ಅವನು ಬರೋದೆ ಇಲ್ಲಾ ಅಂತಾನೂ ಇಟ್ಕೊ. ಅದಕ್ಕೂ ಒಂದು ಸಮಯ, ಸಂದರ್ಭ ಅಂತಿರುತ್ತೆ. ಭೀಮನಾಯ್ಕನ ಹೆತ್ತವರ ಮುಂದೆ ಇಂತಹ ಕಪಟಿ ಮಾತಾಡೋದಕ್ಕೆ ಸ್ವಲ್ಪ ಮಾನಮರ್ಯಾದೆ ಬೇಕು. ಅದು ನಿನಗೆ ಇಲ್ಲಾ. ಅದಕ್ಕೆ ಏನು ಬೇಕೊ ಅದನ್ನ ಮಾತಾಡ್ತಿ. ಅವನು ಹುಲಿ, ಬರ್ತಾನ, ಬಂದೇ ಬರ್ತಾನ.

ಪಕ್ಕೀರ : ಏಯ್, ಕಂಡೀನಿ ಬಿಡು ಜೇಮು. ಯಾರೇನು ಅಂತ, ಅಲ್ಲಾ ನಮ್ಮೆದುರಿಗೆ ನಿನ್ನೆಮನ್ನೆ ಕಣ್ಣಬಿಟ್ಟು ಭೀಮನಾಯ್ಕನಿಗೆ ಇಲ್ಲದ ಪ್ರಾಮುಖ್ಯತೆ. ಲದೇಣಯಾದಲ್ಲಿ ನಮಗಾದ ಅನುಭವದಷ್ಟು ಅವನ ವಯಸ್ಸಿಲ್ಲಾ. ನಾನು ಸಾದ್ ಮಗ ಅಂದ ತಕ್ಷಣ ಅವನಿಗೆ ಎಲ್ಲಾಬೇಕ.

ರಾಮಿಬಾಯಿ : ಇರ್ಲಿಬಿಡು ಪಕ್ಕೀರನಾಯ್ಕ, ನನಮಗ ಕೆಲಸಕ್ಕ ಬಾರದವನು. ಅನುಭವ ನಿಮಗೆ ಆಗಿರೋದು, ನಾವೆಲ್ಲ ಹಾಗೆ ಬದುಕಿ ಬಾಳಿರುವುದು. ಹುಲಿ ಇಲ್ಲದಾಗ ನಾಯಿನರಿ ಬೊಗಳುತ್ತವೆ. ಬೊಗಳಲಿ, ಅವನು ಬಂದರೆ ತಿಳಿಯುತ್ತೆ. ಯಾಕೆ ವ್ಯರ್ಥ ಪ್ರಲಾಪ ಅಂತಿನಿ.

ಪೂಜಾರಿ : ನಡಿಯಲೆ, ಪಕ್ಕೀರ, ಈ ಖಾಲಿಪಿಲಿ ಮಂದಿತಾವ ಏನು ಒಣ ವಾದ ಮಾಡ್ತಿಯೇ. ಕೆಲಸಕ್ಕೆ ಬಾರದಂತ ವಿಷಯವನ್ನ ಹಿಡಿದು ತೌಡು ಕುಟ್ಟುವುದು ಬೇಡ. ಅವನು ಬರ್ಲಿಲ್ಲಾ ಆಗಲಿಲ್ಲಾ. ಇನ್ನೂ ಮುಂದೆ ನಾವೆ ಎಲ್ಲಾ.

ನಾನುಸಾದ್ : ಗಪ್ಪಾಗ್ರಿನ್ನ, ಯಾರು ಒಂದು ಬಿರುನುಡಿಯನ್ನ ಬಾಯಿಂದ ಉಸಿರೋದು ಬೇಡ. ಹೋದವನು ಹುಲಿ, ಎಂಥ ಬಾದಷ ಇದ್ರೂನೂ ತನ್ನ ಮಾತಿನ ಚಾಕಚಕ್ಯತೆಯಲ್ಲಿ ಮರಳು

ಮಾಡುವನು. ಅವನ ಬಗ್ಗೆ ಇಲ್ಲಸಲ್ಲಿದ ವಿಷಯ ಅವನು ಇಲ್ಲದಾಗ ಮಾತಾಡುವುದು ಉಚಿತವಲ್ಲ.

ಪೂಜಾರಿ : ಏನ್ ಮಳ್ಳ ಮಾಡ್ತಾನೋ, ನಾವು ಕಾಣದ್ದು. ಹೊತ್ತು ವಾಲ್ತು, ಕತ್ತಲಾಗುತ್ತೆ ಮತ್ತೆ ನಾಳೆ ಬೆಳಕು ಹರಿಯುತ್ತೆ.

ರಾಮಿಬಾಯಿ : ಯಾರು ನಿಮ್ಮನ್ನ ಜೊತೆಗೆ ಸೇರಿಸದಕ್ಕೆ, ನಾನು ನಿಮ್ಮನ್ನ ಶಿಫಾರಸ್ಸು ಮಾಡಿ ಸೇರಿಸಿದ್ರ ನನ್ನ ಬುಡಕ್ಕ ನೀರ ಬಿಡ್ತಿರಾ ಬರ್ಲಿ ಅವನು. ನೀವು ಉದ್ಧಾರ ಆಗಲ್ರೋ. ತಾಯಿ ಹೊಟ್ಟೆ ಉರಿಸಿದವನು ಯಾರು ಬದುಕಿಲ್ಲ ಭೂಮಿ ಮೇಲೆ ಅವನು ಬಂದ ಮೇಲಿದೆ ನಿಮ್ಮ ಮಾರಿಹಬ್ಬ. ತಡಿರಲೆ, ಬೇವರ್ಸಿಗಳ್ರಾ ತಡಿರಿ ಆಟು.

ಪಕ್ಕೀರ : ಬರಲ್ಲಾ, ಮರತುಬಿಡು. ಏನು ದೊಡ್ಡ ಪೊತಪ್ಪ ನಾಯ್ಕ, ಅವನು ಹೋಗಿರೋದು ಬಾದ್‌ಷನ ಬಳಿ. ಹೋದೊರು ವಾಪಾಸು ಬಂದಿಲ್ಲಾ ಹೂಂ.

ಜೇಮು : ಸದ್ದು. ಕುದುರೆ ಸದ್ದು ಕೇಳ್ತಿದೆ. ಒಂದೆ ಕುದುರೆ ಭೀಮ ಬರ್ತಿದ್ದಾನೆ. ಹೌದು, ಇದು ಭೀಮನ ಕುದುರೆ ಸದ್ದು.

ಪೂಜಾರಿ : ಭ್ರಮೆಯಲ್ಲೇ ಬದುಕು. ನಡಿಯಲೇ ಹೋಗಾಮ ಕೆಲ್ಸ ಬಹಳ ಐತೆ. ಅವನು ಬಂದ್ರೆನು ದಿರ್ಬೆವು ತರಲ್ಲ, ನಡಿ.

ರಾಮಿಬಾಯಿ : ಎಲ್ಲಿಗೆ ಹೊಂಟೆ ಇರು ಬಾದಷನ ಸಮಕ್ಷಮ ನಡೆದದ್ದು ತಿಳಿಯಬೇಡವೆ. ಏಯ್, ಮೂರ್ಖರ. ನಾನು ತಾಯಿ ಕಣ್ರೋ. ನನಗೆಲ್ಲಾ ಗೊತ್ತಾಗುತ್ತೆ. ಹೆತ್ತಹೊಟ್ಟೆ ಉರಸ್ತಿರಲ್ರೋ, ನೀವು ಏಳಿಗೆ ಆಗಾಕಿಲ್ಲ. ನಾನು ಒಂದ ಮಾತ ಹೇಳಿದ್ರ ನಿಮ್ಮ ಭುಜದ ಮೇಲೆ ನಿಮ್ಮ ತಲೆಗಳು ಇರೊದಿಲ್ಲ.

ಧರ್ಮ : ದೊಡ್ಡಪ್ಪ ಭೀಮ ಬಂದ (... ಓಡಿ ಬರುವನು)

ನಾನೂಸಾದ್ : ನಿಂತ್ಕೊಂಡು ಏನು ನೋಡ್ತಿದ್ದೀರಿ, ಅವನ ಸ್ವಾಗತಕ್ಕೆ ಏರ್ಪಾಡು ಮಾಡ್ರಿ. (ಎಲ್ಲರೂ ನಿರ್ಗಮಿಸುವರು). ನನ್ನ ಮಗ ವೀರ, ಕೈಲಾಗದ ಮಾತಿನ ಮಲ್ಲ ನಲ್ಲ ಸತ್ತಾನೆ ಹೊರತು ಬೆನ್ನು ಕೊಡೊದಿಲ್ಲ. ಸೇವಾಭಾಯ, ಮರಿಯಮ್ಮ ನಾನು ಕೃತಾರ್ಥನಾದೆ.

* * *

ದೃಶ್ಯ ೨

ಸನ್ನಿವೇಶ ೩

(ಭೀಮನ ಸ್ವಾಗತಕ್ಕೆ ಕೆಂಪುನೀರ ಹಾಕಿ ಹೆಂಗಸರು, ಹುಡುಗಿಯರು ಮುಂದಾಗುವರು).

ಭೀಮ : ಯಾಡಿ, ಇದೆಲ್ಲಾ ಯಾಕೆ? ನಾನೇನು ಯುದ್ಧಕ್ಕೆ ಹೋಗಿದ್ನಾ? ಮೈಸೂರು ಹುಲಿ ಟಿಪ್ಪು ಬಾದ್‌ಷರ ಭೆಟ್ಟಿಗೆ ಹೋಗಿದ್ದೆ.

ರಾಮಿಬಾಯಿ : ಮಗ, ಬಾದಾಷ್ಯನ ಭೆಟ್ಟಿಯಾಗೋದು ಯಾವ ಯುದ್ದಕ್ಕಿಂತ ಕಡಿಮೆ ಅಲ್ಲ. ದಾರಿಯಲ್ಲಿ ದುಷ್ಟ ಶಕ್ತಿಗಳ ಕಣ್ಣು ಬಿದ್ದಿರುತ್ತೆ, ಅದು ಹಾಳಾಗಿ ಹೋಗಲಿ ಅಂತ, ನೀವಾಳಿಸಿ ಒಗೆಯೋದು ನೀ ಸುಮ್ಕಿರು.

ಜೇಮು : ಭೀಮ ಹೇಳದೆ ಹಿಂಗ ಒಬ್ಬನೆ ಹೋಗಿದ್ದಿಯಾ, ನಾವೆಲ್ಲ ಪರಿಷಾನ್ ಆಗಿದ್ದಿವಿ. ಕನಿಷ್ಟ ಪಕ್ಷ ನನಗಾದರೂ ಹೇಳಿ ಹೋಗಬೇಕಿತ್ತು. ನಿನೇನು ಮಾಡಿಯಾ, ನಿನ್ನವಯಸ್ಸೆ ಅಂತಹದ್ದು ಬಿಡು.

ಭೀಮ : ಅಫ್ಜಲ್‌ಖಾನ್, ಒಬ್ಬನನ್ನೇ ಭೇಟಿಯಾಗುವುದಕ್ಕೆ ಆಹ್ವಾನಿಸಿದ್ದ. ಹಾಗಾಗಿ ಬೇರೆಯವರ ಅವಶ್ಯಕತೆ ಅಲ್ಲಿರಲಿಲ್ಲ. ಬಾದಾಷ ಎದುರಿಗೆ ನನ್ನ ವ್ಯಕ್ತಿತ್ವದ ಪ್ರಶ್ನೆ ಇತ್ತು. ಅದು ಅಲ್ಲದೆ ಪರಿಷಾನ್ ಆಗುವ ಪ್ರಮೇಯ ಎಲ್ಲಿದೆ ಅವರು ಒಟ್ಟಿಗೆ ಕರೆದಿದ್ದರು ಅಷ್ಟೆ ದಂಡಿಸಲು ಅಲ್ಲಾ.

ನಾನೂಸಾದ್ : ಆದರೂ ಮಗ, ನಮ್ಮವರನ್ನು ದೂರ ನಿಲ್ಲಿಸಬಹುದಾಗಿತ್ತು. ಒಬ್ಬನೇ ಹೋಗಿದ್ದಿಯಾ, ಆತಂಕ ಹೆಚ್ಚಾಗಿತ್ತು. ದೊಡ್ಡವರ

ಮಾತು, ಅವರು ಮನಸು ಬದಲಿಸಿ ನಿನಗೆ ಹೆಚ್ಚು ಕಡಿಮೆ ಆಗಿದ್ದರೆ? ನಮ್ಮಗತಿ ಏನು? ಯೋಚಿಸುವುದು ಬೇಡವೆ.

ಭೀಮ : ಅಲ್ಲಾ ಬಾಪು, ಬಾದ್‌ಷ, ಶೂರರು, ತಿಳುವಳಿಕೆ ಉಳ್ಳವರು ಬೇಕಾಬಿಟ್ಟಿ ದಂಡಿಸಲಿಕ್ಕೆ ಅವರೇನು ಬುದ್ದಿಹೀನರಲ್ಲಾ. ತಾಕತ್ತು ಇರುವವರನ್ನ ಇಷ್ಟ ಪಡುತ್ತಾರೆ. ಅದೂ ನೀವೆಲ್ಲಾ ಇರುವಾಗ ಹೆದರುವುದೇತಕ್ಕೆ? ಅಂದಂಗೆ

ನಿಮ್ಮ ಹತ್ತಿರ ಮಾತಾಡಬೇಕಿದೆ.

ಪೂಜಾರಿ : ಶಹಬ್ಬಾಷ್ ಭೀಮ ಬಾದ್‌ಷ ಟಿಪ್ಪು ರನ್ನ ಭೇಟಿಯಾಗಿದ್ದೆ ಯೋ..? ದಾರಿ ನಡುವೆ ತಪ್ಪಿಸಿಕೊಂಡು.... ಇಲ್ಲಿ ಬಂದು ನಾಟಕ ಮಾಡ್ತಿದಿಯೊ, ನನಗೆ ಯಾಕೊ ಅನುಮಾನ.

ಭೀಮ : ಏಯ್, ಗುಳ್ಳೆನರಿ ಪೂಜಾರಿ ನಿನ್ನ ಯೋಚನೆಯನ್ನು ಯಾಕೆ ಹೇಳಿ ಹಾಸ್ಯಾಸ್ಪದಗೊಳ್ತಿಯಾ. ಹೋಗು ವಯಸ್ಸಿನಲ್ಲಿ ದೊಡ್ಡವನು ಅಂತ ಬಿಡ್ತಿದ್ದೀನಿ. ಇಲ್ಲಾಂದ್ರೆ ಇಲ್ಲೆ ಸಿಗದು ನಿನ್ನ.

ಫಕ್ಕೀರ : ಭೀಮ, ನೀನೇನು ದೊಡ್ಡ ಪೋತಪ್ಪನಾಯ್ಕ ಅಂದ್ಕೊಂಡಿ ಏನು? ನಿಂದು ಏನು ನಮ್ಮತಾವ ನಡಿಯಂಗಿಲ್ಲ. ಏನೊ ನಿಮ್ಮಪ್ಪ ನಾಯಕ ಅಷ್ಟೆ.

ಭೀಮ : ಫಕ್ಕೀರ, ನೀನು ಏನು ನಡೆಸೋದಕ್ಕೆ ಬರ್ತಿಯಲ್ಲಾ ನಡೆಸಿದರೆ ನಿಮ್ಮನ್ನೆಲ್ಲಾ ಹೆಡಮುರಗಿ ಕಟ್ಟಿ ಬಿಸಾಕಿ ಬಿಡ್ತಿದ್ದೆ ನಾರಿಹಳ್ಳದಾಗ. ಆದ್ರ ಅಪ್ಪನ ಮುಖ ನೋಡಿ ಸುಮ್ಮನಿದೀನಿ. ಕಾಲ ಬರ್ಲಿ ತೋರಿಸ್ತಿನಿ ನಾನು ಏನು ಅಂತ.

ಜೇಮು : ಭೀಮ, ಮಾತಾಡೋ ಸಮಯವಲ್ಲ, ಗಪ್ಪಾಗು (ಪ್ರಯತ್ನಪಟ್ಟು ಚರ್ಚೆ ನಿಲ್ಲಿಸಿದ), (ಫಕ್ಕೀರ, ಪೂಜಾರಿ ನಿರ್ಗಮನು)

ಭೀಮ : (ತಮ್ಮ ತಾಂಡದಲ್ಲಿಯೇ ಪ್ರತಿರೋಧವಿರುವುದನ್ನು ಗಮನಿಸಿ ಇದನ್ನು ತೆಗೆದುಹಾಕಲು ಪ್ರಯತ್ನಿಸಿದ). ಮಾಮ ಇಂತಹ ಜನರು ನಮ್ಮೊಳಗೆ ಇದ್ದಾರ! ನಮ್ಮಪ್ಪನ್ನ ಎಷ್ಟು ಗೋಳು ಹೊಯ್ಕಂಡಿರಬಹುದು. ಇಲ್ಲ ಇದಕ್ಕೊಂದು ಪರಿಹಾರ ಕಂಡುಹಿಡಿಯಲೇಬೇಕು. ಇಲ್ಲಾಂದ್ರೆ ನಾಳೆ ಇವರು ಏನಾದರೂ ಎಡವಟ್ಟು ಮಾಡಿದರೆ ನಮ್ಮ ವ್ಯವಹಾರ ಹಾಳು.

ಜೇಮು : ಅಯ್ಯೋ, ಆ ಕತೆ ಏನು ಕೇಳ್ತಿಯ ಈಗ ಮಾತಾಡೋದು

ಸರಿಯಲ್ಲ ಮದ್ಲು ಬಾದ್‌ಷರ ಡೇರೆಯಲ್ಲಿ ನಡೆದ ವಿಷಯ ಏನು?

ಭೀಮ : ಅದ, ಬಾದಷ ಟಿಪ್ಪು ತಮ್ಮ ಕೈಯಾರೆ ಕೊಟ್ಟ ಈ ಖಡ್ಗ ನೋಡು. ಅವರು ಎಂಥ ದೊಡ್ಡ ಮನುಷ್ಯ. ನಮ್ಮ ಬಗ್ಗೆ ಅಪಾರ ಗೌರವ ಇದೆ ಅವರಿಗೆ.

ಜೇಮು : ಓ! .(ಅವನನ್ನು ಅಪ್ಪಿಕೊಳ್ಳುವನು)

ಭೀಮ : ಅಷ್ಟೇ ಅಲ್ಲಾ ನಮ್ಮ ಜೊತೆಗೆ ನೇರವಾಗಿ ವ್ಯಾಪಾರ ಮಾಡೋದಕ್ಕೆ ಒಪ್ಪಿಕೊಂಡಿದ್ದಾರೆ. ಅವರಿಗೆ ನಮ್ಮ ದಿನಸಿ ಸಾಮಾನುಗಳು ಬೇಕೆ ಬೇಕಾಗಿವೆ. ಅವರ ಬೇಡಿಕೆ ಪೂರೈಸುವುದು ನಮ್ಮ ಜವಾಬ್ದಾರಿಯಾಗಿದೆ ಅದಕ್ಕೆ ಬೇಕಾದ ಎಲ್ಲಾ ತಯಾರಿ ಮಾಡಬೇಕು. ನಾನು ಅವರಿಗೆ ಮಾತುಕೊಟ್ಟಿದ್ದೇನೆ. ಅದು ಸುಳ್ಳಾಗಬಾರದು.

ಜೇಮು : ಬಹಳ ಒಳ್ಳೆಯ ಸುದ್ದಿ ಕೊಟ್ಟೆ ಭೀಮ. ನಿಮ್ಮ ಬಾಪೂನ ಕನಸು ನನಸು ಮಾಡಿದೆ. ಯಾರಾದರೂ ರಾಜರ ಜೊತೆಗೆ ಒಪ್ಪಂದ ಆದೀತು ನಾಕು ಕಾಸು ಲಾಭ ಆದರೆ ತಾಂಡದ ಜನ ಸುಖವಾಗಿದ್ದರು ಎಂಬುದೇ ಅವನ ಚಿಂತೆ. ಆದರೆ

ಭೀಮ : ಬಾದಷ ಇನ್ನೇನು ಹೇಳಿದರು ಗೊತ್ತೆ?

ಜೇಮು : ಅದೇ ತಾನೆ ವ್ಯಾಪಾರದ ವಿಷಯ.

ಭೀಮ : ಅಲ್ಲಮಾಮ ವಿಷಯ ಅದಲ್ಲಾ, ನೀನು ಶ್ರೀರಂಗಪಟ್ಟಣಕ್ಕೆ ಯಾವಾಗ ಬಂದರೂ ದಿವಾನಿ ದರ್ಬಾರಿನಲ್ಲಿ ಯಾವಾಗ ಬೇಕಾದರೂ ಪ್ರವೇಶಿಸುವ ಹಕ್ಕನ್ನು ದಯಪಾಲಿಸಿದ್ದಾರೆ. ಯಾರ ಅಪ್ಪಣೆಯನ್ನು ಕಾಯದ ಸುಲ್ತಾನರ ಬಳಿ ಹೋಗಬಹುದು.

ಜೇಮು : ನಿಜವಾಗಿಯೂ ಹೆಮ್ಮೆ ಅನಿಸುತ್ತಿದೆ. ಅದೇನು ಮೋಡಿಮಾಡಿದೆ ಬಾದ್‌ಷ ಇಷ್ಟೆಲ್ಲಾ ಅನುಕೂಲಗಳನ್ನು ನೀಡಿದ್ದಾನೆ ನಿನಗೆ. ನಿನ್ನಂತ ಶೂರನಿಗೆಇದು ಸಾಧ್ಯವಾಗಬೇಕು.

ಭೀಮ : ಮಾಮ, ಈಗ ಬಾದಷನೂ ಕೂಡ ಬ್ರಿಟಿಷರ ಉಪಟಳದಿಂದ ಸೋತು ಹಣ್ಣಾಗಿದ್ದಾನೆ. ಶತ್ರುವಿನ ಶತ್ರುಗಳು ಮಿತ್ರರು. ಮತ್ತೊಂದು ವಿಷಯ. ಯಾವುದೇ ಕ್ಷಣದಲ್ಲಿ ಬೇಕಾದರೂ ಯುದ್ದ ನಡೆಯಬಹುದು. ಹಾಗಾಗಿ ಬಾದ್‌ಷಗೆ ನಮ್ಮ ಅವಶ್ಯಕತೆ ಬಹಳನೆ ಇದೆ.

ಜೇಮು : ಏನು? ಯುದ್ದ ಯಾರು, ಯಾರಿಗೆ? ಯವಾಗ ನಡೆಯುತ್ತೆ?

ಭೀಮ : ಇನ್ಯಾರಿಗೆ ಕೆಂಪು ಜನರಿಗೆ ಮತ್ತು ಬಾದಷ ಅವರಿಗೆ. ಏನೇ ಆದರೂ, ಸೈನ್ಯಕ್ಕೆ ಬೇಕಾದ ದವಸವನ್ನ ಪೂರೈಸುವ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಈ ಕೆಲಸವನ್ನ ನಾವು ಬಹಳ ನಾಜೂಕಿನಿಂದ ಮಾಡಬೇಕು ನಾವು ಆಹಾರ ಸಾಮಗ್ರಿಗಳನ್ನ ಹೇಗೆ ಸಾಗಿಸುತ್ತಿದ್ದೇವೆ ಎಂಬುದು ಯಾರಿಗೂ ತಿಳಿಯಬಾರದು.

ಜೇಮು : ಅದನ್ನ ನಾವು ಬೇಕಾದಂಗೆ ಮಾಡ್ತಿವಿಬಿಡು, ಅದೆಂಥ ವೈರಿ ಕಾವಲು ಕಾಯಲಿ, ಹೇಗೆ ಸಾಗಬೇಕಂತ ನಮಗೆ ಹೇಳಿಕೊಡಬೇಕೆ. ಈ ವಿಷಯವನ್ನು ನಿನ್ನ ತಂದೆಗೆ ಹೇಳಬೇಕಿತ್ತು. ಯಾಕಂದ್ರೆ, ಎಷ್ಟೊ ಸಂದರ್ಭದಲ್ಲಿ ಆತ ಇಂಥಹ ಕೆಲಸಮಾಡಿ ಪಾರಾಗಿದ್ದಾನೆ.

ಭೀಮ : ಹೇಳುವುದರೊಳಗೆ ಆ ಇಬ್ಬರು ಧೂರ್ತರು ಪವಡಿಸಿದರು. ಬಾಯಿಗೆ ಬಂದಂತೆ ಮಾತಾಡಿದರು. ಹೋಗಲಿ, ಆ ಪುಟಗೋಸಿಗಳ ಮಾತೇಕೆ. ದೀಪಾವಳಿಯ ತಯಾರಿ ಹೇಗಿದೆ? ಈ ವರ್ಷ ಹಿಂದಿನ ವರ್ಷಗಳಿಗಿಂತ ಅದ್ದೂರಿಯಾಗಬೇಕು. ಬಾದ್‌ಷ ಬಳ್ಳಾರಿ ಕೋಟೆಯಿಂದ ವಾಪಾಸು ಆಗುವಾಗ ನಮ್ಮ ತಾಂಡಕ್ಕೆ ಬಂದರೂ ಅಚ್ಚರಿ ಇಲ್ಲ.

ಜೇಮು : ಒಂದ ಮಾತು ಭೀಮ, ನೋಡು ಆ ಪೂಜಾರಿ, ಫಕ್ಕೀರನ್ನ ಅಷ್ಟು ಕೇವಲವಾಗಿ ಕಾಣಬೇಡ ಮಹಾವಂಚಕರು, ಸೂಕ್ಷ್ಮವಾಗಿ ಅವರಿಂದ ದೂರ ಉಳಿಯುವುದು ಮತ್ತು ದೂರ ಕಾಯ್ದುಕೊಳ್ಳುವುದು ಒಳ್ಳೆಯದು. ಇಲ್ಲಾಂದ್ರೆ ನಿನ್ನ ಯೋಚನೆ ಯೋಜನೆಗಳಿಗೆ ಎಳ್ಳುನೀರು ಬಿಡ್ತಾರೆ. ಹಾಲಿಗೆ ಒಂದು ಹನಿ ಹುಳಿ ಹಿಂಡಿದರೆ ಸಾಕು ಮೊಸರಾಗುತ್ತೆ. ಹಾಗೇನೆ ಇವರು, ಒಬ್ಬೊಬ್ಬರೆ ಸಾಕು ಕೇಡು ಬಗೆಯಲು

* * *

ದೃಶ್ಯ ೨

ಸನ್ನಿವೇಶ ೪

(ದೀಪಾವಳಿಯ ಹಬ್ಬ ಆಚರಣೆಗೆ ಸಿದ್ದತೆಗಳು ನಡೆಯುತ್ತಿದೆ).

ಭೀಮ : ಏಯ್, ಗೋಮ್ಲಿ ಸುಮ್ಮನೆ ಹಾದಿ ಬಿಡು, ಇಲ್ಲಾಂದ್ರೆ ಕುದುರೆಯನ್ನೆ ಮೇಲೆ ಹತ್ತಿಸ್ತೀನಿ ಬಿಡ್ತಿನಿ ನೋಡು ನನಗೆ ಸಿಟ್ಟು ತರಸಬೇಡ, ಕುದುರೆ ನಿನ್ನ ಮೇಲೆ ಬಿಟ್ಟೆ, ಬೇಡ ಸರಿ, ಜಾಣಮರಿ ಅಲ್ವಾ, ಹೂಂ.

ಗೋಮ್ಲಿ : ಅಷ್ಟಾದರೂ ಮಾಡಿ ಪುಣ್ಯ ಕಟ್ಕೋ. ನೀನಿಲ್ಲದೆ ಬದಕೊದಕ್ಕಿಂತ ನಿನ್ನ ಕುದುರೆ ಕಾಲಕೆಳಗೆ ಬಂದು ಸಾಯೋದು ಲೇಸು. ಏಯ್ ಮಾವ, ನಿನಗ ನಾ ಅಷ್ಟು ಬೇಡ ಆಗೀನಿ. ಒಂದು ವಾರ ಆತು ಕಂಡು. ನಿನಗಾಗಿ ಒಬ್ಬಳು ಕಾಯ್ತಾಳೆ ಅನ್ನೋದು ತಿಳಿಬೇಡ ನಿನಗೆ.

ಭೀಮ : ಸಿಟಾಗಬೇಡ ಮೊದಲು ಕೇಳು, ನೋಡುಗೋಮ್ಲಿ ನನ್ನ ಮ್ಯಾಲ ಇಡಿ ತಾಂಡದ ಜವಾಬ್ದಾರಿನ ಐತಿ, ನೀ ಅಂದ್ಕೊಂಡಂಗ ನಾನೇನು ಕಾಲಕಳಿತಿಲ್ಲಾ ಖಾಲಿಪುಕ್ಸಟ್ಟೆ.

ಗೋಮ್ಲಿ : ಅದಕ್ಕೆ ಅಲ್ವಾ ನಾನು ತಲಿ ಕೆಡಿಸಿಕೊಂಡಿರೋದು. ಮದುವಿ ಪ್ರಸ್ತಾಪ ಮಾಡಂದ್ರ ಅದನ್ನೂ ಮಾಡುವಲ್ಲಿ ನಾಳೆ ಏನಾರು ಹೆಚ್ಚುಕಮ್ಮಿ ಆತಂದ್ರ ನಾ ಅಂತು ಜೀವಂತ ಇರಾಕಿನ ಅಲ್ಲ. ನೋಡು ನೀ ಹಿಂಗ ಹುಡುಗಾಟ ಮಾಡಬೇಡ ನಿನ್ನ ಬಿಟ್ಟ ನನಗೆ ಇರಾಕ ಆಗೋದಿಲ್ಲ.

ಭೀಮ : ಏ, ಎಬಡಿ, ಹಿಂಗ್ಯಾಕ ಮಾತಾಡಕತ್ತಿ. ಯಾವ ಕಾಲಕ್ಕ ಏನಾಗ

ಬೇಕು ಅದು ಆಕೈತಿ. ಸ್ವಲ್ಪ ತಡಿ, ಎಲ್ಲಾ ಸರಿಹೋಗುತ್ತೆ ನೀನು ಮದುಮಗಳಾಗ್ತಿಯ.

ಗೋಮ್ಲಿ : ನೀ ಹಂಗ ಅಂದ್ಕೊಂಡಿ ಆದ್ರ ಮಾವ, ನಾನು ಕುಂಬಾರ ಮಾಡಿದ ಮಡಕಿ ಹಂಗ. ಯಾವುದಾರ ಬೇವರ್ಸಿ ನಾಯಿ ಮುಟ್ತಂದ್ರ ಕೆಲ್ಸಕ ಬಾರದ ಅಪವಿತ್ರ (ಕಣ್ಣಂಚಲಿ ನೀರು) ಆವಾಗ ಯಾರು ನನಗೆ ದಿಕ್ಕು? ನಿನಗ ಬೇಕಾದರ, ಎಂಥ ಬೇಕಂತ ಹುಡುಗಿಯರು ಸಿಗ್ತಾರ. ನನಗತಿ ಒಮ್ಮೆ ಯೋಚನೆ ಮಾಡು. ಹೆಣ್ಣು, ದೊಡ್ಡವಳಾದರೆ ಸಾಕು ಹದ್ದಿನ ಕಣ್ಣುಗಳು ಮೈ ಮೇಲೆ ಹರಿದಾಡತಾವ.

ಭೀಮ : ಛೇ, ಛೇ, ನಾ ಇರೋವಾಗ ನಿನ್ನ ಮುಟ್ಟುವ ನಾಯಿ ಅದೆಂತದ್ದು. ನಿನ್ನ ಕೂದಲು ಕೊಂಕಿದರು ರಕ್ತ ಪಾತ ನಡೆಯುತ್ತೆ ಅಂತಹದ್ದರಲ್ಲಿ ನಿನ್ನ ಮೈ ಮೇಲೆ ಕೈ ಹಾಕುವ ಗಂಡಸಾದರೂ ಯಾರದಾನ? ಅವನು ನಿನ್ನ ಮೈ ಮುಟ್ಟಿದ್ದೆ ಆದರೆ ಕೈ ಜೊತೆಗೆ ರುಂಡವನ್ನೆ ಕತ್ತರಿಸಿ ಬಿಡ್ತಿನಿ.

ಗೋಮ್ಲಿ : ಯಾಕ, ನಿನಗ ಗೊತ್ತಿಲ್ಲೇನು. ನಮ್ಮಪ್ಪನ ಅಸಹಾಯಕತೆಯನ್ನ ಬಳಸಿಕೊಂಡು ಯಾರು ಹೇಗೆ ನನ್ನ ವಂಚನೆ ಮಾಡೋದಕ್ಕೆ ಹೊಂಚು ಹಾಕಿದ್ದಾರಂತ. ನಮ್ಮಪ್ಪಗೆ ನಾನು ದೊಡ್ಡ ತಲಿನೋವು ಆಗಿನಿ. ಮೊದಲು ಮದವಿ ಆಗಿ, ಅದನ್ನ ಕಡಮಿಮಾಡು.

ಭೀಮ : ಈಗ ಆ ಮಾತುಗಳನ್ನು ಆಡಬೇಡ. ತಾಂಡದ ಮಂದಿ ಅದಾರ ಎಲ್ಲಾನೂ ನೋಡಾಕ ಹತ್ಯಾರ ನೀ ಗಪ್ಪಾಗು.ಹೌದು ಮೆರಾದಲ್ಲಿ ಏನ ಹಾಕಬೇಕ ನಿನಗ?

ಗೋಮ್ಲಿ : ಏನ ಹಾಕ್ತಿ? ಹೂಂ ಏನಾರು ಹಾಕು

ಭೀಮ : ಕೇಳು ಏನ ಬೇಕು?

ಗೋಮ್ಲಿ : ನಿನ್ನ ಪ್ರೇಮ ಭಿಕ್ಷೆಯನ್ನ ಹಾಕು. ಸಂತೋಷದಿಂದ ನಾಲ್ಕು ಕ್ಷಣ ನಿನ್ನ ಹೆಂಡತಿಯಾದ ಮೇಲೆ ನಿನಗಾಗಿಯೇ ಹುಟ್ಟಿದ ನಾನು ಜೀವ ಬಿಟ್ಟರು ಸರವಾಗಿಲ್ಲ, ಕೇವಲ ನಿನ್ನವಳಾಗಿಯೇ ಸಾಯಬೇಕು. ಬಂಗಾರ, ಬೆಳ್ಳಿ ಊಹೂಂ, ಎಲ್ಲಾ ನೀನೆ ನಿನ್ನ ತೊಡೆ ಮೇಲೆ ತಲೆ ಇಟ್ಟು ಸತ್ರೆ ಸಾಕು ನೋಡು.

ಭೀಮ : (ಅವಳ ಬಾಯಿ ಮುಚ್ಚಿ) ಛೆ! ಬಿಡ್ತು ಅನ್ನು ಯಾಕಿಂಗೆ ಮಾತಾಡ್ತಿಯಾ. ಅಲ್ಲಾ ಅಂತ ಘಟನೆ ನಡೆದರೂ ನನಗೆ

ಯಾಕೆ ತಿಳಿಸಲಿಲ್ಲಾ. ಹೇಳು ಗೋಮ್ಲಿ ಯಾರು ನಿನ್ನ ಕೆಣಿಕಿದವರು. ಹೇಳು? ಯಾರವರು. ಅವರ ಹೆಡಮುರಿಗೆ ಕಟ್ತಿನಿ.

ಗೋಮ್ಲಿ : ಯಾಕೆ ತಾಂಡದ ರಿವಾಜು ಗೊತ್ತಿಲ್ಲೇನು. ನಿಮ್ಮಪ್ಪ ಹಟ್ಟಿ ನಾಯಕನೆ ಎಷ್ಟು ಪಂಚಾಯ್ತಿಗಳನ್ನ ಮಾಡಿಲ್ಲ. ಮದುವೆ ಯಾದ ಯಾರಾದರು ಗಂಡಸು ನಾನು ಮುಟ್ಟಿದ್ದೀನಿ ಇವಳನ್ನ ಅಂದರೆ, ಸಾಕು ಸಣ್ಣ ಹುಡುಗಿಯನ್ನು ಮುದುಕನಿಗೆ ಕಟ್ಟಿದ ಉದಾಹರಣೆಗಳು ಎಷ್ಟಿಲ್ಲಾ.

ಭೀಮ : ...(ಕೈ ಹಿಸಕುತ್ತಾ) ಊ ಹೂಂ... ಹಾಗೇನು ಆಗೋದಿಲ್ಲ.

ಗೋಮ್ಲಿ : ಏನ್ಮಾಡ್ತಿ, ಹಾಂ, ಏನ್ಮಾಡ್ತಿ (ಅವನ ಮೇಲೆ ಏರಿ ಹೋಗುವಳು) ಬಾಯಿ ಮಾತು ಬೇಡ ಸುಮ್ಮನೆ ಮದುವೆಯಾಗು.

ಭೀಮ : ದಯವಿಟ್ಟು ಹೇಳು ಯಾರವನು? ನಿನ್ನ ಮುಟ್ಟಾಕ ಪ್ರಯತ್ನ ಮಾಡಿದವನು ಯಾರು? ಅವನನ್ನ ಕಡಿದು ಪಾತಾಳದೊಳಗೆ ಹುಗಿತೀನಿ. ಏನಂತ ತಿಳಿದಿಯಾ, ಹಿಂದೆ ಮುಗಿತು ಈಗ ಎಲ್ಲ ಬದಲಾಗಿದೆ.

ಗೋಮ್ಲಿ : ಹೂಂ, ಎಲ್ಲಾ ಆದಮೇಲೆ ಕೊಲ್ಲುವುದಕ್ಕಿಂತ, ನಿಮ್ಮಪ್ಪ, ಅಮ್ಮರಿಗೆ ಒಪ್ಪಿಸಿ. ನಮ್ಮ ಸಗಾಯಿ ಮಾಡಿಸು ಆವಾಗ ಯಾರು ನನ್ನ ತಂಟೆಗೆ ಬರುವುದಿಲ್ಲ. ನಾನು ನಿನ್ನವಳಾಗುತ್ತೇನೆ. ಅಷ್ಟೆ ಇದರಲ್ಲಿ ಆಲೋಚನೆ ಮಾಡುವುದಾದರೂ ಏನಿದೆ ಹೇಳು?

ಭೀಮ : ಅಷ್ಟೇ ತಾನೆ? ಸಗಾಯಿ ಮಾಡಿಸುವ ಜವಾಬ್ದಾರಿ ನನ್ನದು ಈಗಲಾದರೂ ನಗು ಮಹರಾಯ್ತಿ. ಸಿಟ್ಟಲ್ಲಿ ನಿನ್ನ ಮುಖ ಚೆನ್ನಾಗಿರಲ್ಲ ಹೂಂ. ಹೂಂ....

ಗೋಮ್ಲಿ : ಅಷ್ಟುಮಾಡಿ ಪುಣ್ಯ ಕಟ್ಕೊ...(ನಗುವಳು)

ಭೀಮ : ಎಷ್ಟು ಮಣ

ಗೋಮ್ಲಿ : ನಿನ್ನ...(ಹೊಡೆಯಲು ಓಡುವಳು)

ಭೀಮ : ಆಯ್ತು ಮದಲು ಹೊರಡಿನ್ನ, ಯಾರಾರು ನೋಡಿದ್ರ ಮಾನಮರ್ಯಾದಿ ಹರಾಜ ಆದೀತು. ಮಂದಿ ಸುಕಾಸುಮ್ಮನೆ ಪ್ರಚಾರ ಹಬ್ಬಿಸುತ್ತಾರೆ. ನಮ್ಮ ಮನಸ್ಸಿನೊಳಗಿನ ಪವಿತ್ರತೆಯನ್ನು ಬೇರೆಯವರು ಆಡಿಕೊಳ್ಳುವಂತೆ ಯಾಕೆ ಮಾಡಬೇಕು?

ಗೋಮ್ಲಿ : ಯಾಕ, ನಾ ನಿನ್ನ ಮದ್ವಿ ಆಗೋಳದೀನಿ, ಯಾವಾನು ಮಾತಡಿಕೊಂಡರೇನು? ನನಗೆ ಏನು ಫರ್ಕ ಬಿಳಲ್ಲ.

ಭೀಮ : ಇನ್ನೂ ನಿಶ್ಚಯ ಆಗಿಲ್ಲಾ...ಕಾಲ ಪಾಡಿಲ್ಲ ನಡಿಸುಮ್ನೆ.

ಗೋಮ್ಲಿ : ತಾಂಡದಾಗ ಅಷ್ಟೆ ಯಾಕ, ಸುತ್ತಮುತ್ತಲ ತಾಂಡಗಳಲ್ಲಿ ಯಾರಾದರೂ ಗಂಡಸು ಅಂತಿದ್ರ ಅದು ನೀನ. ಸುಲ್ತಾನರ ಸಮಕ್ಷಮ ನಿನ್ನ ಧೈರ್ಯದ ಚರ್ಚೆಯಾಗುತ್ತೆ ಅಂದ್ರ ನೀ ಅಸಮಾನ್ಯ. ನೀ ನನ್ನ ಗಂಡ ಆಗ್ತಿ ಅಂತ ನೆನಪಿಸಿಕೊಂಡ್ರೆನೆ ರೋಮಾಂಚನ ಆಗುತ್ತೆ.

ಭೀಮ : ಸಾಕು, ನೀ ಮನಿಗ ಹೊರಡು ದಾರಿ ಪಾಡಿಲ್ಲ. ಬರಿ ಕನಸು ಕಾಣಬೇಡ. ನಾನು ಹುಟ್ಟಿರುವುದೆ ನಿನಗಾಗಿ.

ಗೋಮ್ಲಿ : ಈ ಹುಲಿ ನನ್ನ ಕೂಡಿರುವಾಗ ಮತ್ಯಾವ ಹುಲಿ ನನ್ನ ಕಡೀಗ ಬರಾಕ ಸಾಧ್ಯವಾದೀತು? ಹೂಂ, ಹೇಳು ಮಾವ.

ಭೀಮ : ಲೇ, ಗೋಮ್ಲಿ, ಮಾತಿನೊಳಗೆ ನಿನ್ನ ಸೋಲಿಸೋದಕ್ಕೆ ಆದೀತೆ ನೋಡ ಕೌಳ ಆಗಾಕ ಹತ್ಯತಿ. ನನ್ನ ಮಾತ ಕೇಳು ಗಡಾನ ಮನಿಸೇರ್ಕೊ. ನಡಿ ಹೂಂ, ನಾಳೆ ಸಿಗೋಣ ಈಗ ಹೊರಡು.

ಗೋಮ್ಲಿ : ಆತು ಬಿಡ ಭೀಮನಾಯ್ಕ ಹೊಕ್ಕೀನಿ (ಮುನಿಸಿಕೊಂಡು ಹೊರಡುವಳು) ಗಡಾನ ಮಾತು ಮುಂದುವರಿಸು ಇಲ್ಲಿಕ್ರ ನಾನೆ, ಬಂದು ಮಾತಾಡಬೇಕಾಗುತ್ತೆ ನೋಡು. ನಮ್ಮ ಅತ್ತೆ ಮಾವನವರನ್ನ ಕೇಳಿದೆ ಅಂತಹೇಳು. ಅವರ ಸೇವೆ ಮಾಡಾಕ ನಾನು ಬರಾಕ ಹತ್ತಿನಿ ಅನ್ನೋದನ್ನು ಹೇಳಿ ಬಿಡು.

* * *

ದೃಶ್ಯ ೨

ಸನ್ನಿವೇಶ ೫

(ಗೋಮ್ಲಿ ಸ್ವಲ್ಪ ದೂರ ಹೊದಾಕಿ ಮಂದಿ ನೋಡಿ ಅಂಜುತಾ ಹಿಂಜರಿಯುವಳು).

ಗೋಮ್ಲಿ : ಯಾರು ಅಟಕಾಯಿಸಿಕೊಂಡ್ರಪ್ಪ ಈ ಹೊತ್ನಾಗ(ಅಂಜುತ್ತಲೇ ಹೊರಟಳು) ಯಾ....ಯಾರು? ಯಾರಲ್ಲಿ? ಮಾತಾಡ್ರಿ.

ಪೂಜಾರಿ : ಏಯ್, ಯಾರದು? ನಿಲ್ಲು ಅಲ್ಲೆ, ಯಾರನೀನು? ಯಾಕೆ ಈ ಮಕ್ಕರಗೌಳದಾಗ.

ಗೋಮ್ಲಿ : (ಸರಸರನೆ ಅವರನ್ನ ದಾಟಲು ಮುಂದಾಗುವಳು) ನಾನು.

ಫಕ್ಕೀರ : ನೀನಂದ್ರ? ಏನು ದೆವ್ವನ, ಭೂತನಾ, ಏನು? ರಾಜಕುಮಾರಿನ, ದೇವತೆ ನಾ, ಏನಾದರೂ ಒಂದು ಇರಬೇಕಲ್ಲ. (ಅವಳಿಗೆ ಅಡ್ಡಬರುವವನು.) ಓ ನೀನು ಜಿಂಕೆ ಮರಿ. ನಿನಾಗೆ ಬಂದು ಬಲಿಗ ಬಿದ್ದಿ. ನಮ್ಮ ಅದೃಷ್ಟ ನೋಡು ಹೆಂಗೈತೆ.

ಗೋಮ್ಲಿ : ದಾರಿಬಿಡು, ನಾನು ವಿಸಳಾವತ್ ವಂಶದ ಗೋಮ್ಲಿ. ಹೆಂಗೈತೆ ಮೈಯಾಗ? ಒದ್ರ ಎದ್ದ ನಿಲ್ಲಾಕ ಆಗಲ್ಲ ನಿನಗೆ ಹುಡುಗಿ ಬೇಕಾ? ಸರಿಯೋ ಬೇವರ್ಸಿ ನನ್ನ ಅಷ್ಟು ಹಗರಂತ ತಿಳಿಬೇಡ. ಸಿಟ್ಟ ಬಂತು ನಾ ಏನಂತ ನನಗೆ ತಿಳಿಯಲ್ಲ.

ಪೂಜಾರಿ : ಮುಂದಿನ ಮನಿ ಜೋಗಡಸೋಮ್ಲ ನಾಯ್ಕನ ಮಗಳು ಗೋಮ್ಲಿ ಯಾಕೆ, ಇಷ್ಟೊತ್ತಲ್ಲಿ, ಎಲ್ಲೋಗಿದ್ದೆ. ಹರೆಯದ ಹುಡುಗಿ ಹಿಂಗ

ಒಬ್ಬಾಕಿನೆ ಕಾಡಿನೊಳಗೆ ಬರಬಾರದಂತ ತಿಳಿಲಿಲ್ವಾ, ಪಾಪ ನಿನಾದರೂ ಏನಮಾಡಿಯಾ, ತುಂಬುಯೌವನ ರಾಠೋಡ್ ಹುಡುಗರು ಸೊಪ್ಪು ಹಾಕ್ತಿಲ್ಲಾ. ಅಂದಂಗ ನೀ ಏನು ಯೋಚನೆ ಮಾಡಬೇಡ. ವಯಸ್ಸದರೂ ತಾಕತ್ತೈತೆ ನಾನೇ ಇಟ್ಕೊಂಡು ಬಿಡ್ತಿನಿ ಬಿಡು ನಿನ್ನ. ನೊಡಾಕ ಪಗಡದಸ್ತಾಗಿದಿಯಾ

ಗೋಮ್ಲಿ : (ಅಂಜುತ್ತಾ) ಇಲ್ಲೇ ಹಾಗೆ ಸುತ್ತಾಡೋಣ ಅಂತ ಹೋಗಿದ್ದೆ ಮಾವ. ನಮ್ಮ ತಮ್ಮ ಮೀರಾ ಬಂದಿದ್ದ ಏನೋ ಕೆಲ್ಸಬಂತು ಅಂತ ಹೋದ ನಾನು. (ನೆಪಹೂಡಿ ತಪ್ಪಿಸಿಕೊಳ್ಳಲು ನೋಡಿದಳು)

ಫಕ್ಕೀರ : ಲೇ ಪೂಜಾರಿ, ಮಾಲು ಒಳ್ಳೇದೈತಿನೋಡು. ನೀನು ತಿನ್ನೋದು ಇಂತಹವನ್ನೇ. ಅವನವ್ವನ, ತಾಂಡದಾಗ ಬಡಮಂದಿಗ ಬೂದಿ ಮಂತ್ರಿಸಿ ಬಡವರ ಹೆಣ್ಣುಮಕ್ಕಳನ್ನು ಬಡದು ಬಾಯಿಗ ಹಾಕ್ಕೊಂತಿ ಅದ್ರಾಗ ಇದೊಂದು... ಹೂಂ, ತಡ ಯಾಕೆ ಆರಂಭಮಾಡು. ಬಂದದ್ದನ್ನ ನಾ ನೋಡ್ಕೊಂತಿನಿ. ಹೋಗು. ಹೂಂ ನಡಸು ಆಮ್ಯಾಕ ನಾ ಬರ್ತಿನಿ.

ಪೂಜಾರಿ : ಲೇ ಫಕ್ಕೀರ ನಾಅಂದ್ರ ಏನಂತ ತಿಳಿದಿ, ಹೇಳು? ಈಗ ನೋಡು ಇದನ್ನೇ ಹೆಂಗೆ ಹಳ್ಳಕ್ಕ ಕೆಡವ್ತಿನಿ. ಸುಮ್ನ ಕುಂತು ನೋಡ್ತಾ ಇರು ನನ್ನ ಮಾತಿನ ವರಸೆ ಕೆಳ್ತಾ ಕೆಳ್ತಾ ಮಿಕಾ ಹೆಂಗ ಬೀಳುತ್ತೆ.

ಫಕ್ಕೀರ : ಹೂಂ, ಆಯ್ತು ಆಮೇಲೆ ನನ್ನ ಪಾಳಿ ಐತೆ.

ಪೂಜಾರಿ : ಏಯ್, ಅದು ಆಗಬಹುದು. (ಅವಳ ಹತ್ತಿರ ಹೋಗಿ) ಬಾ ನಾವು ತಾಂಡದ ಕಡೀಗ ಹೊಂಟೀವಿ. ಬಾರೆ, ನನ್ನ ಮುದ್ದಿನ ಸೊಸೆ ನಿಮ್ಮಕ್ಕ ನಿನ್ನಂಗಿಲ್ಲ ಬಿಡು. (ಕೈ ಹಿಡಿಯಲು ನೋಡಿದ) ಏನು ನಿನ್ನ ಚೆಲುವು, ಅದೇನು ನಿನ್ನ ವೈಯಾರ. ಕಣ್ಣಿಗ ಹಬ್ಬ ಕಣೆ. ಥು! ಅವನಪ್ಪನ ದೇವರು, ಹೆಂಗಸರನ್ನ ಯಾಕಿಂಗೆ ಸುಂದರವಾಗಿ ಹುಟ್ಟಿಸಿ ಬಿಡ್ತಾನಂತ.

ಗೋಮ್ಲಿ : (ನುಣಚಿಕೊಂಡು ದೂರ ಓಡುವಳು) ಏಯ್ ಪೂಜಾರಿ, ಹೆಣ್ತಿನ ಇಟ್ಕೊಂಡು, ಮತ್ತೊಬ್ಬ ಹೆಣ್ಣಿನ ಮೈಮುಟ್ಟಾಕ ನಾಚಿಕಿ ಬ್ಯಾಡ್ವ ನಿನಗೆ? (ಓಡುವಳು.) ನೋಡು ಮುಂದ ಬಂದೆ ಕೂಗಿಕೊಳ್ತಿನಿ ಮಂದಿ ಬಂದು ನಿನ್ನ ಹೆಡಮುರಗಿ ಕಟ್ತಾರ. ಬೇಡ, ನನ್ನ ಮುಟ್ಟಬೇಡ. ಬರಬೇಡಾ, ಕೂಗದೆ ನಿನ್ನ ಕತಿ ಮುಗೀತಂತ ತಿಳ್ಕ

ಫಕ್ಕೀರ : (ಅವಳಿಗಿಂತ ವೇಗವಾಗಿ ಓಡಿ) ಬೇಟೆ ಎಷ್ಟು ಓಡುತ್ತದೆಯೋ ಚಿರತೆಗೆ ಅಷ್ಟು ಉಲ್ಲಾಸ ಕಣೆ ಮಾವನ ಮಗಳೆ. ಇವತ್ತು ನಾನು ಪುಜಾರಿ ಬೆಳಗಾಮುಂಜಾನೆ ಹಟ್ಟಿ ಕಡೀಗ ಹೊಂಟಾಗ ನರಿಮಕ ನೋಡಿದ್ವಿ. ಬೇಟೆ ಸಿಕ್ತು. ಅಲ್ಲಾ, ಇಂಥಚೆಂದುಳ್ಳಿ ಚೆಲವಿ ಸಿಕ್ಕಾಗ ಬಿಡಾಕ ನಾನೇನು ಹಟ್ಟಿ ನಾಯ್ಕನ ಮಗ ಭೀಮ ಅಂದ್ಕೊಂಡಿಯಾ. ನಿನ್ನ ಬಿಡಲ್ಲ ಕಣೆ ಬಿಡಲ್ಲ.

ಗೋಮ್ಲಿ : ಬೇಟೆಯಾಡಾಕ ಅಷ್ಟು ಸುಲಭವಾಗಿ ಸಿಗುವ ಹೆಣ್ಣಲ್ಲಲೇ ಮುದಿಯಾ, ಮುಕ್ಳಾರೆ ಕುಡಿದು ಬೇರೆ ಹೆಂಗಸಿನ ಮೈ-ಕೈ ಮುಟ್ಟದಿ ಕಾಲು-ಕೈ ನೆಟ್ಟಗಿರಲ್ಲ. ನಾನು ಏನೂಂತ ನಿನಗ ಗೊತ್ತಿಲ್ಲ. ಬೆಂಕಿ ಕೂಡ ಯಾಕ ಸರಸ ಆಡೀಯಾ ಸುಮ್ಮನೆ ಹೋಗು.

ಪೂಜಾರಿ : ಹೌದ. ಅಷ್ಟೊಂದು ಧೈರ್ಯನಾ? ನೋಡುವ, ಇಬ್ಬರ ನಡುವೆಯಿಂದ ತಪ್ಪಿಸಿಕೊ. (ಅಂದವನೆ ಕೈ ಹಿಡಿದು ಎಳೆಯುವನು)

ಗೋಮ್ಲಿ : (ಬಿಡಿಸಿಕೊಂಡು ಓಡುವಳು) ಬಾರಲೇ ಬೇವರ್ಸಿ. (ಮುಂದೆ ಬಂದ ಫಕ್ಕೀರನನ್ನ ಜಾಡಿಸಿ ಒದೆಯುವಳು). ಏನಂದ್ಕೊಂಡಿ, ನಮ್ಮ ವಿಸಳಾವತ್ ಹುಡುಗಿರಂದರೆ.

ಪೂಜಾರಿ : (ಮೆಲ್ಲಗೆ ಹಿಂದಿನಿಂದ ಬಂದು). ಅನ್ನೋದು ಏನು? ಸುರಸುಂದರಿ ಹಾರಾಡ್ತಿಯಾ, ಹಾರಾಡು ಹೂಂ.

ಫಕ್ಕೀರ : ಬಿಡಬೇಡ, ನನಗೆ ಜಾಡಿಸಿ ಒದಿತಿಯಾ.

ಗೋಮ್ಲಿ : ಭೀಮ... ಭೀಮ...

ಪೂಜಾರಿ : ಹೂಂ... ಕೂಗು, ಬರ್ತಾನ, ಬರಬೇಕು. ಬರ್ಲಿ ಆಮಗ

ಗೋಮ್ಲಿ : ಬಂದೆಬರ್ತಾನ. ನಿಮ್ಮಬ್ಬರ ಶಾಸ್ತಿ ಮಾಡ್ತಾನ. ಭೀಮ...

ಫಕ್ಕೀರ : ಅಂವ, ಬರ್ಲಿ ಅವನ ಹೆಡಮುರಗಿ ಕಟ್ಟಲಿಕ್ಕ ನಮ್ಮಪ್ಪಗೆ ಹುಟ್ಟಿದವನೆ ಅಲ್ಲ.

ಗೋಮ್ಲಿ : ಏಯ್, ನಾಮರ್ದ ನನಮಕ್ಕಳ, ಒಂಟಿ ಹೆಂಗಸಿನ್ನ ಕಾಡ್ತಿರಲ್ಲೋ ಗಂಡಸರಾದ್ರ ಅವನೆದುರು ಕೆಣಕಿ ನೋಡ್ರಿ ಏನಾಗುತ್ತೆ ಅಂತ ಭೀಮ...

ಪೂಜಾರಿ : ಅವರಪ್ಪನ ಎದುರಿಗೆ ಏಟು ಹಾರಾಡಿಲ್ಲ ನಾನು. ಏನ್ಮಾಡ್ದ ಏನು ಕಿಸಿಯಾಕ ಆಗಲಿಲ್ಲಾ. (ಸೂರ್ಯ ಇನ್ನೇನು ಪಶ್ಚಿಮಕ್ಕೆ ಮುಳಗಬೇಕು

ಭೀಮ, ಗೋಮ್ಲಿ ಕೂಗಿದ ಸದ್ದನ ರಹದಾರಿಯಲ್ಲಿ ಆಗಲೇ ತಲುಪಿದ್ದ.)

ಭೀಮ : ನಮ್ಮಪ್ಪಗ ಮಾಡಿದಂಗೆ ನನಗೆ ಮಾಡೋದಕ್ಕೆ ಆಗೋದಿಲ್ಲವೇ ಮುದಿಯ ಪೂಜಾರಿ. ಮಗನೆ ನಿನಗೆ ಅವತ್ತೆ ಎಕ್ಕಡದಿಲೆ ಹೊಡಿ ಬೇಕಿತ್ತು. ಬಿಟ್ನಲ್ಲಾ ನಂದ ತಪ್ಪು. ಈಗ, ಹುಡುಗಿ ಸಾವಾಸಕ್ಕ ಬಂದಿಯಾ, ನಿನ್ನ.

ಪೂಜಾರಿ : ಲೇ ಪುಟಗೋಸಿ ನನಮಗನೆ ನಿನ್ನಂತ ಪಾಮರನ ಕೈಯಾಗ ಹೊಡ್ತಾ ತಿನ್ನೋ ಮಗ ಅಂದ್ಕೊಂಡಿ ಏನು, ಸಾಧ್ಯನಾ ಇಲ್ಲ. ಬಾ ನೋಡುವ, ಯಾರು ಯಾರನ್ನ ಹೊಡಿತಾರ.

ಭೀಮ : (ಅವನ ಮೇಲೆ ಎಗರಿ ಇಬ್ಬರನ್ನು ಹಣ್ಣುಗಾಯಿ, ನೀರುಗಾಯಿ ಆಗೋತನಕ ಗುದ್ದಿದ) ಹೂಂ... ತಗೋ... ಲೇ ಬರಿ ಮಾತಷ್ಟೆ ನಿಮ್ಮವು.

ಪೂಜಾರಿ : ಅಯ್ಯಪ್ಪ ಸತ್ನೋ... ಬಿಡೋ ನಿನ್ನ ದಮ್ಮಯ್ಯ ಅಂತಿನಿ.

ಫಕ್ಕೀರ : ಅಣ್ಣ ನಾನಲ್ಲೋ. ಈ ಹಾಳಮನಿ ಪೂಜಾರಿ ಮಾತ ಕೇಳಿ ನಿನ್ನ ವಿರೋಧ ಕಟ್ಟಿಕೊಂಡೆ. ಅವನು ಹೇಳಿದ ಅದಕ್ಕ ಬಂದೀನಿ. ಬಿಟ್ಟುಬಿಡು, ಮರ್ಯಾದಿ ತಗಿಬೇಡಾ.

ಗೋಮ್ಲಿ : ಭೀಮ ಬಿಡಬೇಡ ಹಾಳಮನಿ ಕಂತ್ರಿನಾಯಿಗಳನ್ನ (ಕತ್ತಲಲ್ಲಿ ಇಬ್ಬರಿಗೂ ಹೊಡೆಯುವನು). ಸಾಯಿಸು, ಇಂತ ಕೆಟ್ಟ ಹುಳುಗಳು ಬದುಕಿರಬಾರದು.

ಭೀಮ : ನಿಲ್ಲೋ ಪೂಜಾರಿ. ಇಷ್ಟು ದಿನ ಏನೊ ಮಾಡಿಕೊಂಡೆ. ಈಗ? ನಿಲ್ಲಲೇ ಫಕ್ಕೀರ, ನಿಲ್ಲು. ಇನ್ನು ನಿಮ್ಮ ಕತೆ ಮುಗಿತು. ಅಮಾಯಕ ಹುಡುಗಿಯರ ಬದುಕಿನ ಜೊತೆಗೆ ಆಟಾ ಆಡ್ತಿರಾ. ಮುದಿ ಗೂಬೆಗಳ, ಅಲ್ಲಾ ನಿಮಗೆ ಮಾನ, ಮರ್ಯಾದೆ ಅನ್ನೋದು ಏನಾದರು ಒಂಚೂರು ಇದೆಯಾ? ಅಮಾಯಕ, ಹೆಂಗಸರು, ಸುಂದರ ಹುಡುಗಿಯರಿಗೆ ದೇವರ ಹೆಸರು, ಹೇಳಿ ಮೋಸ ಮಾಡ್ತಿರಲ್ಲಾ, ಮುಂದಿನ ಪೀಳಿಗೆ ನಿಮ್ಮನ್ನ ಕ್ಷಮಿಸುತ್ತಾ?

ಗೋಮ್ಲಿ : ಚರ್ಮ ಸುಲಿಬೇಕಿತ್ತು ಆ ಮಕ್ಕಳದು. ಮದ್ವಿಯಾಗಿ ನಾಕು

ಮಕ್ಕಳಿದ್ರು, ಮಗಳ ವಯಸ್ಸಿನ ಹುಡುಗಿಯರನ್ನ ಕಾಡ್ತರಂದ್ರ, ಅದಕ್ಕೆ ನಾನು ಹೇಳೊದು ಹೂವು ಚೆಂದಿದ್ರ ವಾಸನಿ ನೋಡೊ ಮಂದಿ

ಬಹಳ ಅದಾರ ಅಂತ. ನೀ ಎಲ್ಲಿ ಕೇಳಿ ನನ್ನಮಾತು. ಆಗಲಿ ಬಿಡು ನನ್ನ ಹಣೆಬರದಾಗ ಏನೈತೋ. ಅದಾಗುತ್ತೆ. ನೀ ಸುಕವಾಗಿರು.

ಭೀಮ : ಅದಕ್ಕೆ ಹೇಳಿದ್ದು ಕಾಲ ಕೆಟ್ಟು ಹೋಗ್ಯೆತಿ ಅಂತೇಳಿ. ನಡಿ ತಾಂಡ ಸೇರೋಣ. ನೋಡು ಇಂಥ ಮಾತುಗಳನ್ನ ಆಡಿ ನನ್ನತಲಿ ಕೆಡಸಬೇಡ. ನನಗ ನನ್ನವೇ ಜವಾಬ್ದಾರಿಗಳು ಅದಾವ. ಅದುಅಲ್ಲದೆ ಬಾದಾಷಗ ಮಾತ ಕೊಟ್ಟನಿ ಹಂಗ ನಿನಗೂ ಮಾತ ಕೊಟ್ಟನಿ. ಇರು ಆಟು. ಎಲ್ಲದಕೂ ಕಂಕಣಕೂಡಿ ಬರಬೇಕು. ಅದು ಬಂದೆ ಬರುತ್ತೆ.

* * *

ದೃಶ್ಯ ೨

ಸನ್ನಿವೇಶ ೬

(ತಾಂಡದ ಮಂದಿ ಪೂಜಾರಿ ಮಾತಿಗೆ ಮನೆಬಿಟ್ಟು ಹೊರಗಡೆ ಬಂದಿದ್ದರು).

ಕಾರಬಾರಿ ಲಚ್ಮ : ನ್ಯಾಯ, ನ್ಯಾಯಾನ,? ಅಲ್ರೋ ಪ್ರದೇಶಬಿಟ್ಟು ಪ್ರದೇಶಕ್ಕೆ ಹೋಗುವುದೆಂದರೆ ಇಂತಹ ಕೆಟ್ಟ ನಡತೆ ಕಲಿಯುವುದು ಅಂತ ಅಲ್ಲ. ನನ್ನ ಮಗಳು ಆ ಸ್ಥಾನದಲ್ಲಿದ್ದರೆ ನಾನು ಇದನ್ನೇ ಮಾಡುತ್ತಿದ್ದೆ. ಥೆ. ಥೆ...ಈಗನ ಹುಡುಗಿಯರಿಗೆ ಮಾನ, ಮರ್ಯಾದೆ ಅನ್ನೊದ ಇಲ್ಲ. ಮದಿವಿಯಾದವರನ್ನು ಬಿಡಲ್ಲ ಅಂದ್ರ ಏನು ಹೇಳಬೇಕು. ಅಲ್ಲಾ ಗೋಮ್ಲಿ ಇಂಥ ಕೆಲಸ ಮಾಡಿದ್ದಾಳೆ ಅಂದ್ರೆ.

ಡಾವ್ರೊ ಬೊತನಾಯ್ಕ : ಕಾರಬಾರಿ ಸ್ವಲ್ಪ ಬಾಯಿಗೆ ಲಗಾಮು ಹಾಕು ಕಾಡಿನಲ್ಲಿ ಭೇಟಿಯಾದ ತಕ್ಷಣ ಪಂಚಾಯ್ತಿ ಸೇರೋದು ಎಷ್ಟು ಸರಿ. ಅಲ್ಲಿ ಏನು ನಡಿತು ತಿಳಿಯೋದ ಬೇಡವೆ. ಯಾರ ಮಕ್ಕಳಾದರೂ ಒಂದೇ. ಸುಕಾಸುಮ್ಮನೆ ಅಪವಾದ ಒಳ್ಳೆದಲ್ಲಾ.

ಫಕ್ಕೀರ : ಆಯ್ತು ನಿನ್ನ ಮಗಳದಾಳಲ್ಲ ಆಕೀನ ಕಳಸು ನಾನು ಕಾಡಿಗ ಕರೆದುಕೊಂಡು ಹೊಕ್ಕೀನಿ. ಆ ಮೇಲೆ ಈ ಮಾತ ಹೇಳು. ಹೋಗಲೇ ಡಾವ್ರೊ, ಇಲ್ಲಿ ಯಾರು

ನಿನ್ನ ಸಲಹೆ ಕೇಳಾಕ ಕರೆದಿಲ್ಲ, ಬಾಯಿ ಮುಚ್ಕೊಂಡು ಇರು. ದೊಡ್ಡೋರು ಮಾತಾಡ್ತಾರ.

ಡಾವೋ ಬೊತನಾಯ್ಕ : ಲೇ ಫಕ್ಕೀರ ಬಾಯಿಮುಚ್ಚೊ ಬೇವರ್ಸಿ ನನಮಗನ ಮೈಮೇಲ ಚರ್ಮ ಇಲ್ಲದಂಗ ಸುಲಿಸಿಬಿಟ್ಟೇನು. ನಿನ್ನ ನೀ ಏನಂದ್ಕೊಂಡಿಯಾ. ಭಾರಿ ಗಂಡಸು ಮನಿಯಾಗ ಇರೊ ಹೆಣ್ತಿನ ದಾರಿ ಬಿಟ್ಟಿರುವಾಗ, ಮತ್ತೊಂದು ಹುಡುಗಿ ಬೇಕಂತ ಇವನಿಗೆ.

ಪೂಜಾರಿ : ಡಾವೊ ಚರ್ಮ ಸುಲಿವಂತೆ ಮದಲು ಪಂಚಾಯ್ತಿ ಕಟ್ಟೆಮೇಲೆ ಕೂಳಿತಾಗ ನೀನು ನ್ಯಾಯಾದೀಶ ಅನ್ನೋದನ್ನ ನೆನಪಿನಲ್ಲಿ ಇಟ್ಕ. ನ್ಯಾಯ ಕೊಡು.

ಕಾರಬಾರಿ ಲಚ್ಮ : ಹಟ್ಟಿ ನಾಯಕನಾದ ನಾನುಸಾದ್ ಮಗನೆ ಖುದ್ದಾಗಿ ಅಪರಾಧಿಯಾಗಿರುವುದರಿಂದ ಬಹಳ ಎಚ್ಚರಿಕೆಯಿಂದ ನಿರ್ಣಯ ಕೊಡಬೇಕು. ಯಾಕಂದರೆ, ನ್ಯಾಯ ಎಲ್ಲರಿಗೂ ಒಂದೆ. ತನ್ನ ಮಗನೆ, ಅಪರಾಧಿಯಾಗಿರುವಾಗ ಹಟ್ಟಿನಾಯ್ಕ ಸುಳ್ಳನು ಹೇಳುವ ಎಲ್ಲಾ ಸಾಧ್ಯತೆಗಳಿವೆ.

ನಾನೂಸಾದ್ : (ಮೈಯೆಲ್ಲಾ ಉರಿಯಿತು) ಏಯ್ ಕಿತಬಿ ಕಾರಬಾರಿ, ಸ್ಥಾನದ ಮೇಲೆ ಕುಳಿತರೆ ಮಗ, ಹೆಂಡತಿ ಯಾವ ಸಂಬಂಧಕ್ಕೂ ಬೆಲೆ ಇಲ್ಲ. ನನ್ನ ನ್ಯಾಯದ ಮೇಲೆನೆ ಅನುಮಾನವೆ ನಿಮಗೆ. ಲೇ, ಯಾರು ನಿಮ್ಮ ಚಾಳಿನೋಡಿ ಲದೇಣಿಯಾಕೆ ಸೇರಿಸುತ್ತಿರಲಿಲ್ಲ. ನಾನು ಹೋಗಲಿ ಅಂತ, ಕರೆದುಕೊಂಡು ಬಂದೆ ಅದು ನಾ ಮಾಡಿದ ಮೊದಲನೇಯ ತಪ್ಪು.

ಕಾರಬಾರಿಲಚ್ಮ : ಛೇ... ಹಟ್ಟಿನಾಯಕ ತಪ್ಪು ಗ್ರಹಿಸಿದ್ದಿರಿ ತಾವು ತಪ್ಪು ತಿಳಿಯಬಾರದು. ಕೇಳಿಕೆ ಆರಂಭಿಸಬಹುದು.

ನಾನೂಸಾದ್ : ವಿಸಳಾವತ್ ಸೊಮ್ಲನಾಯ್ಕನ ಮಗಳು ಗೋಮ್ಲಿ ಮದುವೆಯಾಗದ ಹುಡುಗಿ ಕಾಡಲ್ಲಿ ನಾನೂಸಾದ್ ತಾಂಡದನಾಯ್ಕನ ಮಗ ಭೀಮನೊಡನೆ ಏಕಾಂತದಲ್ಲಿ...

ಗೋಮ್ಲಿ : ಹಟ್ಟಿನಾಯಕರೆ, ಕಾರಬಾರಿ, ಡಾವೊ, ಕಾಡಿನೊಳಗೆ ನಡದದ್ದೇ ಬೇರೆ ಅದನ್ನ ತಿರುಚಿ ನಡೆಯದ್ದನ್ನ ಕಲ್ಪಿಸಿಕೊಂಡು ಹೇಳಲಾಗುತ್ತಿದೆ. ನನಗೆ ನ್ಯಾಯಕೊಡಿ. ಇಲ್ಲದ ವಿಷಯ ಚರ್ಚೆಯಾಗುತ್ತಿದೆ.

ಕಾರಬಾರಿ ಲಚ್ಮ : ಏನ್ ನಡೀತೊ?

ಡಾವೊ ಬೊತನಾಯ್ಕ : ಈ ಕಾರಬಾರಿ ಏಳ್ರಾಗ ಹುಟ್ಯಾನ ನೋಡು. ಪಾಪ ಹುಡುಗಿ ಗಾಬರಿ ಆಗ್ಯಾಳ. ಅಲ್ಲಿ ಏನಾತು ಅನ್ನೋದು ತಾಂಡಕ್ಕ ಗೊತ್ತಿದೆ. ಆದ್ರ ಸಾಕ್ಷಿಗಳ್ಯಾರು ಅದು ಮುಖ್ಯ ಆಕ್ಕೈತಿ. ಇದು ಮದುವೆಯಾಗದ ಹುಡುಗಿಯ ಜೀವನದ ಪ್ರಶ್ನೆ. ಪಂಚಾಯ್ತಿಯೊಳಗೆ ಒಂದ ಸಣ್ಣ ವಿಷಯ ಏರುಪೇರಾದರೆ ಅವಳ ಬದುಕಿಗೆ ಮುಳುವಾಗುತ್ತೆ.

ಕಾರಬಾರಿ ಲಚ್ಮ : ಅಂದ್ರ, ಇಬ್ಬರೂ, ಸುಳ್ಳು ಹೇಳ್ತಿದ್ದಾರೆ ಅನ್ನು.

ಡಾವೊ ಬೊತನಾಯ್ಕ : ನಾನೇನು ಹಾಗಂತ ಹೇಳಿಲ್ಲ... ವಿಚಾರಣೆ ಸರಿಯಾಗಲಿ ಸತ್ಯ ಹೊರಗ ಬರಲಿ.

ಪೂಜಾರಿ : ಡಾವೊ, ಬಹಳ ಆತುನಿಂದು. ನೀ ಹಿಂಗ ಹೇಳಿದ್ರ ಸರಿಯಾಗಿ ಮಾಡ್ತಿನಿ.

ಡಾವೊ ಬೊತಾನಾಯ್ಕ : ನೋಡಿದಯ ಹಟ್ಟಿನಾಯ್ಕ ಹೆಂಗ ಮಾತಾಡ್ತಾರ. ನಿನ್ನ ಎದುರಿಗೆ ಗೂಂಡಾಗಿರಿ ನಡಸ್ತಾರ. ಅವತ್ತು ನಾನು ಬಡಕೊಂಡೆ ಇವರಿಬ್ಬರ ನೀಯತ್ತು ಸರಿಲ್ಲಾ ಅಂತ. ನೀನು ಕೇಳಲಿಲ್ಲ.

ನಾನೂಸಾದ್ : ಪರವಾಗಿಲ್ಲ ಡಾವೊ ನಿನಗೂ ಮಾತಾಡಕ ಬರುತ್ತೆ. (ಅವರ ಕಡೆಗೆ ನೋಡಿ) ಅವರವರ ಪಾಪದ ಕೊಡ ತುಂಬಿದಾಗ ಹೀಗೇನೆ. ಅವರ ತಪ್ಪು ತಿದಿಕೊಂಡಾರಂತ ಅಂದ್ಕೊಂಡೆ, ಆದರೆ ನಾಯಿ ತನ್ನ ಚಾಳಿಯನ್ನ ಬಿಡಲ್ಲಾ ಅಂದಾಗ ಏನ ಮಾಡಕ ಸಾಧ್ಯ. ಅದನ್ನ ದಂಡಿಸಲೇ ಬೇಕು.

ಪೂಜಾರಿ : ಹಟ್ಟಿನಾಯ್ಕ, ಬಾಯಿಬಿಗಿ ಹಿಡಿದು ಮಾತಾಡು. ಯಾರ ಪಾಪದ ಕೊಡ ತುಂಬಿದೆ, ಆಂ. ವಯಸ್ಸಾಯ್ತು, ಏನ

ಮಾತಾಡಬೇಕಂತ ಖಬರ್ ಬೇಡವೇ ನಿಂಗೆ. ಯಾರು ನಾಯಿ? ನೀನು ಮುದಿನಾಯಿ.

ಭೀಮ : ಏಯ್, ಪೂಜಾರಿ, ದೇವರ ಬರುತ್ತೆ ಅಂತ ಸುಳ್ಳ ಹೇಳಿ ಮಂದಿನ ನಂಬಿಸಿ, ನಿನ್ನ ಮಂದಿರಕ ಬರೊ ಹೆಂಗಸರ ಮೈಮೇಲೆ ಕೈ ಆಡ್ಸಲ್ವಾ ನೀನು. ಈ ಮೂಢಜನ ನಿನ್ನ ನಂಬ್ಯಾರಲ್ಲ ಅವರದು ತಪ್ಪು. ಇನ್ನೂ ಹೆಚ್ಚ ಮಾತಾಡಿದೆ ನಿನ್ನ ಜೀವಾನ ಚಾಲಾಡಿ ಬಿಡ್ತಿನಿ. ಮಂದಿ ನಿನ್ನ ನಂಬ್ಯಾರ ಅವರ ನಂಬಿಕೆಗೆ ಮೋಸ ಮಾಡ್ತಿಯಲ್ಲಾ ನಿನಗೆ ಏನು ಅನಿಸುವುದೇ ಇಲ್ವಾ. ಅದೆಂಗ ಬದುಕಿದ್ದಿಯೋ, ಅದೇನೋ ಅಂತಾರಲ್ಲಾ ಲಗಲ್ಡೊ ಪುಜಾರಿ ನಸಲ್ಡೊದೇವ (ಹಠಮಾರಿ ದೇವರಿಗೆ ಕೊಳಕ ಪೂಜಾರಿ) ಹಂಗದೀಯಾ. ನೀನು ದೇವರ ಹೆಸರ ಹೇಳಿ ಅನಾಚಾರ ಮಾಡ್ತಿದ್ದಿಯಾ. ಈ ಮಂದಿ ನಿನ್ನ ಅದೆಂಗೆ ನಂಬಿದ್ದಾರೊ ಆ ಸೇವಾ ಭಾಯ್‌ಗೆ ಗೊತ್ತು.

ಫಕ್ಕೀರ : ಏಯ್ ಚೋಟುದ್ದ ಅದಿ ಎಷ್ಟು ಮಾತಾಡ್ತಿ. ನಿನ್ನೆ ಗೋಮ್ಲಿ ಕೂಡ ಕತ್ಲಾಗ ಏನ ಆಟ ನಡಸಿದ್ದೆ? ಇವತ್ತು ಸಾಚಾನಂಗ ಬಂದು ಸಭೆಯೊಳಗ ನಿಂತಿಯಲ್ಲಾ ನಿನಗೆ ಮಾನಮರ್ಯಾದಿ ಐತಾ ಮದ್ಲು ಆಲೋಚನೆ ಮಾಡು. ಪೂಜಾರಿ ಸೇವಾಬಾಯನ ಪ್ರತೀಕ, ಅವನು ಎಲ್ಲವನ್ನು ದೇವರಿಗೆ ಅರ್ಪಿಸುತ್ತಾನೆ.

ಗೋಮ್ಲಿ : ನಾಯಕ ಬಾಪು ಇದೇನ ನಿಮ್ಮ ನ್ಯಾಯ ಪಂಚಾಯ್ತಿ. ಹೆಣ್ಣು ಏನೇ ಸತ್ಯ ಹೇಳಿದರು ಸುಳ್ಳಾಗಿ ಕಾಣುತ್ತೆ ನಿಮಗೆ. ನಾನುಮಾಡ ಬಾರದ ತಪ್ಪುನ ಮಾಡಿ ನಿಮ್ಮಗಳ ಮರ್ಯಾದೆಗೆ ಕುಂದು ತಂದಿಲ್ಲ. ಆದ್ರ, ಮುದುಕ ಪಕ್ಕೀರ, ಆ ಹಲ್ಕಟ್ ಪೂಜಾರಿ ತಮ್ಮ ಕತಿ ಮುಚ್ಚಿಟ್ಟು ಬೇರೊಂದು ಕತಿ ಕಟ್ಟಾಕ ಹತ್ಯರ.

ನಾನೂಸಾದ್ : ಗೋಮ್ಲಿ, ನೀನು ಹೆಣ್ಣುಮಗು ಹಿಂಗ ಸಭಾದೊಳಗೆ ಮಾತಾಡಬಾರದು. ನಮ್ಮ ಪಂಚಾಯ್ತಿ ಒಪ್ಪಲ್ಲ ಇದನ್ನ. ನಿನಗ ನ್ಯಾಯಬೇಕು ನಾನು ಕೊಡಿಸ್ತಿನಿ. ಆದ್ರ ನೀ ಸುಮ್ಮನಿರು. ನಿನ್ನ ಮಾತಿಗೆ ಬೆಲಿನ ಇಲ್ಲ, ನಿನ್ನ ಧನಿಗೆ

ಪ್ರತಿಧ್ವನಿನೆ ಇಲ್ಲಾ. ಯಾಕಂದ್ರ ಇದು ಪುರುಷರಿಗೆ ಹೆಚ್ಚಿನ ಆದ್ಯತೆ ಕೊಡುವ ಸಮಾಜ. ಇಲ್ಲಿ ಯಾರು ಯಾರ ಬಗ್ಗೆ ಕಾಳಜಿ ಮಾಡುವುದಿಲ್ಲ ಮಗಳ ಹೆಣ್ಣು ಅಂದ್ರ ಕೇವಲ ಭೋಗದ ವಸ್ತು ಮನಿಯೊಳಗ ಕೆಲಸ ಮಾಡಾಕ ಇರೊ ಆಳು ಅಂದು ಕೊಂಡಾರ.

ಭೀಮ : ಅನ್ಯಾಯವನ್ನು ಖಂಡಿಸದಿರುವುದನ್ನು ಪಂಚಾಯ್ತಿ ಅಂತ ಯಾಕೆ ಕರಿಯಬೇಕು? ಗೋಮ್ಲಿಗೆ ಅನ್ಯಾಯವಾಗಿದೆ. ಅವಳಿಗೆ ನ್ಯಾಯ ಕೊಡಿ, ಬಾಪು ನಿಮ್ಮಂತ ಸತ್ಯವಂತರ, ಬಹಳ ಕಡಿಮೆ, ನೀವು ಹೀಗೆ ಸತ್ಯವನ್ನು ಸುಳ್ಳಾಗಿಸಿದ್ದೆ ಆದರೆ ಭೂಮಿ ಮೇಲೆ ಸತ್ಯ ಉಳಿಯಲಾರದು.

ನಾನೂಸಾದ್ : ಅರೇ ಹುಚ್ಚಪ್ಪ ನಾವು ನ್ಯಾಯ ನೀಡಿದರೆ ಅವಳ ಬಾಳು ಹಾಳಾಗುತ್ತೆ. ಅವರಿಬ್ಬರೂ ಮಾಡಿದ ತಪ್ಪಿಗೆ ಶಿಕ್ಷೆ ಏನು ಗೊತ್ತ. ಯಾರಾದರೂ ಒಬ್ಬರು ಅವಳನ್ನು ಮದುವೆಯಾಗಬೇಕು. ಅವರು ಅದಕ್ಕೆ ಸಜ್ಜಾಗಿ ನಿಂತವ್ರೆ. ಹಂಗಾಗಿ ಅವರು ಕೂಡಿಕೆ ಮಾಡಿಕೊಳ್ಳುವುದಕ್ಕೆ ಸಜ್ಜಾಗಿ ಕುಂತವರೆ. ಸುಮ್ಮನಿರು ಅವರು ತೋಡಿರುವ ಹಳ್ಳಕ್ಕೆ.................... ಅವರೆ ಬೀಳುತ್ತಿದ್ದಾರೆ ಸುಮ್ಮನಾಗು.

ಭೀಮ : ಹೆಂಡರ ದುಡಿಮೆ ತಿನ್ನೊ ಈ ಮುತ್ಯಾಳ್ರಿಗೆ ಗಿಳಿಯಂತ ಹುಡುಗಿ ಕೊಡಬೇಡ್ರಿ. ಅವಳನ್ನ ಹೊರಗ ಹಾಕಿದ್ರು ಚಿಂತೆಯಿಲ್ಲ. ಆದರೆ ಪವಿತ್ರಳು, ನಿರಪರಾಧಿ ಅವಳು ಬೇಕಾಬಿಟ್ಟೆಯಾಗಿ ಹೀಗೆ ಮಂದಿ ಎದುರಿಗೆ ತಲೆ ತಗ್ಗಿಸಿ ನಿಲ್ಲುವುದು ಸರಿಯಲ್ಲ. ಅವಳ ಸ್ವಾಭಿಮಾನಕ್ಕೆ, ಶೀಲಕ್ಕೆ ಧಕ್ಕೆ ಬರದಿದ್ದರೆ ಸಾಕು.

ಪೂಜಾರಿ : ಒಳ್ಳೆ ಎಳೆ ಸೋತೆಕಾಯಿಯಂತ ಹುಡುಗಿ(ಸ್ವಾಗತ) ಈ ಮಗ ಭೀಮ, ಅವರಪ್ಪ ಸೇರ್ಕಂಡು ಉಲ್ಟಾ ಹೊಡೆಯೋ ಹಾಗೆ ಕಾಣ್ತಿದಾರಲ್ಲಪ್ಪ. ಛ, ನಾವು ಹಿಂಗ ಹೇಳಬಾರದಿತ್ತು. ನಾನೆ ಅವಳನ್ನ ಮುಟ್ಟಿನಿ ಅಂದಿದ್ರೆ, ಒಳ್ಳೆ ರಸಗೌಳದಂತ ಹುಡುಗಿ ಸಿಗ್ತಿದ್ಲು. ಈಗ, ಎಲ್ಲಾ ಹೋತು.

ಕಾರಬಾರಿ ಲಚ್ಮ	:	ನಾಯಕಪ್ಪ, ವಿಷಯ ಗೊತ್ತಿದ್ದದ್ದೆ. ಈ ಪಕ್ಕೀರ ಮತ್ತು ಪೂಜಾರಿ ಹೇಳ್ತವ್ರೆ ಗೋಮ್ಲಿ ಮತ್ತು ನಿನ್ನ ಮಗ ಭೀಮ ಕಾಡಲ್ಲಿ ಸೇರಿದ್ದು ಅಂತ. ಭೀಮ ಮತ್ತು ಗೋಮ್ಲಿ ಹೇಳ್ತಾಳ ಕಟ್ಟಿಗೆ ಆರಿಸೋದಕ್ಕೆ ಬಂದಿದ್ದ ಗೋಮ್ಲಿಯನ್ನು ಫಕೀರ ಮತ್ತು ಪೂಜಾರಿ ಹಿಡದ್ರು ಅಂತ. ಒಂದು ಅವಳನ್ನ ನಿನ್ನಮಗ ಮದುವೆ ಆದ್ರ ನಮ್ಮ ಸಮಾಜದಿಂದ ಹೊರಗ ಹೋಗಬೇಕು. ಇಲ್ಲಾ ಪೂಜಾರಿ ಮತ್ತು ಫಕೀರ ಮುಟ್ಟಿದ್ದಾರೆ ಅಂದ್ರೆ ಇಬ್ರಲ್ಲಿ ಒಬ್ಬ ಮದುವೆ ಆಗಬೇಕು.
ನಾನೂಸಾದ್	:	(ಬಹಳ ಹೊತ್ತು ಯೋಚನೆ ಮಾಡಿದ) ಭೀಮ ಸಮಾಜದಿಂದ ಹೊರಗ ಹೋದ್ರು ಚಿಂತೆಯಿಲ್ಲ. ಗುರುಗಳು ಬಂದಾಗ ಶುದ್ಧಿ ಮಾಡಿಸಿ ಒಳಗ ತಗೋಬಹುದು. ಆದರೆ ಈ ಪಾಪದ ಹುಡುಗಿಯನ್ನ ಸಾಯೋ ವಯಸ್ಸಿನ ಪೂಜಾರಿ ಇಲ್ಲ ಫಕ್ಕೀರನಿಗೆ ಮದುವೆ ಮಾಡ್ಕೊಳ್ಳೋ ಅವಕಾಶ ಕೊಡುವುದಿಲ್ಲ. ಬದಲಾಗಿ ನನ್ನ ಮಗ ಮತ್ತು ಗೋಮ್ಲಿ ಇಬ್ಬರನ್ನೂ ಕುಲದಿಂದ ಹೊರಗ ಹಾಕ್ರಿ. (ಎದ್ದು ನಡೆದುಬಿಟ್ಟ).

* * *

ದೃಶ್ಯ ೩

ಸನ್ನಿವೇಶ ೧

(ದೀಪಾವಳಿ ಸಂಭ್ರಮದ ಆಚರಣೆ, ಹುಡುಗಿಯರು ಕುಣಿಯುತ್ತಿದ್ದಾರೆ. ಸಂಜೆಯಾಗುತ್ತಿದ್ದಂತೆ).

ಗೋಮ್ಲಿ : ಏಯ್, ರಾಮಿ, ಟೋಪ್ಲಿ ಪೀಕಿ ಬರ್ರೆ ಗಡಾನ, ನಾಯಕ ಬಾಪೂ ಮನೆಗೆ ಹೋಗಬೇಕು. ನಿಮಗೆ ಹೊತ್ತು ಗೊತ್ತು ತಿಳಿಯಾಕಿಲ್ಲಾ. ಗಡಾನ ಬರ್ರಿ ವ್ಯಾಳೆ ಬಹಳ ಆಗೈತಿ.

(ತಾಂಡದ ಮಂದಿ ಪೂಜಾರಿ ಮಾತಿಗೆ ಮನೆಬಿಟ್ಟು ಹೊರಗಡೆ ಬಂದಿದ್ದರು).

ಭೀಮ : ಗೋಮ್ಲಿ, ಏನು ಹೊಸಬಟ್ಟೆ ತೊಟ್ಟು ನವಲೇರಿ ಹಂಗೆ ಕಾಣ್ತಿದ್ದಿಯಾ. ಏನ್ಸಮಾಚಾರ ಈ ಫೇಟಿಯಾಕಾಂಚಳಿ ಅದೇನು ಚಂದಾ ಕಾಣ್ತವೆ. ಅಬ್ಬಾ ನನ್ನ ದೃಷ್ಟಿನೆ ಬೀಳುತ್ತೆ ನಿನಗ. ಗಡಾನ, ಮನಿಗ ಹೋಗಿ ದೃಷ್ಟಿ ತಗದು ಬಿಸಾಡು.

ಗೋಮ್ಲಿ : ಹೋಗೊ ಮಾವ, (ನಾಚಿಕೆಯಿಂದ ಮುಂದೆ ಓಡುವಳು) ನೀ ಹಿಂಗ ಮಾತಾಡಬ್ಯಾಡ, ವೇತಡು ಯಾವಾಗ ಅಕ್ಕಿ ಅದಾರು ಹೇಳು.

ಕುದುರೆ ಸವಾರ : ಭೀಮನಾಯ್ಕನ ಮನೆ.

ಗೋಮ್ಲಿ : (ಗಾಬರಿಯಿಂದ) ಯಾಕ?...ಯಾರ ನೀವು,? ಎನ್ಸಮಾಚಾರ.? ಭೀಮ

ಭೀಮ : ನಾನೆ ಭೀಮ ನೀವು ಸುಲ್ತಾನರ ಸೈನಿಕರೆ? ಏನು, ಸುಲ್ತಾನರು ನೆನಪಿಸಿಕೊಂಡರೆ

ಸವಾರ : ಹೌದು ಮಹಾಪ್ರಭುಗಳು ತಮ್ಮನ್ನು ನೆನಪು ಮಾಡಿದ್ದಾರೆ.

ಭೀಮನಾಯ್ಕ : ಬನ್ನಿ ಸ್ವಲ್ಪ ವಿಶ್ರಮಿಸಿಕೊಂಡು ಹೋಗೋಣ. ಇವತ್ತು ದೀಪಾವಳಿ, ತಾವು ನಮ್ಮ ಅತಿಥಿಗಳು, ಊಟ ಮುಗಿಸಿಕೊಂಡು ಒಂದೆರಡು ಜಾವ ವಿಶ್ರಮಿಸಿಕೊಂಡು ಹೊರಡಬಹುದು.

ಸವಾರ : ಆಯ್ತು ಭೀಮನಾಯ್ಕ ನಾಳೆ ಬೆಳಗಾಮುಂಜಾನೆ ನಿಮ್ದುಕೆ ಸುಲ್ತಾ ದರ್ಬಾರ್‌ನಲ್ಲಿ ಹಾಜರಿರಬೇಕು. ಅಲ್ಲಿಯವರೆಗೆ ಹೋಗಬಹುದು.

ಭೀಮನಾಯ್ಕ : ಆಯ್ತು ವಜಿರರೆ. ಇವತ್ತು ದೀಪಾವಳಿ ಹಬ್ಬ ನಮ್ಮಗೆ ಬಹಳ ವಿಶೇಷವಾದದ್ದು, ತಾವು ಅತಿಥಿಗಳಾದರೆ ನಮಗೆ ಇನ್ನೂ ಒಳ್ಳೆಯದು. ಹೀಗೆ ಬನ್ನಿ, ವಿಶ್ರಮಿಸಿ.

ಸವಾರ : ಆಯ್ತು ಭೀಮನಾಯ್ಕ, ಬಾದಷ ಸಮಯಕ್ಕೆ ಮುಂಚೆ ಹಾಜರಾಗದಿದ್ದರೆ ಕೋಪಿಸಿಕೊಳ್ಳಬಹುದು. ನಿಮ್ಮನ್ನು ಬಹಳ ನೆನಪು ಮಾಡಿಕೊಂಡಿದ್ದಾರೆ. ಹಾಗಾಗಿ ನಾಳೆ ಮುಂಜಾನೆ ಬೆಳ್ಳಿ ಚುಕ್ಕಿ ಮೂಡುವ ಮುನ್ನ ಹೊರಡುವ.

ಭೀಮನಾಯ್ಕ : ತಾವು ಚಿಂತೆ ಮಾಡುವ ಅವಶ್ಯಕತೆ ಇಲ್ಲಾ ಸುಲ್ತಾನರು ಕರೆದರೆ ಸಾಕು ನಾವು ಯಾವುದೆ ಕಾರಣಕ್ಕೂ ತಪ್ಪಿಸಿಕೊಳ್ಳುವುದಿಲ್ಲಾ ಬಾದಷ ಕೊಟ್ಟ ಸಮಯ ಮುಂಜಾನೆ ನಸುಕಿನ ವೇಳೆ ಆಯ್ತು ಆ ಸಮಯಕ್ಕೆ ತಲುಪುವುದು ನನ್ನ ಕರ್ತವ್ಯ.

ಗೋಮ್ಲಿ : ಮಾಮ, ಯಾರಿವರು? ಯಾಕೆ ನಿನ್ನ ಕರೆಯುತ್ತಿದ್ದಾರೆ. ನನಗೆ ಯಾಕೊ ಹೆದರಿಕೆ ಯಾಗುತ್ತಿದೆ.

ಭೀಮ : ಇವರ? ಬಾದ್‌ಷ ಸುಲ್ತಾನರ ಸೈನಿಕರು ಬಾದಷ ಅವರ ಸಂದೇಶವನ್ನು ತಂದಿದ್ದಾರೆ. ಗಾಬರಿ ಮಾತು ಎಲ್ಲಿಂದ ಬಂತು ಈಗ ನಾವು ಬಾದ್‌ಷ ಅವರಿಗೆ ಖಾಸಾಮಂದಿ

ಗೋಮ್ಲಿ : (ಆತಂಕದಿಂದ) ಏನಂತೆ? ಯಾಕೆ ಬಂದಿದ್ದಾರೆ, ನಾಳೆ ಮುಂಜಾನೆ.

ಭೀಮ : ಏನೂ ಇಲ್ಲ, ಗಾಬರಿಯಾಗಬೇಡ, ಆದಷ್ಟು ಬೇಗ ಬಂದು

ಬಿಡುತ್ತೇನೆ. ನಾ ನೀಗ ಹೋಗುತ್ತಿರುವುದು ವ್ಯಾಪಾರದ ಮಾತುಕತೆಗೆ

ಗೋಮ್ಲಿ : ನೋಡು, ನಾಕಕಾಲ ಬದುಕಿದರೆ ನಿನ್ನ ಜೊತೆ ಇಲ್ಲ.

ಭೀಮ : ಏಯ್, ಎಡವಟ್ಟು ಹುಡುಗಿ ಹಿಂಗ್ಯಾಕ ಮಾತಾಡಿ ನಮ್ಮಪ್ಪನೆ ಒಪ್ಪಿಕೊಂಡಿರುವಾಗ, ಹೆದರಿಕೆ ಯಾರದ್ದು. ನೋಡು ನನಗು ನಿನನ್ ಮದುವೆ ಮಾಡಿಕೊಳ್ಳುವ ಆಶೆ. ಆದರೆ ಕರ್ತವ್ಯ ಮೊದಲು.

* * *

ದೃಶ್ಯ ೩

ಸನ್ನಿವೇಶ ೨

(ನಾನೂಸಾದ್, ರಾಮಿಬಾಯಿ ಎಲ್ಲರೂ ರಾತ್ರಿಯ ಮೊದಲ ಪಹರೆ ಸಮಯದಲ್ಲಿ ಭೀಮನಾಯ್ಕ, ಜೇಮು ಮತ್ತು ಐದಾರು ಖಾಸ ಮನುಷ್ಯರ ಜೊತೆಗೆ ಕಟ್ಟುಮಸ್ತಾದ ಕುದುರೆಗಳ ಮೇಲೆ ವಿದಾಯ ಹೇಳಲು ತಾಂಡದ ಹೊರಗಿನವರೆಗೆ ಬಂದಿದ್ದಾರೆ).

ನಾನೂಸಾದ್ : ದೊಡ್ಡ ಕೆಲಸಕ್ಕೆ ಹೊರಟಿದ್ದಿಯಾ, ಬಹಳ ಜಾಗರೂಕತೆ ಮತ್ತು ಸೂಕ್ಷ್ಮತೆಯಿಂದಲೇ ನಿಭಾಯಿಸು. ಸಮಯಕ್ಕೆ ಮತ್ತು ದೊಡ್ಡವರಿಗೆ ಗೌರವ ಕೊಡು. ಜಯ ನಿನ್ನದೆ.

ರಾಮಿಬಾಯಿ : ಬೇಟ ವಿಜಯಶಾಲಿಯಾಗಿ ಬಾ. ನಿನಗಾಗಿ ಮೂರು ಜನ ಕಾಯುತ್ತಿದ್ದಾರೆ. ನೆನಪಿರಲಿ. ನೀನೆ ನಮ್ಮ ಭವಿಷ್ಯದ ಬೆಳಕು ನಿನಗೇನಾದರೂ ಆದರೆ ನಾವು ಬದುಕಲಾರೆವು.

ಭೀಮ : (ಬಾಗಿ ಅವರ ಪಾದಗಳಿಗೆ ನಮಸ್ಕರಿಸಿ) ಅಪ್ಪ ಸುಲ್ತಾನರು ಹೇಳಿದಂತೆ ನಾನು ಅವರ ಜೊತೆಗೆ ವ್ಯವಹಾರ ಕುದುರಿಸಲು ಹೊರಟಿದ್ದೇನೆ. ನೀವು ಆತಂಕಪಡುವ ಅವಶ್ಯಕತೆ ಇಲ್ಲ. ಎಂತಹದ್ದೆ ಸಂಕಷ್ಟ ಬಂದರು ಪಾರಾಗಿ ಬರುವೆ.

ನಾನೂಸಾದ್ : ನಿನ್ನ ಕೆಲಸದಲ್ಲಿ ಶ್ರದ್ದೆ ಇರಲಿ. ನಿನ್ನ ನಂಬಿ ಬರುತ್ತಿರುವ ನಿನ್ನ ಮಾವ ಮತ್ತು ಸಂಗಡಿಗರನ್ನು ನೀನೇ ಕಾಪಾಡಬೇಕು. ಅವರ ಕ್ಷೇಮವು ಅಷ್ಟೆ ಮುಖ್ಯ. ಅವರು ನಿನ್ನ ನಂಬಿದ್ದಾರೆ.

ಸವಾರ : ಭೀಮ ಹೊರಡುವುದು ಸೂಕ್ತ ಎರಡನೇಯ ಪಹರೆಗೆ ಹೊತ್ತು

ವಾಲಿದೆ. ನಾವು ಮುಂದೆ ಸಾಗಿದರೆ ನೀವು ನಮ್ಮನು ಅನುಸರಿಸಿ ತಾವು ನಮ್ಮ ಬಗ್ಗೆ ಚಿಂತಿಸುವುದು ಬೇಕಾ, ಹೊರಡಿ........

ಭೀಮ : ಹೂಜಾರ್ ಆಗಬಹುದು. ತಾವು ಮುಂದೆ ಹೊರಟರೆ ನಾವು ತಮ್ಮನ್ನ ಅನುಸರಿಸುತ್ತೇವೆ. ಸಮಯಕ್ಕೆ ಮುಂಚೆ ಬಾದ್‌ಷರನ್ನು ಬೇಟಿಯಾಗಬೇಕು ಆವರು ನಮಗಾಗಿ ಕಾಯಬಾರದು, ನಾವು ಅವರಿಗಾಗಿ ಕಾಯಬೇಕು. ಇದು ನಾನು ನಂಬಿರುವ ತತ್ವ ಹಾಗಾಗಿ ಯಾವುದೇ ಕಾರಣಕ್ಕೂ ಘಳಿಗೆ ತಡವಾಗಬಾರದು.

ಸವಾರ : ಬೇಡ ಭೀಮ, ನಮ್ಮ ಅರ್ಧ ಸೈನಿಕರು ಮುಂದೆ ಇರ್‍ತಾರೆ. ಅರ್ಧ ನಿಮದುಕೆ ಹಿಂದೆ ಇರಲಿ, ಇದು ಸ್ವಯಂ ಬಾದ್‌ಷರ ಹುಕುಂ ಆಗಿದೆ.

ಭೀಮ : ಆಯ್ತು ಹೂಜೂರ್ ತಾವು ಹೇಗೆ ಅಪ್ಪಣೆ ಕೊಡುತ್ತಿರೊ 'ಸಂಬಂಧ ಮನಸ್ಸಿಗೆ ಹಿಡಿಸಿದರೆ ಎಲ್ಲಿ ನಡೆದರೇನು?' ಅದರಲ್ಲಿ ವಿಶ್ವಾಸವಿರಬೇಕು.

ಸವಾರ : ಅದು ಹಾಗಲ್ಲ ಭೀಮ, ಬಾದಷ ನಿನಮ್ಮ ಹಿಫಾಜತ್ ನಮ್ಮ ಕೈಗೆ

ಕೊಟ್ಟಿದ್ದಾರೆ. ಅದೂ ಅಲ್ದೆ ತಾವು ಕೋಟೆ ಒಳಗೆ ಪ್ರವೇಶ ಮಾಡುವುದು ಯಾರಿಗಾಗಿ ತಿಳಿಯದಂತ ರಹಸ್ಯವಾಗಿರಬೇಕು.

ಭೀಮ : ಬಾದಷಗೆ ನಾವು ಋಣಿಯಾಗಿದ್ದೇವೆ. (ಕುದುರೆಗಳ ವೇಗ ಹೆಚ್ಚಿತ್ತು.) ಅವರು ಕಾಲಿನಿಂದ ತೋರಿಸಿದ್ದನ್ನು ನಾವು ತಲೆ ಮೇಲೆ ಹೊತ್ತು ಮಾಡುತ್ತೇವೆ ಹುಜೂರ್.

* * *

ದೃಶ್ಯ ೩

ಸನ್ನಿವೇಶ ೩

(ಬಾದ್‌ಷ ಟಿಪ್ಪುಸುಲ್ತಾನ್‌ನ ದರ್ಬಾರು ಮೀರ್‌ಸಾದಕ್, ಇತರ ಮಂತ್ರಿಗಳು ಮುಂಜಾನೆಯ ಐದನೇ ಪಹರೆಗೆ ಎದ್ದು ಸುಲ್ತಾನರ ಸಭಾಂಗಣಕ್ಕೆ ಹಾಜರಾಗಿದ್ದಾರೆ. ಆಗಲೇ ಭೀಮ ಮತ್ತು ಇತರೆ ಸವಾರರು ಒಳಗೆ ಪ್ರವೇಶಿಸಿದ್ದಾರೆ. ಸೈನಿಕರಿದ್ದದ್ದರಿಂದ ಪಹರೆಗಾರರು ಅಡಚಣೆ ಮಾಡದೆ ಒಳಗೆ ಬಿಟ್ಟರು).

ಭೀಮನಾಯ್ಕ : ರಾಜಾಧಿರಾಜ, ರಾಜವಲ್ಲಭ, ಗಂಡರಗಂಡ, ಕೀರ್ತಿಪ್ರಚಂಡ ಬಾದಷ ಟಿಪ್ಪುಸುಲ್ತಾನ್ ಕೀ ಜಯ್ ಹೋ. ಮಹಾ ಪ್ರಭು ತಾವು ನೆನಪಿಸಿಕೊಂಡಿರಂತೆ ತಮ್ಮ ಸೇವೆಗೆ ನಿಮ್ಮ ಈ ಗುಲಾಮ ಹಾಜರ್

ಟಿಪ್ಪು : ಅರೇ ಮೇರಾ ಷೇರ್... ಭೀಮ ಯಾ ಅಲ್ಲಾ ಬಾದ್‌ಷರನ್ನು ಕಾಣಲು ಮುಂಜಾನೆಯ ಐದನೇ ಪಹರೆಯಲ್ಲಿಯೇ ಬಂದಿದ್ದಾರೆ. ವ್ಹಾ ನಮಗೆ ಖುಷಿ ಹುವಾ. (ಅಪ್ಪಿಕೊಳ್ಳುವನು. ಭೀಮ ಬಾಗಿ ಪಾದಗಳನ್ನು ಮುಟ್ಟಿ ನಮಸ್ಕಾರ ಮಾಡುವನು). ಅರೆ, ತೂತೊ ಮೇರಾ ಷೇರ್ ಹೈ ನೀನು ಗುಲಾಮನಲ್ಲಾ.

ಭೀಮ : ತಾವು ಕರೆದರೆ ತಡ ಮಾಡಲು ಆದೀತೆ ಪ್ರಭು. ನಿಂತ ಸ್ಥಳದಿಂದಲೇ ಬಂದಿದ್ದೇವೆ. ತಮ್ಮ ಬೆಟ್ಟಿ ಮಾಡುವುದು ಬಿಟ್ಟರೆ ಬೇರೆ ಏನನ್ನು ಊಹಿಸಿ ಕೊಳ್ಳಲು ಸಾಧ್ಯ.

ಟಿಪ್ಪು : ನಮ್ಮ ಮೇಲಿನ ನಿಮ್ಮ ಅಭಿಮಾನಕ್ಕೆ ನಾನು

ಸಂತೋಷಗೊಂಡಿದ್ದೇನೆ. ನೀನು ವಯಸ್ಸಿಗೆ ಮೀರಿದ ಪರಾಕ್ರಮಿ, ಧೈರ್ಯವಂತ. ನಿನ್ನ ಧೈರ್ಯಕ್ಕೆ ಮೆಚ್ಚಲೆ ಬೇಕು.

ಭೀಮ : ಮಹಾಂಕಾಳಿಯಾಡಿ ಮೇಲೆ ಆಣೆ ಮಾಡಿ ಹೇಳ್ತೇನೆ. ನಾನು ಉಸಿರಾಡುವವರೆಗೆ ನಿಮ್ಮ ಸೇವೆಯನ್ನು ಮಾಡುತ್ತೇನೆ. ಈ ಬಂಜಾರ ನಂಬಿದವರಿಗೆ ಜೀವ ಕೊಡ್ತಾನೆ. ಮಹಾಪ್ರಭು ತಾವು ಅಪ್ಪಣೆ ಕೊಟ್ಟ ಮೇಲಿನಿಂದ ನನ್ನ ಇಡಿ ಜೀವನವನ್ನೆ ತಮ್ಮ ಸೇವೆಗೆ ಮುಡಿಪಾಗಿ ಇಟ್ಟಿದ್ದೇನೆ.

ಟಿಪ್ಪು : ನಿನ್ನಂತಹ ವೀರ ಸೈನಿಕರು ನನ್ನದುಕೆ ಸೈನ್ಯದಲ್ಲಿದಿದ್ದರೆ ಬ್ರಿಟಿಷ್ ಕುನ್ನಿಗಳನ್ನು ಯಾವತ್ತೋ ಓಡಿಸುತ್ತಿದ್ದೆ, ಆದರೆ ಏನ್ಮಾಡ್ಲಿ ಮರಾಠರೂ ನನ್ನ ಸಾತ್ ನೀಡುತ್ತಿಲ್ಲ. ನವಾಬರೂ ಬ್ರಿಟಿಷರ ಗುಲಾಮರಾಗಿದ್ದಾರೆ. ಈಗ ನಾನು ಒಬ್ಬನೇ ಆಗಿದ್ದೇನೆ ನಾನೀಗ ವಿವಶನಾಗಿದ್ದೇನೆ ಭೀಮ. ಏನು ಆಲೋಚಿಸದಂತಾಗಿದೆ ನನ್ನ ಸ್ಥಿತಿ

ಭೀಮ : ಮಹಾಪ್ರಭು, ಅವರಿಬ್ಬರ ಸಹಾಯವಿಲ್ಲದೆ ಗೆಲುವು ಅಸಾಧ್ಯವೆ. ತಾವು ಒಬ್ಬರೆ ಕೆಂಪು ಕುನ್ನಿಗಳನ್ನ ಹಿಂದೆ ಮಣ್ಣುಮುಕ್ಕಿಸಿದ್ದಿರಾ.

ಟಿಪ್ಪು : ಅಸಾಧ್ಯ ಭೀಮ ಬ್ರಿಟಿಷರ ಹತ್ತಿರ ಹೊಸ ಆಯುಧಗಳಿವೆ, ಹೊಸ ತಂತ್ರಗಳಿವೆ. ನಮ್ಮದು ಹಳೆ ಪದ್ಧತಿಯ ಯುದ್ಧ ಕೌಶಲ್ಯ ಹಾಗಾಗಿಯೇ ನಾವು ಸೋತಿದ್ದೇವೆ. ಈಗ ಅವರು ಮತ್ತೆ ಬಲಶಾಲಿಯಾಗಿದ್ದಾರೆ. ನಮ್ಮನ್ನು ಸೋಲಿಸಲು ಶತಪ್ರಯತ್ನ ಮಾಡುತ್ತಿದ್ದಾರೆ.

ಭೀಮ : ಪ್ರಭು, ನೀವು ಯಾವ ಕೆಲಸ ಹೇಳಿದರೂ ಮಾಡಲು ನಾನು ಸಿದ್ದ. ಅಪ್ಪಣೆಮಾಡಿ ನಾನೇನು ಮಾಡಬೇಕು.

ಟಿಪ್ಪು : ಈಗ ನಾನು ಒಬ್ಬಂಟಿಯಾಗಿ ಹೋರಾಡಬೇಕಿದೆ ಭೀಮ. ನಮ್ಮವರೇ ನನಗೆ ಧೋಖಾ ಮಾಡಿದರು. ಹೈದರಾಬಾದ್‌ನ ನಿಜಾಮ ಅಲಿಖಾನ್ ಬಿಳಿಯರಿಗೆ ಹೆದರಿ ಅವರಿಗೆ ನೆರವು ನೀಡುತ್ತಿದ್ದಾನೆ ನಾಮರ್ದಾ. ಇನ್ನೂ ಮರಾಠರ ಸ್ವಲ್ಪ ಉಮ್ಮಿದು ಇತ್ತು. ಅವರು ಕೂಡ ಬ್ರಿಟಿಷರಿಗೆ ಹೆದರಿ ನಮಗೆ ನೆರವು ಕೊಡುತ್ತಿಲ್ಲಾ. ಅಫ್ಘಾನ್‌ನ ಸುಲ್ತಾನ್ ಜಮಾತ್ ಷಾ ದುರಾನಿ ಅಸಹಾಯಕನಾಗಿದ್ದಾನೆ. ಇನ್ನೂ ಫ್ರಾನ್ಸ್ ದೇಶವೂ ಕೂಡ ಬ್ರಿಟಿಷರಿಂದ ತೊಂದರೆ ಅನುಭವಿಸಿ ನಮಗೆ ಸಹಾಯ ಮಾಡದಾಗಿದ್ದಾರೆ. ಕ್ಯಾಕರೂ ಮೇ ಏನು ಮಾಡಲಿ. ನಾನಿಗ

ಮುಳುಗುತ್ತಿರುವ ಹಡಗು ಯಾರಾದರೂ ಆಸರೆ ಸಿಕ್ಕರೆ ಭಾರತ ಮಾತೆಯನ್ನು ಉಳಿಸಬಹುದು.

ಭೀಮ : ಬಾದ್‌ಷ ನೀವೂ ಚಾಣಾಕ್ಷರು, ಮಲ್ಬಾರ್, ಕೊಡಗು ಮುಂತಾದ ಯುದ್ಧಗಳಲ್ಲಿ ಬ್ರಿಟಿಷರನ್ನ ಹಣ್ಣುಗಾಯಿ ನೀರುಗಾಯಿ ಮಾಡಿದ ಯೋಧ ನೀವು. ಈ ಯುದ್ಧ ನಿಮ್ಮ ಎಡಗೈಗೆ ಸಮಾನ. ತಾಯಿ ನಾಡಿಗಾಗಿನ ನಿಮ್ಮ ಹೋರಾಟವನ್ನು ಇತಿಹಾಸದಲ್ಲಿ ಯಾರು ಮರೆಯಲಾರರು. ನೀವು ಒಬ್ಬರೆ ಎಷ್ಟೊ ದೇಶದ್ರೋಹಿ ರಾಜರಿಗೆ ಸಮಾನರು ಪ್ರಭು ಹೀಗೆ ವಿವಶರಾಗಬೇಡಿ.

ಟಿಪ್ಪು : ಇತ್ತೀಚೆಗೆ ನನಗೆ ಭ್ರಮೆ ಹಿಡಿದಿದೆಯೋ, ಇಲ್ಲ ನಿಜವೋ, ಅರಮನೆಯ ಗೋಡೆಗಳಿಗೂ ಕಿವಿ ಇವೆ ಅನಿಸುತ್ತಿದೆ. ನೀನು ಅದೇಗೆ ಆಯುಧವಿಲ್ಲದೆ ಇಪ್ಪತ್ತೈದು ಜನ ಸೈನಿಕರನ್ನ ಹೊಡೆದು ಉರುಳಿಸಿದೆಯೋ. ಈಗ ನಿನ್ನ ಪರೀಕ್ಷೆ ಕಾಲ ಭೀಮ. ಬಿಳಿಮಂದಿಗೆ ಕಾಣದಂತೆ ನಮ್ಮ ಕೋಟೆಯೊಳಗೆ ದವಸ ಬಂದು ಬೀಳಬೇಕು. ಈಗಾಗಲೆ ಕೋಟೆಯ ಸುತ್ತಲು ಸರ್ಪಗಾವಲಿದೆ. ಯಾರು ಒಳಗೆ ಬರುತ್ತಾರೆ. ಯಾರು ಹೊರಗೆ ಹೋಗುತ್ತಾರೆ. ಎಲ್ಲವನ್ನು ಸೂಕ್ಷ್ಮವಾಗಿ ಗ್ರಹಿಸಲಾಗುತ್ತಿದೆ.

ಭೀಮ : ಕೇವಲ ಬಿಳಿಯರಿಗಷ್ಟೇ ಅಲ್ಲಾ ಅರಮನೆಯೊಳಗೆ ತಮ್ಮನ್ನ ಬಿಟ್ಟರೆ ಬಹಳಷ್ಟು ಜನರಿಗೆ ಸುದ್ಧಿನೆ ಸಿಗದು ಮಹಾಪ್ರಭು. ಆದರೆ ಸಣ್ಣ ತೊಂದರೆ ಇದೆ.

ಟಿಪ್ಪು : ಏನದು?

ಭೀಮ : ಸೈನ್ಯಕ್ಕೆ ಮತ್ತು ಅಧಿಕಾರಿಗಳಿಗೆ ನಾವು ನಿಮ್ಮ ಕಡೆಗೆ ಕೆಲಸ ಮಾಡುತ್ತಿರುವುದಕ್ಕೆ ಗುರುತು ಬೇಕು. ನಮ್ಮವರನ್ನು ಯಾರಾದರೂ ತಡೆದರೆ ತೋರಿಕೆಗೆ. ಇಂಥ ಸ್ಥಿತಿಯಲ್ಲಿ ಸೈನಿಕರು ಯಾರನ್ನು ನಂಬುವುದಿಲ್ಲ. ನಾಳೆ ನಮ್ಮವರಿಗೆ ತೊಂದರೆ ಯಾರಬಾರದು.

ಟಿಪ್ಪು : ನಮ್ಮ ಲಾಂಛನವನ್ನು ನಿಮ್ಮ ಮಂದಿಗೆ ಕೊಡು. ಹಾಗೇನಾದರೂ ಆದಲ್ಲಿ ನಾನಿದ್ದೇನೆ. ಅಷ್ಟೆ ಅಲ್ಲಾ ನಮ್ಮ ಖಾಸಾ ಸೈನಿಕರಿಗೆ ನಿಮ್ಮ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಗುತ್ತೆ.

ಭೀಮ : ನಮಗೆ ಅಪ್ಪಣೆ ನೀಡಿ ಪ್ರಭು.

* * *

ದೃಶ್ಯ ೩

ಸನ್ನಿವೇಶ ೪

ಮೀರ್‌ಸಾಧಕ್ : (ಅನುಮಾನದಿಂದಲೆ) ಏಯ್... ಯಾರು, ಯಾರು ನೀನು

ಭೀಮ : (ಕೇಳದಂತೆ ಮುಂದೆ ಹೊರಡುವನು) ಯಾರು?

ಜೇಮು : (ಪಿಸುಮಾತಲ್ಲಿ) ನೋಡಿದ್ದಾನೆ. ನಿನ್ನ ಗುರುತಿಸಲು ಪ್ರಯತ್ನಿಸುತ್ತಿದ್ದಾನೆ. ದೊಡ್ಡ ಹೆಜ್ಜೆ ಹಾಕ್ರಿ. ಹೂಂ, ಅವನು ತಲೆಕೆಡಿಸಿ ಕೊಳ್ಳುವುದರಲ್ಲಿ ಕಾಣೆಯಾಗಬೇಕು. ಓಡಿ.

ಮೀರ್‌ಸಾದಕ್ : ಏಯ್, ಏಯ್, ಯಾರು? ಯಾರು ನೀನು ನಿಲ್ಲು. ಯಾರವನ್ನು ಸೈನಿಕರೆ...

ಭೀಮ : ಭೀಮನಾಯ್ಕನ ತಡೆಯುವುದು ಅಷ್ಟು ಸುಲಭ ಅಲ್ಲ ಸಾದಕ್ ಸಾಹೇಬ್. (ಕುದುರೆಗಳು ಓಡಿದವು) ಹಿಡಿದು ತೋರಿಸಿ ಮತ್ತೆ ಮತ್ತೆ ಬರುತ್ತೇನೆ.

ಮೀರ್‌ಸಾದಕ್ : (ಕಾವಲುಗಾರರನ್ನ ಕರೆದು) ಯಾರು ಅದು ನಾವು ಈ ರಾಜ್ಯದ ಮುಖ್ಯಮಂತ್ರಿ ಕರೆದರೂ ಕೇಳದಂಗೆ? ಅರಮನೆ ಪ್ರವೇಶವಾದರೂ ಹೇಗೆ? ಯಾಕೆ ಬಂದಿತ್ತು ಅದು. ಕ್ಯಾಚಲ್‌ರಹಾ ಹೈ ಯಂ ಹ.

ಕಾವಲುಗಾರ : ಗೊತ್ತಿಲ್ಲ ಪ್ರಭು. ನಮಗಂತು ಯಾರು ಕಾಣಲಿಲ್ಲ. ನಿಮಗೆ ಅಂದ್ರೆ ನಾನು.....

ಮೀರ್‌ಸಾದಕ್ : ಅರಮನೆಯ ದ್ವಾರಪಾಲಕರಿಗೆ ಗೊತ್ತಿಲ್ಲಾ ಅಂದ್ರೆ ಏನು? ಜಲಾಲ್ ಕಂಹಾ ಮರಗಯಾ, ಜಲಾಲ್, ಎಲ್ಲಿದ್ದಿಯಾ..

ಜಲಾಲ್ : ಜೀ ಹುಜೂರ್ ಹೇಳಿ...ಇದು ಅರಮನೆ ಪ್ರದೇಶ ತಾವು ಸುಮ್ಮನಿದ್ದರೆ ಒಳ್ಳೆಯದು ನಹಿ ತೊ.

ಮೀರ್‌ಸಾದಕ್ : ಈ ಮೀರ್‌ಸಾದಕ್‌ಗೆ ಅರಮನೆಯ ಎಲ್ಲಾ ಕಾರ್ಯ ಗೊತ್ತು. ಆದರೆ ಇವತ್ತು ಏನೂ ತಿಳಿಯುತ್ತಿಲ್ಲಾ ಜಾಗ್ರತೆ. ಕಲ್ ಹಂ ಶ್ರೀರಂಗಪಟ್ಟಣಂಕೆ ಬಾದಷ..... ಜಲಾಲ್ ನೀನು ಹೀಗಾದರೆ ನಾನು ಬಾದ್‌ಷ ಆದಂತೆ ಹೂಂ ತಗೊ ಇನಾಮ್.

ಜಲಾಲ್ : ಅವನ್ದುಕೆ ನಾಮ ಬಂದು ಭೀಮ. ಬಂಜಾರ, ವ್ಯಾಪಾರಿ, ಸುಲ್ತಾನ್ ಕೆ ಖಾಸ್ ಆದ್ಮಿ ಮುಂದೆ......

ಮೀರ್‌ಸಾದಕ್ : ಕ್ಯಾ ಕ್ಯಾ... ಭೀಮ, ಬಂಜಾರ ಅರೆ ಅವನು ಚೋಟುದ್ದ ಹುಡುಗ.

ಜಲಾಲ್ : ಹೌದು ಮಹಾಪ್ರಭು. ಬಹಳ ಸಮಯದಿಂದ ಒಳಗೆ ಇದ್ದ. ಏನು ವಿಷಯ ನನಗೆ ಗೊತ್ತಿಲ್ಲಾ. ಆದರೆ ಸುಲ್ತಾನ್ ಜೊತೆಗೆ ಮಾತಾಡುತ್ತಿದ್ದ.

ಮೀರ್‌ಸಾದಕ್ : ಪತಾಲಗಾವ್ ಅವನ್ದು ಯಾಕೆ ಬಂದಿದ್ದು.? ಯಾವಾಗೆ ಬಂದ? ಏನ್ಸಮಾಚಾರ ಬಾದ್‌ಷ ಯಾಕೆ ಕರೆದ?

ಜಲಾಲ್ : ಜೀ ಹುಜೂರ್.

ಮೀರ್‌ಸಾದಕ್ : ಭೀಮನಾಯ್ಕ ಬಂಜಾರ ಕ್ಯೂಂ ಆಯಾ? ಯಾಕೆ ಬಂದ. ನಮ್ದುಕೆ ಮಾಲೂಮ್ ಇಲ್ದಂಗೆ ಏನೋ ನಡಿತಿದೆ. ಪತಾಲಗಾನಾಹೈ.

ಜಲಾಲ್ : ಬಾದಾಷಾ ಕರದರು ಬಂದ. ಅಷ್ಟೆ ಹೂಜೂರ್ ತಲೆ ಕಡಿಸಿಕೊಳ್ಳ ಬೇಡಿ. ನನಗೆ ಹೇಳಿದ್ದಿರಲ್ಲವೆ, ಇನ್ನೂ ನೆಮ್ಮದಿಯಿಂದಿರಿ.

ಮೀರ್‌ಸಾದಕ್ : ವಿಷಯ ಎ ಹೈ ಕ್ಯಾ. ಬರಾಬರ್, ಅವತ್ತೆ ಮಾಲುಮ್ ಥ. ನಂದುಕೆ.

ಜಲಾಲ್ : ಹೌದು ಹೂಜೂರ್. ಬಾದಾಷ ಏಕಾಂತದಲ್ಲಿ ಬಹಳ ಹೊತ್ತು ಮಾತಾಡಿದರು. ಅಲ್ಲಿ ಯಾರಿಗೂ ಪ್ರವೇಶ ಇರಲಿಲ್ಲ.

ಮೀರ್‌ಸಾದಕ್ : ಏನು ಮಾತಾಡಿರಬಹುದು? ನಮ್ದುಕೆ ಗೊತ್ತಿಲದಂಗೆ ಇವನ ಹತ್ತಿರ... ಇದು ಯಾಕೊ ಯಡವಟ್ಟು ಆಗ್ತಾ ಇದೆ.

ಜಲಾಲ್ : ತಲೆ ಕೆಡಿಸಿಕೊಳ್ಳಬೇಡಿ ಬಿಡಿ. ಏನೋ ಜರೂರ್ ಕೆಲಸವಿದ್ದಿತು.

ಮೀರ್‌ಸಾದಕ್ : ಬದ್ಮಾಷ್, ನಿನಗೆ ಗೊತ್ತಿಲ್ಲ ಬಾದಾಷಾಗೆ ನಮ್ಮ ಮೇಲೆ

ಅನುಮಾನ ಬಂದಂಗೈತೆ. ಬಹಳ ಹುಷಾರಾಗಿರಬೇಕು ಕ್ಯಾ. ದೇಕೋ ಏನು ನಡಿತಿದೆ ತಿಳಿದುಕೊ.

ಜಲಾಲ್ : (ಸ್ವಗತ) ನಿನ್ನಂತಹ ಹರಾಮಖೋರ್, ನಮಕಹರಾಮ್ ಮೇಲೆ ಅನುಮಾನ ಬರದಿದ್ರೆ? ಬಂದಿರಬಹುದು ಹೂಜೂರ್ ಸ್ವಲ್ಪ ಹುಷಾರಾಗಿರಿ. ನಾಳೆ ಬಾದ್‌ಷ ಆಗಬೇಕು ಅಂತ ಕನಸು ಕಾಣೋದಕ್ಕೆ ತಲೆ ಇರ್ಲಿಕ್ಕಿಲ್ಲಾ.

ಮೀರ್‌ಸಾದಕ್ : ಅರೇ, ಶ್ರೀರಂಗಪಟ್ಟಣದ ಬಾದಾಷ ನಾನಾಗುವ ನನ್ನ ಕನಸಿಗೆ ಈ ಭೀಮ... ಇಲ್ಲಾ ಹೀಗೆ ಆಗೋದಕ್ಕೆ ನಾನು ಬಿಡಲ್ಲ ಅವನನ್ನ ಮುಗಿಸಬೇಕು. ಹೇಗೆ? ಜಲಾಲ್..ಹೇಗೆ?

ಜಲಾಲ್ : ಛೇ, ಅವನು ನಿಮ್ಮ ಪ್ರತಿಸ್ಪರ್ಧಿಯಲ್ಲಾ. ಹೋಗಲಿ ಬಿಡಿ ಹುಜೂರ್ ಬಡಪಾಯ, ಬಂಜಾರ ಏನೊ ವ್ಯಾಪಾರ ಮಾಡ್ತವ್ನೆ

ಮೀರ್‌ಸಾದಕ್ : (ಸ್ವಗತ) ಈ ಮಗನೂ, ನಂಬಿಗಸ್ಥನಲ್ಲ, ಅಲ್ಲಾ ನಾನು ಹೇಳಿದ್ದು ಬೇರೆ. ಜಾವೋ ನಿಂದು ಕೆಲಸ ನೋಡು. ಬಾದಾಷ ಏನು ಮಾಡುತ್ತಾರೆ ಸರಿಯಾಗಿ ಗಮನಿಸು. ಇವನು ಎಲ್ಲಿಂದ ವಕ್ಕರಿಸಿದಾ ಬದಾಷ ಇವನ ಮೇಲೆ ನಂಬಿಕೆ ಇಟ್ಟರೆ ಕೋಟೆಯೊಳಗೆ ನಮ್ಮ ಜಾಸೂಸಿಗೆ ಅಡ್ಡಿಯಾಗಬಹುದು. ನಾಳೆ ನಾನು ಶ್ರೀರಂಗಪಟಣಂ ಆಳುವುದು ಕನಸಾಗಿ ಉಳಿಯಬಹುದೆ?

* * *

ದೃಶ್ಯ ೪

ಸನ್ನಿವೇಶ ೧

ಬಾವ : ಹೀಗೆ ಬುದ್ಧಿವಂತ, ಚಾಣಾಕ್ಷನಾದ ಭೀಮ ರಾಜನ ಆಂತರಿಕ ಸಲಹೆಗಾರರಲ್ಲಿ ಒಬ್ಬನಾದ. ತನ್ನ ಬಳಿ ಇದ್ದ ಎಲ್ಲಾ ದವಸವನ್ನು ಯಾರಿಗೂ ತಿಳಿಯದಂತೆ ಅರಮನೆ ಸೇರಿಸಿದ. ಮಹಾಪ್ರಭು ಟಿಪ್ಪುಸುಲ್ತಾನ್ ಪ್ರಸನ್ನನಾದ. ಭೀಮನಾಯ್ಕ ಟಿಪ್ಪುಗೆ ಇನ್ನೂ ಹತ್ತಿರವಾದ. ಭೀಮ ಬಿಳಿಮಂದಿ ಕಣ್ಣುತಪ್ಪಿಸಿ ದವಸಧಾನ್ಯವನ್ನು ಅರಮನೆಗೆ ತಲುಪಿಸಿದ. ದಿನಗಳು ಹೀಗೆ ಕಳೆಯುತ್ತಿರುವಾಗ ಬಿಳಿಯರು ಸುಲ್ತಾನನ್ನ ಮಣಿಸಿಯೇ ತೀರಬೇಕೆಂದು ಯುದ್ದ ಸಾರಿದರು... ಆಗ,

ಭೀಮನಾಯ್ಕ : ಅಪ್ಪಾಜಿ, ಶ್ರೀರಂಗಪಟ್ಟಣದಲ್ಲಿ ಯುದ್ದ ಆರಂಭವಾಗಿದೆ. ಇನ್ನು ಮುಂದೆ ನಮ್ಮ ವ್ಯಾಪಾರ. ವಹಿವಾಟು, ನಮ್ಮ ಮಂದಿಗೂ ತೊಂದರೆಯಾಗಬಹುದು. ನಮ್ಮ ಎತ್ತುಗಳನ್ನ ನಮ್ಮ ಜನರನ್ನ ಸುರಕ್ಷಿತವಾಗಿ ಕಾಪಾಡಬೇಕು. ಏಕೆಂದರೆ ಬಿಳಿಯರು ನಮ್ಮನ್ನು ಅವರ ಶತ್ರುಗಳೆಂದೆ ತಿಳಿದಿದ್ದಾರೆ.

ನಾನುಸಾದ್ : ನಮ್ಮವರನ್ನ ಕಾಪಾಡುವ ಜವಾಬ್ದಾರಿ ನಿನ್ನ ಮೇಲಿದೆ. ಮಗ ನಾವು ಎಷ್ಟು ದಿನಗಳ ಕಾಲ ಬದುಕಿ ಉಳಿದೇವು. ಈ ತಾಂಡದ ಜವಾಬ್ದಾರಿ ನಿನ್ನ ಮೇಲಿದೆ, ಈ ಜಾನವಾರುಗಳನ್ನ ಈ ತಾಂಡದ ಹಿರಿಮೆಯನ್ನ ನೀನು ನಂತರ ನಿನ್ನ ಮಕ್ಕಳು ಕಾಪಾಡಬೇಕು.

ರಾಮಿಬಾಯಿ : ಮಗ ಭೀಮ ಗೋಮ್ಲಿ ಸಂಬಂಧ ಮಾಡಿ ಬಹಳ ದಿನಗಳಾದವು ಯುದ್ಧ ಆರಂಭವಾಗುವ ಮುನ್ನ ಮದುವೆ ಆಗಿ ನಮ್ಮ ವಂಶ ಉದ್ಧಾರಕ್ಕೆ ಒಂದು ಕೂಸು ಕೊಡು. ಈ ಮುದುಕ–ಮುದುಕಿಗೆ ಅಜ್ಜ–ಅಜ್ಜಿ ಆಗುವ ಭಾಗ್ಯವಾದರೂ ಬಂದೀತು. ನಿಮ್ಮ ವಂಶ ಮುಂದುವರೆಯಬೇಕಲ್ಲ ಅದು ವಿಷಬಳ್ಳಿಯಂತೆ ಹಬ್ಬಬೇಕು. ಮುಂದಿನದು ಗೊತ್ತಿಲ್ಲ.

ನಾನುಸಾದ್ : ನಿಮ್ಮಮ್ಮನ ಮಾತು ಸರಿಯಾಗಿದೆ ಮಗ; ಒಪ್ಕೊ. ವಿಷದ ಬಳ್ಳಿ ಹಂಗೆ ನಮ್ಮ ಪರಂಪರೆ ಬೆಳೆಯಬೇಕು. ವಂಶ ಉದ್ದಾರ ಆಗಬೇಕು. ನಿನ್ನಿಂದ ನಿನ್ನ ಮಕ್ಕಳು, ಅವರ ಮಕ್ಕಳು ಪರಂಪರೆ ಹೀಗೆ ಮುಂದುವರಿಯಬೇಕು.

ಜೇಮು : ಭೀಮ, ಅಕ್ಕ–ಭಾವರ ಮಾತು ಸರಿಯಾಗಿದೆ. ತಾಂಡ ಉದ್ದಾರ ಮಾಡೋದಕ್ಕೆ ನಿನ್ನ ವಂಶ ಉದ್ದಾರಕ ಬೇಕು. ನೀನು ಮದುವೆಯಾಗಲೇ ಬೇಕು ಭೀಮ. ನನ್ನ ಅಕ್ಕನ ವಂಶ ಇಲ್ಲಿಗೆ ಕೊನೆಯಾಗಬಾರದು.

ಭೀಮ : ಮಾಮ, ಪರಿಸ್ಥಿತಿ ಹೆಂಗಿದೆ ಅಂತ ತಿಳಿದು ನೀನು ಈ ಮಾತನ್ನು ಹೇಳುತ್ತಿದ್ದಿಯಾ? ಈಗಾಗಲೇ ಬಿಳಿಯರ ಲಾರ್ಡ್ ಕಾರ್ನ್‌ವಾಲಿಸ್ ಮಹಾಪ್ರಭು ಟಿಪ್ಪುವಿನ ಮೇಲೆ ಯುದ್ಧ ಸಾರಿದ್ದಾನೆ. ಹೊರಗಡೆಯ ನೆರವು ಬಂದಾಗಿದೆ. ಒಳಗಡೆಗೆ ಮೀರ್‌ಸಾಧಕ ಮತ್ತು ಪೂರ್ಣಯ್ಯ ಪಿತೂರಿ ನಡೆಸಿದ್ದಾರೆ. ನಾಳೆ ಏನಾದರೂ ಹೆಚ್ಚುಕಮ್ಮಿ ಆದರೆ ಗೋಮ್ಲಿ ವಿಧವೆಯಾಗಿ ಜೀವಂತ ಶವ ಆಗ್ತಾಳ. ಈ ಸನ್ನಿವೇಶದಲ್ಲಿ ನನಗೆ ಮದುವೆ ಬೇಡ. ನಾನು ಯುದ್ದದಲ್ಲಿ ನನಗೆ ಊಹಿಸಲು ಸಾಧ್ಯವಾಗುತ್ತಿಲ್ಲ.

ಗೋಮ್ಲಿ : ನೋಡು ನೀ ಹಿಂಗ ಹೇಳಿದರೆ ನಾನು ಹೆದರ್ತಿನಿ ಅಂತ ಅಂದ್ಕೊಂಡರೆ ಅದು ನಿನ್ನ ಮೂರ್ಖತನ. ನಾನು ಹುಟ್ಟಿರುವುದೇ ನಿನ್ನ ಸಲುವಾಗಿ, ಬದುಕಿದರೆ ನಿನ್ನ ಜೊತೆ, ಸತ್ತರೂ ನಿನ್ನ ಜೊತೆ. ನಿಮ್ಮೆಲ್ಲರ ಸಮಕ್ಷಮ, ಸೇವಾಬಾಯಿ–ಮರಿಯಯಾಡಿ ಮೇಲೆ ಆಣೆ ಮಾಡಿ ಹೇಳ್ತಿನಿ. ಇದು ನನ್ನ ಶಪಥ. ನಾನು ನಿನ್ನ ಜೊತೆ ಯುದ್ದಕ್ಕೆ ಬರುತ್ತೇನೆ. ನಿನಗಾಗುವುದು ನನಗೂ ಆಗಲಿ.

ಭೀಮನಾಯ್ಕ : ಗೋಮ್ಲಿ... ಏನು ಹುಡುಗಾಟ ಅಂದುಕೊಂಡಿಯಾ? ತಲೆ ಸರಿ ಇದೆ ತಾನೆ. ಮದುವೆ ಆಗಿ ಬಾಳಿಬದುಕ ಬೇಕಾದವಳು

ನೀನು. ನಿನ್ನ ಮುಂದೆ ದೊಡ್ಡ ಭವಿಷ್ಯವಿದೆ, ಯಾಕೆ ಹಠ ಮಾಡುತ್ತಿದ್ದಿಯಾ.

ಗೋಮ್ಲಿ : ನೀ ಏನೇ ಪ್ರಯತ್ನ ಮಾಡಿದರು ನನ್ನ ನಿರ್ಣಯ ಬದಲಾಗದು. ಹೆಣ್ಣು ಮನಸು ಮಾಡಿದರೆ ಏನನ್ನು ಬೇಕಾದರು ಮಾಡಬಲ್ಲಳು. ನನ್ನ ನಿರ್ಧಾರ ಅಚಲ.

ಸೋಮ್ಲನಾಯ್ಕ : ಮಗಳೆ ಗೋಮ್ಲಿ... ಎಂಥ ದೊಡ್ಡ ಮಾತು ತಾಯಿ ನಿನ್ನದು. ನಿನ್ನ ತಂದೆ ಅನಿಸಿಕೊಳ್ಳುವುದಕ್ಕೆ ಹೆಮ್ಮೆಯಾಗುತ್ತೆ ಮಗ.

ಗೋಮ್ಲಿ : ಬಾಪು, ನಿನಗೂ ಸತ್ಯ ಗೊತ್ತಿದೆ. ಅವನಿಲ್ಲದೆ ನಾನು ಬದುಕುವುದಿಲ್ಲ. ಅವನೆ ನನ್ನ ಗಂಡ, ನಾನು ನಿರ್ಧರಿಸಿ ಆಗಿದೆ ಅವನು ಬೇಕಾದ್ದು ಅಂದುಕೊಂಡರು ನಾನು ಅದನ್ನು ಬದಲಿಸುವುದಿಲ್ಲ.

ಭೀಮ : ಈ ಯುದ್ಧದ ಸಮಯದಾಗ ನಾನು ಮದುವೆ ಮಾಡ್ಕೊಂತ ಕುಂದ್ರಾಕ ಆಗಲ್ಲ, ಯಾವಾಗ ಶ್ರೀರಂಗಪಟ್ಟಣದಿಂದ ಬುಲಾವ್ ಬರುತ್ತೊ. ನೀವು ಸುಮ್ಮನೆ ನನ್ನ ಇಕ್ಕಟ್ಟಿನಲ್ಲಿ ಸಿಲುಕಿಸುವುದು ಬೇಡ.

ನಾನೂಸಾದ್ : ಅದು ಯಾವಾಗಾದರೂ ಬರ್ಲಿ, ಮದುವೆ ಅಂತೇನು ಬೇಡ ಕೂಡಿಕೆ ಆಗಬಹುದಲ್ಲ. ಇವತ್ತು ಒಳ್ಳೆ ದಿನಾ ಕೂಡಿಕೆ ಮಾಡಿಕೊ. ಎಲ್ಲಾ ಆ ಸೇವಾಭಾಯಗೆ ಬಿಡು.

ಭೀಮನಾಯ್ಕ : ಬಾಪೂ, ಅವಳೇನು ವಿಧವೆನಾ? ಇಲ್ಲ ಓಡಿಬಂದವಳು ಕೂಡಿಕೆ ಮಾಡಾಕ. ಹರೆಯದ ಹುಡುಗಿಯ ಬಾಳೆವು ಹೀಗೆ ಹಾಳುಮಾಡಿದರೆ ಹೇಗೆ. ನಾಳೆ ಸಮಾಜ ಏನಂತ ತಿಳಿದೀತು. ನೀ ಏನಂತಿ ಗೋಮ್ಲಿ ಮಾತಾಡು.

ಗೋಮ್ಲಿ : ಓಡಿಬಂದವಳು ಹೌದು ನಾನು ಓಡಿ ಬಂದವಳೆ, ನಿನ್ನ ಜೊತೆ ಕೂಡಿಕೆ ಮಾಡ್ಕೊಳಾಕ ನಾ ತಯಾರದೀನಿ. ನೀ ಸುಮ್ಮನೆ ಹೂಂ ಅನ್ನು ಎಲ್ಲಾ ದೈವ ಇಚ್ಛೆ.

ರಾಮಬಾಯಿ : ಮಗ ನಮ್ಮ ಸಂಕಟ ನಿನಗೆ ತಿಳಿಯಾಕಿಲ್ಲ. ಹೂಂ...ಅನ್ನು, ಈ ಒತ್ತಡದಲ್ಲಿ ಹೆಚ್ಚು ಯೋಚನೆ ಮಾಡಬೇಡ.

ನಾನೂಸಾದ್ : ಹಟ್ಟಿನಾಯಕ ನಾದ ನಾನು ನನ್ನ ಮಗ ಭೀಮನಾಯ್ಕನಿಗೂ ವಿಸಳಾವತ್ ಪಂಗಡದ ಸೋಮ್ಲನಾಯ್ಕ ಜಾತ್ ಪಂಗಡದ ವಧು ಗೋಮ್ಲಿಬಾಯಿಯನ್ನು ಬುಕ್ಯ ಪಂಗಡದ

ಭೀಮನಾಯ್ಕನಿಗೂ ಕೂಡ್ಕೆ ಮಾಡೋದಕ್ಕೆ ಅನುಮತಿ ಕೊಡುತ್ತಿದ್ದೇನೆ. ಈ ಕ್ಷಣದಿಂದಲೆ ಅವರು ಪತಿ ಪತ್ನಿ ಅಂತ ಘೋಷಿಸುತ್ತೇನೆ. ತಾಂಡದಲ್ಲಿ ಯಾರು ಅವರಿಗೆ ಅವಾಚ್ಯ ಶಬ್ದಗಳಿಂದ ಬೋಯ್ಯುವುದು, ಕರೆಯುವುವಂತಿಲ್ಲ.

ಗೋಮ್ಲಿ : ನನಗೆ ಒಪ್ಪಿಗೆ ಇದೆ. ಕಾಯ, ವಾಚ, ಮನಸಾ ನನ್ನ ಸ್ವ ಇಚ್ಛೆಯಿಂದ ಭೀಮ ಬುಕ್ಯಾನನ್ನು ಗಂಡ ಅಂತ ಒಪ್ಪಿಕೊಳ್ಳುತ್ತೇನೆ.

ಸೋಮ್ಲನಾಯಕ : ನನಗೂ ಒಪ್ಪಿಗೆ ಇದೆ.

ಭೀಮನಾಯ್ಕ : ನಿಮ್ಮ ಜಿದ್ದಿನ ಮುಂದೆ ನಾನು ಸೋಲಲೇಬೇಕಲ್ವೆ. ಆಯ್ತು ನನಗೂ ಒಪ್ಪಿಗೆ ಇದೆ. ನಾನು ಬದುಕಿರುವವರೆಗೆ ನಾನು ಅವಳನ್ನ ನನ್ನ ಧರ್ಮಪತ್ನಿ ಎಂದೆ ಭಾವಿಸಿ ಅವಳಿಗೆ ಯಾವ ನೋವು ಬರದಂತೆ ಕಾಪಾಡುತ್ತೇನೆ.

* * *

ದೃಶ್ಯ ೪

ಸನ್ನಿವೇಶ ೨

(ತಾಂಡದಲ್ಲಿ ಹಬ್ಬದ ವಾತಾವರಣ ಏರ್ಪಟ್ಟಿತು. ಭಟ್ಟಿ ಸರಾಯಿ ಮಡಿಕೆಗಳು ತುಂಬಿ ತುಂಬಿ ಮಂದಿ ಕುಡಿಯತೊಡಗಿದ್ದರು.)

ಪಕ್ಕೀರ : ಇದನ್ನ ನಾವು ಒಪ್ಪಕಿಲ್ಲ ಅಂದ್ರೆ ಒಪ್ಪಾಕಿಲ್ಲ. ಈ ಮಗ ಹಟ್ಟಿ ನಾಯಕ ಮತ್ತು ಅವನ ಮಗ ಭೀಮಂದ ಈ ನಿರ್ಧಾರ ನಾವು ಪ್ರಶ್ನಿಸಿಲೇಬೇಕು.

ಪೂಜಾರಿ : ಛೆ ಎಂತ ಕೆಲ್ಸ ಆತಲೆ ಪಕ್ಕೀರ ಮಗನ ಹಾವು ಹೊಡದು ಹದ್ದಿಗ ಹಾಕಿದೆ ಬಾಳಿ ಮೀನು ಕೈಯಾಗಿಂದ ತಪ್ಪಿಸಿಕೊಂಡಂಗಾತಲ್ಲ. ಏನ ಮಾಡಬೇಕು.

ಪಕ್ಕೀರ : ಏನ್ಮಾಡ್ತಿ ಪುಜಾರಪ್ಪ. ಸೇವಾಭಾಯ ಮರಿಯಮ್ಮ ಮೈಯಾಗ ಬಂದಂಗ ನಾಟಕ ಮಾಡು. ದೇವರಿಗೆ ಇದು ಇಷ್ಟ ಇಲ್ಲಾಂತ ಹೇಳು. ಇದೊಂದೆ ಹಾದಿ ನಮ್ಮ ತಾವ ಇರೋದು. ಹೆಂಗಾರಮಾಡಿ ಇದನ್ನ ತಪ್ಪಿಸೋದಕ್ಕೆ ನೋಡಾನ, ಏನಂತಿಯ.

ಪೂಜಾರಿ : (ಘಳಿಗೆಯೋಚನೆ ಮಾಡಿದವನ) ಅಲ್ಲಲೆ ನಾನು ಖೇಲೋದು (ದೇವರು ಮೈ ಮೇಲೆ ಬಂದರಿಗೆ ಹೇಳಿಕೆ ಕೊಡುವುದು) ಬಿಟ್ಟು ಬಹಳ ವರ್ಷಗಳಾದವು ಈಗ ಇದ್ದಕ್ಕಿದಂಗೆ ಸೇವಾಭಾಯ ಮೈ ಮೇಲೆ ಬಂದಾನಂದ್ರ ಮಂದಿ ಒಪ್ಪಬೇಕಲ್ಲವೇ. ಆದ್ರ, ಒಂದ ಹತ್ತ ಮಂದಿಗ ಮುಕ್ಕಾರ ಕುಡಿಸಿ ನನ್ನ ಕಾಲಿಗ ಬೀಳಸು ಆವಾಗ ನೋಡಪ್ಪ ನಾನೂ ಸಾದ್, ಅವನ ಹೆಂಡತಿ ರಾಮಬಾಯಿ ಸುಕಾಸುಮ್ಮನೆ ನನ್ನ ಕಾಲ ಹಿಡಿದು ತಪ್ಪು ಒಪ್ಕೊಂತಾರ. ಏನಂತೀಯ.

ಪಕ್ಕೀರ : ಹೌದಲ್ಲೊ ಪುಜಾರಿ. ನಿಂಗು ತಲೆ ಐತೆ ಬಿಡು. ಆಹಾ ಎಂಥ ಯೋಚನೆ. ಈ ಲಮಾಣಿ ಮಂದಿಗೆ ಹೆಂಡಸರಾಯಿ ಅಂದ್ರೆ ಸಾಕು ಏನ ಮಾಡಾಕೂ ತಯಾರಾಗ್ತಾರೆ. ನೀ ಒಂದಕೆಲ್ಸ ಮಾಡು, ನಮ್ಮ ಡೇರಗಳಿರೊ ಜಾಗಕ್ಕ ನಡಿ ನಾ ಒಂದ ಐದ ಆರು ಮಂದಿನ ಕರ್ಕೊಂಡು ಹಿಂಗ ಬರ್ತಿನಿ. ಹಟ್ಟಿನಾಯ್ಕ ನಾನೂ ಸಾದ್‌ನ ಡೇರೆ ಮುಂದೆ ಹೂಂ...ಊಹೂಂ ಅಂತಂದು ವಾತಾವರಣ ಸೃಷ್ಟಿ ಮಾಡಬೇಕು.

ಪೂಜಾರಿ : ಗಡಾನ ಬಾರಲೆ ಹುಡಗ, ನೀ ಏನಾರ ತಡಮಾಡ್ದಿ ಮಂದಿ ಕಾಡಿಸಿ ಕಾಡಿಸಿನೆ ನನ್ನ ಹೆಣ ಎತ್ತ ಬಿಡ್ತಾರ. ನೋಡಲೆ ಪಕ್ಕೀರ, ಇದ್ದಕಿದ್ದಂಗ ಏನಾರು ಮಾಡಾಕ ಹೊದ್ನಿ ಅಂದ್ರ ಹುಚ್ಚ ಅಂತ ಬೆನ್ನು ಹತ್ತಬಾರದು ಮತ್ತ.

ಪಕ್ಕೀರ : ನಡಿ ಪೂಜಾರಿ ನೀ ಏನು ಗಾಬರಿಯಾಗಬೇಡ. ದೇವರು ಅಂದ್ರ ಮಂದ್ರಿ ಉಚ್ಚಿನ ಹೊಯ್ಕೊಂತಾರ. ನಡಿನಿ ಮುಂದಕ್ಕ ಹೂಂ, ನಾವು ಹಿಂದಿಂದ ಸೋ ಅಂತೀವಿ.

ಪೂಜಾರಿ : (ಹೆದರುತ್ತಲೆ) (ನಾಯಕಪ್ಪನ ಬಿಡಾರದ ತಾವ ಬಂದವನೆ) ಹೂಂ ಹೂಂ..... (ಕೂದಲು ಕೆದರಿಕೊಂಡು, ಕುಡಿದ ಅಮಲಿನಲ್ಲಿ ಕಣ್ಣು ಕೆಂಪಗೆ ಮಾಡಿಕೊಂಡರು ಕೇಳಿದವನ ಎದಿನಡುಗುವಂತೆ) ಹೂಂ.... ಹೂಂ....

ಪೋಮಿ : ಅರೆ ಪೂಜಾರಿ ಮೈಯಾಗ ದೇವರು ಬಂತ್ರಪ್ಪೊ ಓಡ್ರಿ....ತಾಯಿ..... ಕಾಪಾಡವ್ವ, ಎಷ್ಟೊ ವರ್ಷಗಳಿಂದ ನಮ್ಮ ಹಟ್ಟಿ ಬಿಟ್ಟವಳು ಇದ್ದಕಿದ್ಯಂಗೆ ಈಗ ಬರಬೇಕು ಅಂದ್ರ ಏನಾರು ತೆಪ್ಪು ಆಗಿರಬೇಕು.

ಪೂಜಾರಿ : ಷು.....ಷು.......ಲೇ ಮಕ್ಕಳ್ರಾ, ಏನತಿಳ್ಕೊಂಡಿರೊ ನನ್ನ. ನಾನು ಯಾಡಿ ಅಲ್ಲಾ, ಸೇವಾ ಬಾಪು ಹೌದು. ನನ್ನ ಮರತು ಬಿಟ್ರೆನ್ರೋ ನಿಮ್ಮ ಪಾಲಿಗ ನಾನು ಇಲ್ಲ ಅಂತ ತಿಳ್ಕೊಂಡರಗೈತೆ. ಉದ್ದಾರ ಆಗಾಕಿಲ್ಲ ನೀವು. ಊಂ ಹೂಂ.......ಷು....ಷು....

ಕಿಷ್ಟ : ಬಾವು ಮಹಾರಾಜ್, ಎಲ್ಲಾನು ಕ್ಷಮಾಮಾಡು ಕರಿತಲ ಮನುಷ್ಯರು ನಾವು ಒಂದ ತಿಳದ್ರ, ಒಂದ ತಿಳಿಯಾಕಿಲ್ಲ. ಏನೋ ತೆಪ್ಪುಮಾಡಿವಿ. ಹೊಟ್ಟೆಯೊಳಗೆ ಹಾಕ್ಕೊಳ್ಳಪ್ಪ.

ಪುಜಾರಿ : ಆ ಹಟ್ಟಿನಾಯಕಗೆ ಒಂದು ತಿಳಿಯಾಕಿಲ್ಲ. ನಮ್ಮ ತಾಂಡದಾಗ ದೊಡ್ಡ ಅಪಚಾರ ಮಾಡಿದ್ದಾನೆ. ಅವನ ಮಗನಿಗೆ ಆ ವಿಸಳಾವತ್

ಪಂಗಡದ ಗೋಮ್ಲಿ ಜತಿಗೆ ಕೂಡಿಕೆ ಮಾಡಿದ್ದಾನೆ. ಅವಳೇನು ವಿಧವೇನ, ಗಂಡ ಸತ್ತವಳ, ಹರೆಯದ ಹುಡುಗಿ.

ಪಕ್ಕೀರ : ವಿಧವೆ ಮತ್ತ ಗಂಡ ಇಲ್ಲದವಳಂದ್ರೆ ಒಂದೇ ತಂದೆ, ಮುಂದಕ ಹೇಳು, ಏನಪರಿಹಾರ.

ಭಿಕ್ಲ : (ತೆಲಾಡ್ತಾ) ತಾಂಡದ ನಾಯಕ ಇರ್ಲಿ, ದೊಡ್ಡ ಪೊತಪ್ಪನಾಯ್ಕನೆ ಇರವಲ್ಲನ್ಯಾಕ, ದೇವರತಾವ ಎಲ್ಲಾ ಸಮ. ಆದರ ಹಟ್ಟಿ ನಾಯ್ಕ ಮಾಡಿದ್ದು ದೇವರಿಗೆ ಗೊತ್ತಾಗಿದೆ ಅಂದ್ರೆ? ದೊಡ್ಡ ಅಪರಾಧನೆ ನಡದೈತೆ. ಅದಕ್ಕೆ ತಕ್ಕ ಶಾಸ್ತ್ರ ಆಗಾಕಬೇಕು.

ಚೋಕ್ಲ : (ತನ್ನ ಡೇರೆಯಿಂದ ಹೊರಗ ಬಂದವನೆ) ಎಯ್, ಏನಾತ್ರಲೆ, ಯಾರ ಸತ್ರು.

ಪಕ್ಕೀರ : ಯಾರ ಸಾಯಬೇಕಲೇ ಚೋಕ್ಲ. ಭೀಮನ ಎಂಜಲು ತಿನ್ನೊ ನಾಯಿ ಇಡಿ ನಮ್ಮ ಜನಾಂಗನೆ ಸಾಯ್ತಿದೆ. ಆ ಹಟ್ಟಿನಾಯ್ಕ ತನಗ ಬೇಕಾಂದಂಗೆ ನ್ಯಾಯ ಕೊಟ್ಕೊಂತಾನ. ಮನ್ಸಿಗ ಬಂದಂಗ ಮಾಡ್ತಾನ. ನೀವು ಬಾಯಿ ಮುಚ್ಕೊಂಡು ಕುಂತ್ರ ಆದೀತನು ?

ಭಿಕ್ಲ : ಪಕ್ಕೀರಂದ ಬರಾಬರಿ ಐತೆ. ಅಂವ ಅಂದಂಗೆ ಆಗಾಕು (ಜೋಲಿ ಹೋಗಿ ನೆಲಕ ಬಿದ್ದ) ಆಗಬೇಕು......

ಚೋಕ್ಲ : ಏನಾಗಬೇಕಲೇ ಕುಡಕ ಭಿಕ್ಲ. ಕುಡದು ಹೆಂಡತಿಗ ತಾಯಿ ಅಂತಿ ಏನಲೇ, ಬೊಗಳು. ಹಟ್ಟಿನಾಯ್ಕ ಮತ್ತು ಅವನ ಮಗ ನಮ್ಮ ಪಾಲಿನ ದೇವರು. ತಮ್ಮ ಜೀವನವನ್ನು ತ್ಯಾಗ ಮಾಡಿ ನಮ್ಮ ಸಲುವಾಗಿ ಏನೆಲ್ಲಾ ಮಾಡಿಲ್ಲ. ಅಂತಹವನ ವಿರುದ್ಧನೆ ಪಿತೂರಿ ಮಾಡ್ತಿರೆನ್ರಲೇ. ನೀವು ಉದ್ಧಾರ ಆಗೋದಿಲ್ಲ.

ಪೂಜಾರಿ : ಹೂಂ....ಲೇ ನಿ ಸರ್ವನಾಶ ಆಗ್ತಿಯಲೇ ನಾನು ನೋಡ್ತಿನಿ ನಿನ್ನ

ಚೋಕ್ಲ : ಯಾರ ಮನಿ ಮುರಿಯೊ ಕೆಲ್ಸ ಮಾಡ್ತಾರ ಅವರು ಸರ್ವನಾಶ ಆಗ್ತಾರ ಲಗಲ್ದೊ (ಕೊಳಕ) ಪೂಜಾರಿ ಬಾಯಿಗೆ ಬಂದಂಗೆ ಮಾತಾಡಬೇಡ, ನಾಕಮಂದಿಗ ಸರಾಯಿ ಕುಡಿಸಿ ನೀ ಹೇಳೊ ಪರಾಣಕ್ಕೆ ಹೂಂ ಅನ್ನೊ ಹಂಗಮಾಡಿ ಏನಲೇ ಪುಜಾರಿ.

ಫಕೀರ : ತಂದೆ ಅಪ್ಪಣೆ ಮಾಡಬೇಕು.

ಪೂಜಾರಿ : ಈ ಮೂರ್ಕನಿಗೆ ಬುದ್ದಿ ಕಲಿಸು

ಪಕೀರ : ಲೇ. ಏನ ನೋಡಾಕ ಹತ್ತಿರ, ದುಗ್ಗಾಗಣ್ಣಿ ಕೊಟ್ಟು ಕುಡಿಸಿದವರು ನಾವು ಹೂಂ ಹಾಕ್ರಿ.

ಗುಂಪು : ಏಯ್, ದೇವರ ಜೊತೆಗೆ ವಾದ ಮಾಡ್ತಿ ಏನೋ, ನಿನ್ನ...

ಚೊಕ್ಲ : ಸದ್ದು ನೀವು ಖಾಲಿಪುಕ್ಕಟ್ಟೆ, ಕುಡದೀರಿ ಅಂತ ಗೊತ್ತು. ಯಾರದ ಕುಡದೀರಿ ಅಂತ ಗೊತ್ತು. ನಾಳೆ ವಿಷಯ ತಾಂಡದ ಪಂಚಾಯ್ತಿಗೆ ಏನಾರರ ಹೋದ್ರ. ನಿಮ್ಮಕತಿ ಮುಗದಂಗೆ.

ಪಕೀರ : ಲೇ ಪೂಜಾರಿ, ನಾನೇನು ಮಾಡಾಕ ಹೋದ್ರು, ಇದೊಂದು ಬೇರೆ ಆಗ್ತಿದೆಯಲ್ಲೊ, ಹಟ್ಟಿನಾಯಕನ ಕಡಿಯವರು ಬರಾಕ ಮುಂಚೆ ಜಾಗ ಖಾಲಿಮಾಡಾನ.

ಪೂಜಾರಿ : ನಾ ಬಡಕೊಂಡೆ ಮಂದಿಗ ನನ ಮೇಲಿನ ನಂಬಿಕೆ ಹೋಗಿದೆ ಅಂತ ನೀ ನನ್ನ ಮಾತ ಕೇಳಲಿಲ್ಲಪ್ಪ. ಓಡುಮತ, ಮಂದಿ ಹಿಡದು ನಾಕು ತದಕೊ ಮುಂಚೆ.

ಚೋಕ್ಲ : ಲೇ, ಇಲ್ಲೇನು ಮಾಡ್ತಿರ. ನಿಮ್ಮ ಕಳ್ಳದೇವರು ಮತ್ತ ಸುಳ್ಳ ಭಕ್ತ ಮಾಯಾ ಆದ್ರು, ನೋಡ್ರಲೆ. ಅವರ ಹಿಂದಾಗುಂಟ ಒಡಿದ್ರಿ ಬಚಾವಾದ್ರಿ. ಇಲ್ಲಾಂದ್ರೆ

* * *

ದೃಶ್ಯ ೪

ಸನ್ನಿವೇಶ ೩

ಭೀಮ : ಯುದ್ಧದ ಆತಂಕದಲ್ಲೂ ನೀ ಗೆದ್ದೆ ಗೋಮ್ಲಿ. ಸುಲ್ತಾನರು ನನ್ನ ಮಗನಂತೆ ನಂಬಿರುವಾಗ, ನಾನು ಅವರ ನಂಬಿಕೆಗೆ ದ್ರೋಹ ಮಾಡಿದರೆ, ದೇವರು ಮೆಚ್ಚೋದಿಲ್ಲ. ಆದರೆ.... ನಿನ್ನ ಜೀವವನೆ ನನಗೆ ಮುಡುಪಾಗಿ ಇಟ್ಟಿರುವ ನಿನ್ನನ್ನು ಈ ಸ್ಥಿತಿಯಲ್ಲಿ ಅರ್ಧಕ್ಕೆ ಕೈ ಬಿಡುವುದು.

ಗೋಮ್ಲಿ : ಇದೇ ಕ್ಷಣಕ್ಕಾಗಿ ನಾನು ಬದುಕಿದೆ. ನೀವು ನನ್ನವರಾಗಬೇಕು. ನಿಮ್ಮ ಜೊತೆಗೆ ಕಳೆವ ಸ್ವಲ್ಪ ಸಮಯವೆ ಸಾಕು.

ಭೀಮ : ನಾನು ಅದ್ಯಾವ ಜನ್ಮದಲ್ಲಿ ಪುಣ್ಯ ಮಾಡಿದ್ನೊ ಏನೋ ನಿನ್ನಂತ ಪ್ರೀತಿಸುವ ಹೆಂಡತಿ ಸಿಕ್ಕಿದ್ದಿಯಾ.

ಗೋಮ್ಲಿ : ನಾನು ಪುಣ್ಯ ಮಾಡಿದ್ದಿನಿ ಕಣ್ರಿ, ನಿಮ್ಮಂತ ಶೂರ ಗಂಡ ನನಗೆ ಸಿಕ್ಕನಲ್ಲಾ. ಇದು ನನ್ನ ಅದೃಷ್ಟದ ಫಲ.

ಭೀಮ : ಗೋಮ್ಲಿ, ನೀನು ಸುರಸುಂದರಿ, ಮಂದಿ ನಿನ್ನ ಸೌಂದರ್ಯಕ್ಕೆ ಮಾರು ಹೋಗಿರುವಾಗ ನೀ ಯಾಕೆ...

ಗೋಮ್ಲಿ : (ಅವನ ಬಾಯಿಮುಚ್ಚಿ) ಛಿ... ಎಂತ ಮಾತಂತ ಆಡ್ತಿದ್ದಿರಿ. ಈ ತಾಂಡ ಅಲ್ಲ, ಸುತ್ತ ಗುಳೆ ಬಂದಿರೊ ಯಾವುದೇ ತಾಂಡಗಳಲ್ಲಿ ನೋಡ್ರಿ ಬೇಕಾರ. ನಿಮ್ಮಂತ ಗಂಡಸು ಸಿಕ್ತಾನ. ಸಾಧ್ಯನೆ ಇಲ್ಲ.

ಭೀಮ : ಅಲ್ಲವೇ ನೀ ಯಾವಾಗ ಅಡ್ಡಾಡಿದ್ದೆ.... ಅಲ್ಲಾ...

ಗೋಮ್ಲಿ : ಮಾವ ನೀ ಬರಿ ಕಾಡಾಕ ಸುರು ಆದ್ಯಾ ....ಅಡ್ಡಾಡೋದಕ್ಕೆ ನಾ ಏನು ನಿಮಂಗ ಕುದುರೆ ಸವಾರಿ ಮಾಡ್ತಿನ. ಮಂದಿ ಹೇಳೊದನ್ನ ಕೇಳದ್ದೆ.

ಭೀಮ : ನಾನು ಮಂದಿ ಹೇಳೊದನ್ನ ಕೇಳಿನಿ. ಸುತ್ತ ಮುತ್ತ ಬಂದಿರೊ ಬಂಜಾರ ಗುಳೆಗಳಲ್ಲಿ ನಿನ್ನಂತ ಚೆಂದುಳ್ಳ ಚೆಲುವಿನ ಇಲ್ಲಾಂತ......

ಗೋಮ್ಲಿ : ನಿನ್ನ ...... (ಹೊಡೆಯಲು ಹೋಗುವಳು)

ಭೀಮ : ಏಯ್........

(ಸ್ವಗತ) ಕ್ಷಮಿಸು ಗೋಮ್ಲಿ ಅದೆಷ್ಟು ದಿನ ನಾ ನಿನ್ನ ಜೊತೆ ಇರ್ತಿನೊ ಈ ಖುಷಿಯನ್ನ ಎಷ್ಟು ದಿನ ಕೊಡ್ತಿನೊ ಆ ದೇವರಿಗೆ ಗೊತ್ತು. ಆದ್ರ ನೀನು.....

ಗೋಮ್ಲಿ : ಏಯ್, ಮಾವ, ಏನು ಯೋಚನೆ ಮಾಡ್ತಿದ್ದಿಯಾ ? ನಾಳೆ ನಮಗೆ ಹುಟ್ಟುವ ಮಗು ಗಂಡ, ಹೆಣ್ಣು ಅಂತಾನ. ಹುಟ್ಟುವ ಮಗು ಗಂಡೇ ಆಗಿರುತ್ತೆ ಅದು ಥೇಟ್ ನಿನ್ನ ತರಹಾನೆ ಇರುತ್ತೆ.

ಭೀಮ : ಹೌದು...

ಗೋಮ್ಲಿ : ಇಂಥ ಸಂದರ್ಭದಲ್ಲೂ ನೀನು ....

ಭೀಮ : ಇಲ್ಲಪ್ಪ ಅಂತಹದ್ದೇನು ಇಲ್ಲಾ

(ಸ್ವಗತ) ಆದರೆ ನಾ ಹೆಂಗ ಹೇಳಲಿ ನಿನ್ಗ. ಬಾಳಿನಲ್ಲಿ ನಿನ್ನ ಜೊತೆಗೆ ದೂರದವರೆಗೆ ಬರಬೇಕು ಅಂದ್ಕೊಂಡಿನಿ. ಬಿಳಿಯರ ಜೊತೆಗೆ ಗೆದ್ದೆ ಬರ್ತಿನಿ.... ಇಲ್ಲಾ...

ಛೆ ಛೆ ಇಂಥ ಸುರದ್ರೂಪಿ ಹೆಂಡತಿ ಇದ್ದರೆ ಜಗತ್ತೆ ಮರಸುತ್ತೆ ಮನಸ್ಸು.

ಗೋಮ್ಲಿ : ಇದೊಂದೆ ನೆನಪುಸಾಕು ಇನ್ನೂ ನೂರು ವರ್ಷಕ್ಕೆ ಸಾಕಾಗುತ್ತೆ. ಯಾವನೊ ಮನಸ್ಸಿಲ್ಲದವನ ಜೊತೆಗೆ ನೂರುವರ್ಷ ಬಾಳುವುದಕ್ಕಿಂತ. ಮನಸ್ಸು ಕೊಟ್ಟವನ ಹತ್ತಿರ ನೂರು ಗಂಟೆ ಬದುಕಿದರೆ ಸಾಕು. ಈ ಹೆಣ್ಣು ಅದನೆ ಬದಕು ಅಂತಿ ಭಾವಿಸಿ ಬದುಕಿ ಬಿಡುತ್ತಾಳೆ.

ಭೀಮ : ನಿಮ್ಮಪ್ಪ ಅಮ್ಮ ಧನ್ಯಕಣೆ. ನಿನಗೆ ಕೊಟ್ಟಿರುವ ಸಂಸ್ಕಾರಕ್ಕೆ ನಿನ್ನ ಸಾಕಿರುವುದಕ್ಕೆ ನಾನು ಅವರಿಗೆ ತಲೆ ಬಾಗುತ್ತೇನೆ.

ಗೋಮ್ಲಿ : ಎಯ್, ಜಾಸ್ತಿ ಆಯ್ತು, ನಮ್ಮತ್ತೆ ಮಾವ ಏನು ಕಮ್ಮಿ ಅಂದ್ಕೊಂಡಿಯ ಗುಂಡಕಲ್ಲಿನಂತ ದೇಹದೊಳಗೆ ಅದೆಂತಹ ಅಗಾಧ ಪ್ರೀತಿಯನ್ನ ಹಾಕಿ, ಕರುಣೆ, ಧೈರ್ಯ, ಮಮತೆ, ನ್ಯಾಯ ಪರತೆಗಳನ್ನು ತುರುಕಿ ಒಂದು ಸುಂದರವಾದ ನಿನ್ನಂತಹ ಮೂರ್ತಿಯನ್ನೆ ಕೆತ್ತಿದ್ದಾರೆ.

ಭೀಮ : ಆಯ್ತು ಮಹರಾಯ್ತಿ ನಿನ್ನ ಜೊತೆಗೆ ವಾದಾಮಾಡಿ ನಾನು ಗೆಲ್ಲಾಕೆ ಆದೀತು....

ನಾನು ಈಗ ನಿನ ಸೇವಕ......

ನೀ ಹೇಳಿದಲ್ಲಾ ಸರಿ........

ಗೋಮ್ಲಿ : ಹೌದು ಮಹಾಪ್ರಭು ನಾನು ನಿಮ್ಮ ಸೇವಕಿ.....

ಈ ಸುಂದರ ಕ್ಷಣಗಳು ನೀವು ಕೊಟ್ಟ ಬಿಕ್ಷೆ. ಇವೆ ನಾಳಿನ ನೆನಪುಗಳು.

ಭೀಮ : ಏಯ್, ಎಂಥ ಮಾತಾಡಿದೆ. ನೋಡು, ಯಾವತ್ತು ನಿನಗೆ ನನ್ನ ಎದೆಯೊಳಗೆ ಸ್ಥಾನವಿದೆ ವಿನಃ ದಾಸಿ, ಸೇವಕಿ ಖಂಡಿತಾ ಇಲ್ಲಾ ಕಣೆ. ಯಾವ ಗಂಡಸು ಹೆಣ್ಣಿಗೆ ಗೌರವ ಕೊಡುವುದಿಲ್ಲವೊ ಅವನು ಗಂಡಸೇ ಅಲ್ಲಾ.

ಗೋಮ್ಲಿ : ಇಲ್ಲಾ ಮಾವ, ಜಗತ್ತಿನ ಬಗ್ಗೆ ಬಾಪುಗೆ ಏನು ಅರಿವಿಲ್ಲ. ಏಕೆಂದರೆ ಹುಟ್ಟಿನಿಂದ, ನಿಮ್ಮ ಬಾಪುನ ಗುಳೆಯಲ್ಲಿ ಹಾಗೆ ಬರ್ತಾ ಅದೀನಿ, ಬಾಲ್ಯ ಕಳೆದೆ, ಯೌವ್ವನ ಬಂತು, ತಿಳುವಳಿಕೆ ಬಂದಾಗ ಕಂಡ ಮೊದಲ ಮತ್ತು ಕೊನೆಯ ಪುರುಷ ನೀನೆ. ಹಾಗಾಗಿ ನೀನೆ ನನ್ನ ಜಗತ್ತು...

ಭೀಮ : (ಗಂಭೀರತೆ ತಿಳಿಗೊಳಿಸಲು) ಸರಿ.....ಸರಿ, ಬರಿ ಮಾತೆ ಆಡ್ತಿಯಾ ಇಲ್ಲಾ..........

ಗೋಮ್ಲಿ : ನಿನ್ನ ಎದುರು ಎಲ್ಲಾ ಇದೆ ನಾ ಏನು ಕೊಡಲಿ......

* * *

ದೃಶ್ಯ ೪

ಸನ್ನಿವೇಶ ೪

ಬಾವ : ಭೀಮ ಎಲ್ಲರ ಒತ್ತಾಯಕ್ಕೆ ಗೋಮ್ಲಿಯನ್ನು ಕೂಡ್ಕೆ ಮಾಡಿಕೊಂಡು ಆರು ತಿಂಗಳು ಜಗತ್ತು ಮರೆತಿದ್ದ. ಅಲ್ಲಿ ಶ್ರೀರಂಗಪಟ್ಟಣದಲ್ಲಿ ಬಿಳಿಯರ ಸೈನ್ಯ ಕೋಟೆಯನ್ನು ಸುತ್ತುವರೆದಿತ್ತು. ಒಂದುಕಡೆ ಮೀರ್‌ಸಾಧಕ್ ಮತ್ತೊಂದು ಕಡೆಗೆ ಪೂರ್ಣಯ್ಯ ಭಗಾವತಿ ನಡೆಸಿದ್ದರು. ಟಿಪ್ಪು ಒಂಟಿಯಾಗಿದ್ದ. ಆಗ ನೆನಪಾದ ಭೀಮ. ಭೀಮ ಅಸಮಾನ್ಯ, ನೋಡಾಕ ಬರಿ ವ್ಯಾಪಾರಿಯಾಗಿದ್ದರು ಬುದ್ದಿಯಲ್ಲಿ ತೀಕ್ಷಣನಾಗಿದ್ದ.

ಚೇಲ : ಬಾವ ಮುಂದೇನಾತು ಹೇಳು...

ಬಾವ : ಏನಾತಂದ್ರ...

ಅಪ್ಜಲ್‌ಖಾನ್ : (ಕುದುರೆಯನ್ನು ಬಿಟ್ಟವನೆ ತಾಂಡ ಪ್ರವೇಶಿಸಿದ ಆರುತಿಂಗಳ ಹಿಂದೆ ಕೂಡಿಕೆ ಮಾಡಿಕೊಂಡಿದ್ದ ಹೆಂಡತಿ ಗೋಮ್ಲಿ ಜೊತೆಗೆ ಸುಖವಾಗಿದ್ದ ಭೀಮನ ಹತ್ತಿರ ಬಂದು ಸನ್ನಿವೇಶ ತಿಳಿಸಿದ.) ಭೀಮ ಶ್ರೀರಂಗಪಟ್ಟಣದ ಸ್ಥಿತಿ ಹದಗೆಟ್ಟಿದೆ. ಮಹಾಪ್ರಭು ನಿದ್ದೆಯಲ್ಲೂ ಹೌಹಾರಿ ಬಿಳಿಯರ ಪಿತೂರಿಗೆ ಕಂಗೆಟ್ಟಿದ್ದಾರೆ.

ಭೀಮನಾಯ್ಕ : ಹೂಜೂರ್ ಮಹಾಪ್ರಭು ನನ್ನ ನೆನಪು ಮಾಡಿಕೊಂಡರೆ. ಏನಾದರೂ ಸಂದೇಶವಿದೆಯೆ. ಹೇಳಿ, ನಾನು ಈಗಿಂದಿಗಲೆ ಹೊರಡುತ್ತೇನೆ.

ಅಪ್ಜಲ್‌ಖಾನ್ : ಹೌದು ಭೀಮ. ಅದಕ್ಕೆ ರಾತ್ರೋರಾತ್ರಿ ಬ್ರಿಟಿಷ್‌ರ ಕಣ್‌ಗಾವಲು ತಪ್ಪಿಸಿಕೊಂಡು ರಹಸ್ಯ ಜಾಗದಿಂದ ಬಂದಿದ್ದೇನೆ. ಬ್ರಿಟಿಷರ ಸೈನ್ಯ

ಸರ್ಪಗಾವಲು ಹಾಕಿದೆ. ಪ್ರಭುಗಳಿಗೆ ನಾನು ನೀನು ಬಿಟ್ಟರೆ ಯಾರು ಇಲ್ಲದಾಗಿದೆ. ಅವರಿಗ ವಿವಶರಾಗಿದ್ದಾರೆ. ಒಳಗಿನ ಸಂಚು, ಹೊರಗಿನ ಹೊಂಚು ಅಧೀರರನ್ನಾಗಿ ಮಾಡಿದೆ.

ಭೀಮ : ಹೂಜೂರ್ ವಿಳಂಬ ಸರಿಯಲ್ಲ ಹೊರಡೋಣ.

ಅಫ್ಜಲ್‌ಖಾನ್ : ಕ್ಷಮಿಸು ಭೀಮ, ತಾಂಡಕ್ಕೆ ಕಾಲಿಟ್ಟಾಗಲೇ ತಿಳಿಯಿತು ನಿನ್ನ ನಿಖಾದ ಬಗ್ಗೆ. ಆದರೆ ಪರಿಸ್ಥಿತಿ ಪ್ರತಿಕೂಲವಾಗಿರುವಾಗ ನಾವೆಲ್ಲಾ ಅಲ್ಹಾನನ್ನ ನೆನಪಿಸುವುದು ಬಿಟ್ಟರೆ ಮತ್ತೇನು ಮಾಡಲಾದಿತು.

ಭೀಮ : ಖಾನ್‌ಸಾಹೇಬ್, ನಮ್ಮ ಶತ್ರು ನಮ್ಮ ತಾಯಿನಾಡಿನ ಮೇಲೆ ತನ್ನ ಆಕ್ರಮಣ ಮಾಡಿರುವಾಗ ಸುಖಪಡಲು ಆದೀತೆ? ಅವನ ರುಂಡ ಚೆಂಡಾಡಿ ತಾಯಿ ಮುಡಿಗೆ ರಕ್ತದೋಕುಳಿ ಮಾಡಿ ಆಮೇಲೆ ಸ್ವಾತಂತ್ರ್ಯದ ಸವಿಯನ್ನ ಸವಿಯುವುದು ಇದ್ದೇ ಇದೆ ನಡೆಯಿರಿ. ಈಗ ಹೊರಡುವ, ಪ್ರಭುಗಳು ಕಾಯುತ್ತಿರಬೇಕು.

ಗೋಮ್ಲಿ : ಭೀಮ, ಒಂದು ಘಳಿಗೆ ಆರತಿ ಮಾಡುತ್ತೇನೆ. ಖಾನ್‌ಬಾಬ ನೀವೂ ನಿಲ್ಲಿ. ನಿನೇನು ಚಿಂತೆ ಮಾಡಬೇಡ ನಿನ್ನ ವಂಶ ಉದ್ಧಾರಕ ಬೆಳೆಯುತ್ತಿದ್ದಾನೆ. ನನಗೆ ಅಷ್ಟೆಬೇಕಿತ್ತು.

ಭೀಮ : ನಿಮ್ಮೆಲ್ಲರ ಆಶೀರ್ವಾದ ನಮಗೆ ಶಕ್ತಿಯನ್ನು ಕೊಡುತ್ತದೆ. ಸೇವಾಬಾಯಿನ ಮಟ್ಟೊದಲ್ಲಿ ನಮ್ಮ ವಿಜಯಕ್ಕಾಗಿ ವಾಜಾಮಾಡ್ರಿ, ಅಲ್ಲಾ, ಎಂತಹ ಸುದ್ದಿ ಹೇಳಿದೆ, ಜೀವನ ಸಾರ್ಥಕವಾಯ್ತು ಬಿಡು. ಅಪ್ಪ ಅಮ್ಮಗೆ ನಿಶ್ಚಿಂತೆ ಆಯಿತು. ಗೋಮ್ಲಿ ನೀನು ನನ್ನ ಪಾಲಿನ ದೇವತೆ ಕಣೆ ನಿನಗೆ ನಾ ಏನು ಹೇಳಲಿ?

ನಾನೂಸಾದ್ : ಭೀಮ, ಸುಲ್ತಾನ್ ಸಾಹೇಬರಿಗೆ ಸೇವಾಲಾಲ್ ಶಕ್ತಿ ಕೊಡಲಿ ನಿಮಗೆ ವಿಜಯ ಸಿಗಲಿ. ಹೋಗಿ ಬಾ ಮಗ.

ರಾಮಬಾಯಿ : ಗೆದ್ದು ತಾಂಡಕ್ಕೆ ಕೀರ್ತಿ ತಾ ಮಗ. ಗೋಮ್ಲಿ ನಿನ್ನದಾರಿ ಕಾಯುತ್ತಾಳೆ. ಈ ಇಳಿವಯಸ್ಸಿನ ನಾವುಗಳು ಕಣ್ಣಲ್ಲಿ ಎಣ್ಣೆ ಬಿಟ್ಕೊಂಡು ನಿನ್ನ ದಾರಿ ನೋಡ್ತಾ ಇರುತ್ತೆವೆ.

ಭೀಮ : ಯಾರ ಕಣ್ಣಲ್ಲಿ ಒಂದು ಹನಿ ನೀರು ಬರಬಾರದು. ನಮ್ಮ ತಾಯಿಯ ರಕ್ಷಣೆ ನಮ್ಮ ಜುಮ್ಮೇದಾರಿ. ಅವಳ ಸಲುವಾಗಿ ಸತ್ತರೆ ವೀರಸ್ವರ್ಗ ಪ್ರಾಪ್ತಿಯಾಗುತ್ತೆ. ಸಂತೋಷದಿಂದ ಕಳುಹಿಸಿಕೊಡಿ.

ಗೋಮ್ಲಿ : ಯಾರು ಅಳುವುದಿಲ್ಲ. ಕೆಂಪುಮಂದಿಯನ್ನ ಹೊರಗಟ್ಟಿ ತಾಂಡಕ್ಕೆ ಬಂದೆ ಬರ್ತಿರಾ ಅಂತ ನಂಬಿಕೆ ನನಗಿದೆ.

ಭೀಮ : ಹನ್ಮಂತ, ಜಾತು, ಮಂಗಲ್ಯ, ಸೋಮ್ಲು, ಶಂಕ್ರು ಮೇಲಿನ ಓಣಿ ಯಂಕ್ಯಾ, ಡಾಕು. ಹಿಂದಿನಮನಿ ಥಾಕ್ಯ. ಸಿಂಧಿವಾಳೇರ ಹಮ್ಲು. ಗೋಪ್ಯಾ, ಪಿತಾಂಬರಿ, ಥಾವು, ಥಾವೇರ ಲಚ್ಚ. ಕಾರಭಾರಿರ ಕಮಲ ನನ್ನ ಜೊತೆಗೆ ಹೊರಡಬೇಕು. ಯಾರಿಗಾದರೂ ಬರಲು ಆಗದಿದ್ದರೆ ನೀವು ಇಲ್ಲೇ ಇರಬಹುದು. ಇದೊಂದು ಅವಕಾಶ ನಮ್ಮ ತಾಯಿನಾಡಿಗೆ ಸೇವೆಸಲ್ಲಿಸುವುದಕ್ಕೆ ಸತ್ತರೆ ಇತಿಹಾಸ ನೆನಪು ಮಾಡುತ್ತೆ. ಸಾವು ಯಾರಿಗೂ ತಪ್ಪಿದಲ್ಲಾ, ಇಂತಹ ಸಾವು ಯಾರಿಗೂ ಸಿಗುವುದಿಲ್ಲ.

ಗೋಪ್ಯ : ಭೀಮ, ನೀನು ಕಾಲಿಲೆ ತೋರಿಸಿದ್ದನ್ನ ಮಾಡಾಕ ಸಿದ್ಧ. ನಮ್ಮಲ್ಲಿ ಅಂತಹ ರಣಹೇಡಿಗಳ್ಯಾರು ಇಲ್ಲ. ಈಗಲೇ ಹೊರಡಲು ಸಿದ್ಧ. ಏನಂತಿರಪ್ಪ, ಭೀಮನ ಮೇಲೆ ನನಗೆ ನಂಬಿಕೆ ಇದೆ. ಅವನು ನಮ್ಮನ್ನ ಕಾಪಾಡುತ್ತಾನೆ.

ಭೀಮ : ಗೋಪ್ಯ, ತಾಂಡದ ಮರ್ಯಾದೆ ಒಂದೇ ಅಲ್ಲ, ಇಡೀ ಭಾರತ ಖಂಡದ ಮರ್ಯಾದೆಗೆ ಬಿಳಿಯರು ಕೈ ಹಾಕಿದ್ದಾರೆ. ಅವರ ಕೈ ಕತ್ತರಿಸಿ ಭಾರತ ಮಾತೆಗೆ ಅರ್ಪಿಸಬೇಕು. ಇದನ್ನು ಕಂಡು ಮತ್ಯಾರು ನಮ್ಮ ತಾಯಿಯನ್ನ ಕಣ್ಣೆತ್ತಿ ಕೂಡ ನೋಡಬಾರದು.

ಅಫ್ಜಲ್‌ಖಾನ್ : ಭೀಮ ಒಂದನೇ ಪಹರೆಯ ಹೊತ್ತಿಗೆ ಗೌಪ್ಯ ಜಾಗದಿಂದ ನಾವು ಕೋಟೆಯ ಒಳಗೆ ಸೇರಬೇಕು. ಎಲ್ಲವೂ ನಿಗದಿತವಾಗಿದೆ. ಸಮಯ, ಜಾಗ, ನಿಗದಿತ ಮಾತಿನಂತಾಗಬೇಕು. ಹೂಂ ಹೊರಡಿ. ಈಗ ಗುಂಪಾಗೆ ಹೋಗಿ ಮುಂದೆ ಚದುರ ಬೇಕು. ನೀವು ನನ್ನ ಅನುಸರಿಸಿ ಖುದಾ ಹಫೀಜ್.

* * *

ದೃಶ್ಯ ೪

ಸನ್ನಿವೇಶ ೫

ರಾಮಬಾಯಿ : ಈ ಯುದ್ಧಗಳು ಯಾಕಾದರೂ ಬರ್ತಾವೊ. ಮನಸ್ಸನ್ನ ಕೊಂದುಕೊಂಡು ಮಕ್ಕಳನ್ನ ರಣರಂಗಕ್ಕೆ ಕಳುಹಿಸಬೇಕು. ಪ್ರತಿಕ್ಷಣ ಆತಂಕ, ಕೆಟ್ಟಕನಸು, ಕನವರಿಕೆ ಎಲ್ಲಿಯವರೆಗೆ? ಹೂಂ, ಸೇವಾಭಾಯ ಕಾಪಾಡು ತಂದೆ.

ನಾನೂಸಾದ್ : ತಾಯಿ ಕರಳು ಹೀಗೆ ಯೋಚನೆ ಮಾಡಿಸುತ್ತೆ. ಒಂಬತ್ತು ತಿಂಗಳು ಹೊತ್ತು, ಹೆತ್ತು, ಸಾಕಿ-ಸಲಹಿ ಸಾವಿನ ದವಡೆಗೆ ನೂಕುವುದು ಯಾವ ಇತಿಹಾಸದ ಪುರುಷಾರ್ಥಕ್ಕೆ. ಆದಾಗ್ಯೂ ನಮ್ಮ ತಾಯಿನೆಲದ ಪ್ರಶ್ನೆ ಬಂದಾಗ ತ್ಯಾಗ ಮಾಡಬೇಕು. ನಾವು ಬಲಿಯಾಗಬೇಕು, ಮಕ್ಕಳನ್ನೂ ಬಲಿಕೊಡಬೇಕು.

ರಾಮಿಬಾಯಿ : ಯುದ್ಧಗಳು ಬೇಕಾ? ಯಾರಿಗೆ ಬೇಕು? ಯಾಕೆ ಬೇಕು? ಇಲ್ಲ ಭೂಮಿಯನ್ನು ಬಿಟ್ಟು ಈ ಭೂಮಿಗಾಗಿ, ಇಲ್ಲಿನ ಸಂಪತ್ತು ಕೊಳ್ಳೆ ಹೊಡೆಯಾಕ, ತನ್ನ ಶ್ರೇಷ್ಠತೆಯನ್ನು ಮೆರಿಯೋದಕ್ಕೆ ಯುದ್ಧದಂತ ಮೋಸದ ಒಳಸಂಚನ್ನ ರೂಪಿಸಿಕೊಂಡಿದ್ದಾರೆ ಒಬ್ಬನೂ ಮನುಷ್ಯ ಸರ್ವಶ್ರೇಷ್ಠನೆನಿಸಿಕೊಳ್ಳಬೇಕಾದರೆ ಮತ್ತೊಬ್ಬ ಬಲಿಯಾಗಬೇಕು. ಯಾರು ಯಾರಿಗೆ ಬಲಿಯಾಗುತ್ತಾರೊ. ಖಾಲಿ ಉಳಿಯುವುದು ನಮ್ಮ ಮಡಿಲು. ನಿನ್ನೆ ಮನ್ನೆ ಗಂಡನ ಜೊತೆಗೆ ಸುಖವಾಗಿದ್ದ,

ಚಿಕ್ಕ ವಯಸ್ಸಿನ ಗೋಮ್ಲಿ ಗತಿ ಏನು? ಅವಳ ಹೊಟ್ಟೆಯಲ್ಲಿ ರೂಪಗೊಳ್ಳದೆ ಬೆಳೆಯುತ್ತಿರುವ ಪಿಂಡ ನಾಳೆ ರೂಪಗೊಂಡು

ಭೂಮಿಗೆ ಬಂದು ನನ್ನ ಅಪ್ಪ ಎಲ್ಲಿ ಅಂತ ಕೇಳಿದರೆ, ಅಯ್ಯ ಸೇವಾಭಾಯ, ಮರಿಯಾಡಿ ನಾನು ಏನು ಉತ್ತರ ಕೊಡಲಿ?

ನಾನೂಸಾದ್ : ನಿನ್ನ ಪ್ರಶ್ನೆಗಳಿಗೆ ಬಹುಶಃ ನನ್ನ ಹತ್ತಿರ ಉತ್ತರವಿಲ್ಲ. ಆದರೆ ಇಷ್ಟು ಮಾತ್ರ ಹೇಳಬಲ್ಲೆ. ಪರಂಪರೆಯ ನಡುವೆ ಬದಲಾಗುತ್ತಿರುವ ಸನ್ನಿವೇಶಗಳು ಯುದ್ಧವನ್ನು ಬಯಸುತ್ತವೆ. ಅದಕ್ಕೆ ಗೋಮ್ಲಿ ಗಂಡನನ್ನ ತ್ಯಾಗ ಮಾಡಲೇ ಬೇಕು. ಪರಂಪರೆಯ ಅಗ್ನಿಜ್ವಾಲೆಯೊಳಗೆ ಅವಳ ಸತಿಯಾಗಬೇಕು. ಕೊನೆಗಾಲದಲ್ಲಿ ನಮ್ಮಂತಹವರು ಮಗನಿಲ್ಲದೆ ಬದುಕಿರುವವರೆಗೂ ಅಲ್ಲಿ ಇಲ್ಲಿ ಠೋಕರ್ (ಕಲ್ಲು ತಾಗಿ ಮುಗ್ಗರಿಸುವುದು,) ತಿನ್ನುತ್ತ ಮಗನ ನೆನಪಿನಲ್ಲೆ ಸಾಯುವುದು.

ರಾಮಿಬಾಯಿ : ಮರಿಯಾಯಾಡಿ. ಅಂಥ ಕೆಟ್ಟ ಘಳಿಗೆ ನಿರ್ಮಾಣ ಮಾಡಬೇಡ ತಾಯೇ. ತಾಂಡೆ ದುರ್ಗವ, ಸೇವಾಭಾಯ, ದುರ್ಗಾಶಕ್ತಿ ನನ್ನ ಮಗನ ಕಾಪಾಡವ್ವ.

ನಾನೂಸಾದ್ : ಆಗೋದನ್ನ ತಡೆಯೋದಕ್ಕೆ ನಮ್ಮಿಂದ ಆದೀತ ರಾಮಿ ನಾವು ಹುಲ್ಲು ಮಾನವರು. ಅಗೋ ನಿನ್ನ ಸೊಸೆ ಬರ್ತಿದ್ದಾಳೆ ಸಾಕುಮಾಡು. ತುಂಬು ಗರ್ಬಿಣಿ ಬೇಸರ ಮಾಡಿಕೊಳ್ತಾಳೆ. ಬಾಳಿ ಬದಕಬೇಕಾದವಳು ಪಾಪ.

ರಾಮಿಬಾಯಿ : ಎಳೆಮಗು, ಒಂದು ತಿಳಿದ್ರ ಒಂದು ತಿಳಿಯಾಕಿಲ್ಲ. ಊಂ, ನಾಳೆ ಏನಾಗತ್ತೊ. ನೆನಪಾದರೆ ಉಸರು ನಿಂತಂಗಾಗುತ್ತೆ. ಆಕಿ ಮೊಮ್ಮಗನ ಹಡದ್ರ, ಆ ಮಗ ನನಪ್ಪ ಎಲ್ಲಿ ಅಂದ್ರ ನಮ್ಮ ತಾವ ಉತ್ತರ ಇಲ್ಲ.

ಗೋಮ್ಲಿ : ಏನತ್ತೆ, ಏನೋ ಯೋಚನೆ ಮಾಡ್ತಿರೊ ಹಾಗಿದೆ. ಹಜಾಮ ಬೋಳಿಸಿದ ಕೂದ್ಲು ಮುಂದೆ ಬೀಳುತ್ತೆ ಬಿಡಿ. ಯಾಕೆ ಯೋಚನೆ ಮಾಡೀರ. ನನ್ನ ಗಂಡ ಶೂರ ನನ್ನ ಆವಸ್ಥೆ ನೋಡಿಯೆ ಹೋಗಿದ್ದಾನೆ. ಅವನಿಗೆ ಅವನ ಮಗನ ನೋಡಬೇಕಂತ ಆಸೆ, ಬಂದೆ ಬರ್ತಾನ.

ರಾಮಿಬಾಯಿ : ಹೆತ್ತ ತಾಯಿ ಸಂಕಟ... (ಬಾಯಿ ಮುಚ್ಕೊಂಡು) ಏನೂ ಇಲ್ಲ ಬಿಡವ್ವ. ಹ್ವಾರೆ ನೋಡಹೋಗು.

ಗೋಮ್ಲಿ : ಆಯ್ತು ಬನ್ನಿ, ಊಟ ತಯಾರಿದೆ.

ರಾಮಿ : ಯಾಕಿಂಗೆ ನೋವಲೂ ಸುಖಾಪಡ್ತಿಯೆ ನನವ್ವ

ಗೋಮ್ಲಿ : ಇದನ್ನು ಬಿಟ್ಟು ಇನ್ನೇನು ಮಾಡಬಹುದು ಹೇಳಿ. ಯುದ್ಧ ತಿಂಗಳು, ವರ್ಷಗಳವರೆಗೆ ಆಗಬಹುದು. ಹೋದವರು ಸತ್ತಾರೊ, ಬದುಕಿದ್ದಾರೊ ಸುಳಿವು ಕೂಡ ಸಿಗೋದಿಲ್ಲಾ. ಆದರೂ ಬದುಕಬೇಕಲ್ಲಾ ಅತ್ತೆ ಒಂದು ನಂಬಿಕೆಯ ಮೇಲೆ.

ರಾಮಿ : ಈ ಸಣ್ಣ ವಯಸ್ಸಿಗೆ ಎಂಥ ದೊಡ್ಡ ಆಲೋಚನೆ ಮಾಡ್ತಿಯಾ ಮಗಳೆ. ನಿನ್ನ ತ್ಯಾಗ ಹಿಂಗೆ ವ್ಯರ್ಥ ಹೋಗಲ್ಲ ಒಂದು ಇತಿಹಾಸವಾಗುತ್ತೆ. ಇತಿಹಾಸ. ನೀನು ಅಸಾಮಾನ್ಯ ಮಗಳೆ, ಅದೆಂತ ದೊಡ್ಡ ಗುಣನೇ ತಾಯಿ ನಿಂದು. ಸಿಟ್ಟು, ಸೆಡವು ಯಾವುದು ಇಲ್ಲ ಆಸರಕೆ ಬೇಸರಕೆ ಅನ್ನೊದಿಲ್ಲದೆ ವಿಶಾಲ ಸಮುದ್ರದಂತೆ ಶಾಂತವಾಗಿಯೆ. ದೇವರು ನಿನ್ನ ಚೆನ್ನಾಗಿಟ್ಟರಲಿ. (ನಿರ್ಗಮನ)

* * *

ದೃಶ್ಯ ೪

ಸನ್ನಿವೇಶ ೬

(ಒಂದನೆ ಪಹರೆಗೆ ಸರಿಯಾಗಿ ರಹಸ್ಯಮಾರ್ಗ ಪ್ರವೇಶಿಸಿದ ಭೀಮ ಮತ್ತು ಸಂಗಡಿಗರು ಕೋಟೆಯ ಒಳಗೆ ಸುರಕ್ಷಿತವಾಗಿಯೇ ನಡೆದರು.)

ಭೀಮ : ಖಾನ್‌ಸಾಬ್, ಎಂಥಾ ಭಯಾನಕ ರಾಸ್ತಾ ಇದು. ಒಳಗೆ ಬಂದವನಿಗೆ ಪಾರಾಗೋದಕ್ಕೆ ಗುಂಡಿಗೆ ಬೇಕು. ಮಹಾಪ್ರಬುಗಳು ಮಹಾಮತ್ಸದಿ, ಇಂಥ ಒಂದು ರಹಸ್ಯ ದಾರಿಯನ್ನ, ಇಷ್ಟೊಂದು ಗೌಪ್ಯವಾಗಿಟ್ಟಿದ್ದಾರೆ, ನನಗಂತು ಒಂದು ಹೊಸಲೋಕದೊಳಗೆ ಹೋದಂಗಾಗಿತ್ತು.

ಅಫ್ಜಲ್‌ಖಾನ್ : ರಾಜ್ಯ ಆಳುವ ರಾಜನಿಗೆ ದೂರದೃಷ್ಟಿ ಇರಬೇಕು ಭೀಮ. ಅದು ಸುಲ್ತಾನರಿಗಿದೆ. ಆದರೆ ಕಾಲ ಅವರಿಗೆ ಸಾತ್ ಕೊಡ್ತಾಯಿಲ್ಲ. ಹೊರಗಡೆ ಶತ್ರಗಳಿಂದ ಎಚ್ಚರವಾಗಿರಬಹುದು ಆದರೆ ಒಳಗಿನ ಶತ್ರುಗಳು ನಮ್ಮನ ಅಧೀರನನ್ನಾಗಿ ಮಾಡಿಬಿಡುತ್ತಾರೆ.

ಭೀಮ : ಎಲ್ಲಾ ಸರಿಹೋಗುತ್ತೆ ಚಾಚ. ನೀವೇನು ಚಿಂತೆಮಾಡಬೇಡಿ, ಬಾದ್‌ಷ ಎದುರು ನಿಲ್ಲುವ ಶತೃಗಳಿಗೆ ಗುಂಡಿಗೆ ಬೇಕು. ಅವರು ಸಿಂಹವಿದ್ದಂತೆ ಒಮ್ಮೆ ಘರ್ಜಿಸಿದರೆ ಸಾಕು ಇಡುಕಾಡು ನಡಗುತ್ತೆ:

ಅಫ್ಜಲ್‌ಖಾನ್ : ಸದ್ದು. ಮಹಾಪ್ರಭು ಇರುವ ಜಾಗ ತಲುಪುತ್ತೇವೆ, ಯಾರು ತುಟಿ ಪಿಟಕ್ ಅನ್ನಬೇಡಿ. ಮಹಾ ಪ್ರಭುಗಳು ವಿಶ್ರಾಂತಿ ಪಡೆಯುತ್ತಿರಬೇಕು ಇಲ್ಲಾ ನಮಾಜ್ ಮಾಡುತ್ತಿರಬಹುದು.

ಭೀಮ : ಯಾರು ಶಬ್ದ ಮಾಡಬೇಡಿ. ಒಬ್ಬೊಬ್ಬರೆ ದಾಟಿ ರಾಜನ ಅರಮನೆ ಪ್ರವೇಶಿಸಲು. ನಾನು ಮಾತಿಡುಸವವರೆಗೂ ಕೋಯಿವಾತೆ ಕರೆವಾಸ ಥೇನಿ.

ಸೈನಿಕ : ಏಯ್, ಯಾರು ನೀವು? ರಹಸ್ಯ ಸಂದೇಶ ಹೇಳಿ, ಇಲ್ಲಾ ನಿಮ್ಮ ಕೊನೆ.

ಅಫ್ಜಲ್‌ಖಾನ್ : ಅಲ್ಲಾವೂ ಇಲಿಲ್ಲಾ...

ಸೈನಿಕ : ಅಫ್ಜಲ್‌ಖಾನ್... ಮಹಾಪ್ರಭು ತಮ್ಮ ದಾರಿ ಕಾಯ್ತಿದ್ದಾರೆ. ಬಹಳ ಬೇಚೆನ್ ಆಗಿದ್ದರೆ.

ಅಫ್ಜಲ್‌ಖಾನ್ : ನೀವೆಲ್ಲಾ ಇಲ್ಲೇ ಇರಿ, ಸೈನಿಕ ಇವರನ್ನ ಯಾರು ಗಮನಿಸಕೂಡದು. ಭೀಮ ನಿನೊಬ್ಬನೆ ಬಾ ನನ್ನ ಜೊತೆ ಪ್ರಭುಗಳು ಮಾತಾಡಬೇಕು ಎಂದಿದ್ದಾರೆ.

ಸೈನಿಕ : ಹೂಜೂರ್...

* * *

ದೃಶ್ಯ ೪

ಸನ್ನಿವೇಶ ೭

ಟಿಪ್ಪು : ಬಂದಿದ್ದು ಕಿಸಿಕೊ ಗೊತ್ತಿಲಾ ಅಲ್ವಾ, ಅಫ್ಜಲ್‌ಚಾಚ. ಸೈನಿಕರಿಗೆ ತಿಳಿಸಿ ನಮ್ಮನ್ನ ಬಿಟ್ಟು ಯಾರು ಬರುವಂತಿಲ್ಲಾಂತ. ಸೇನಾಧಿಪತಿ, ಮಂತ್ರಿ, ಮಹಾರಾಣಿ, ಯಾರುಕೂಡ ಬರಬಾರದು.

ಅಫ್ಜಲ್‌ಖಾನ್ : ಹೂಜೂರ್

ಟಿಪ್ಪು : ಗೂಡಾಚಾರರ ಸುದ್ದಿ ಪ್ರಕಾರ ಕರ್ನಲ್ ಹ್ಯಾರಿಸ್ ಎನ್ನುವ ಅತಿ ಕ್ರೂರಿ ಸೈನ್ಯಾಧಿಕಾರಿ ಯುದ್ಧದ ಮುಂದಾಳತ್ವ ವಹಿಸಿದ್ದಾನೆ. ಶ್ರೀರಂಗಪಟ್ಟಣವನ್ನು ಮುಗಿಸುವ ಅವನ ಇರಾದೆಯನ್ನ ನುಚ್ಚುನೂರ ಮಾಡಬೇಕು. ಆದರೆ ಭೀಮ ಅವನ್ದುಕೆ ಯುದ್ದ ತಂತ್ರ ಏನೂಂತ ತಿಳಿತಾ ಇಲ್ಲ. ನಮ್ಮ ಪ್ರತಿ ತಂತ್ರ ಏನು ಮಾಡಬೇಕು ಗೊತ್ತಾಗ್ತ ಇಲ್ಲ. ಇದು ನಮಗೆ ದೊಡ್ಡ ಚಿಂತೆಯಾಗಿದೆ.

ಭೀಮ : ಆದರೆ ಏನು ಮಹಾಪ್ರಭು. ಛಲದಂಕಮಲ್ಲ, ಮೈಸೂರಿನ ಹುಲಿ ಟಿಪ್ಪು ಸಾಹೇಬರಿಗೆ ಇದೇನು ಮಹಾ ತಾವು ಮನಸ್ಸು ಮಾಡಿದರೆ ಬ್ರಿಟಿಷ್ ಏನು ಮಹಾ ತಮಗೆ.

ಟಿಪ್ಪುಸುಲ್ತಾನ್ : ಹ್ಯಾರಿಸ್‌ನ ಯುದ್ಧತಂತ್ರ ಏನೂ ಅಂತ ತಿಳಿತಿಲ್ಲ. ನಮ್ಮ ಕೋಟೆ ಒಳಗಿನ ರಹಸ್ಯ ಬಯಲಾಗ್ತಾಯಿದೆ. ಅವರ ಸುಸಜ್ಜಿತ ಸೈನ್ಯ, ಆಧುನಿಕ ಸುಸಜ್ಜಿತವಾದ ತುಪಾಕಿಗಳನ್ನು ಹೊಂದಿದೆ. ನಮ್ಮ

ತಂತ್ರ ಅವರಿಗೆ ಈಗಾಗಲೆ ಗೊತ್ತಾಗಿ ಬಿಟ್ಟಿದೆ. ಹಾಗಾಗಿ ಅವರು ಕಷ್ಟ ಪಡಬೇಕಾಗಿಲ್ಲ.

ಭೀಮ : ಮಹಾಪ್ರಭು, ನಮ್ಮ ಬಳಿ ಅವರನ್ನು ಬಗ್ಗುಬಡಿಯುವ ಇಚ್ಛಾಶಕ್ತಿಯಿದೆ. ನಿಮ್ಮ ಸಲುವಾಗಿ ಪ್ರಾಣ ಬಿಡುವ ನನ್ನಂತಹ ಸಾವಿರಾರು ಜನ ಸೈನಿಕರಿದ್ದಾರೆ. ಚಿಂತೆ ಬೇಡಾ ಪ್ರಭು ಜಯ ನಮ್ಮದೆ.

ಟಿಪ್ಪುಸುಲ್ತಾನ್ : ಬರಿ ಇಚ್ಛಾಶಕ್ತಿಯಿಂದ ಏನೂ ಆಗದು ಭೀಮ. ಈಗ ನಿಂದುಕೆ ಕರೆಸಿದ ವಿಷಯ ಹೇಳ್ತಿನಿ. ನನಗೆ ಯಾರ ಮೇಲೂ ನಂಬಿಕೆ ಬರ್ತಾ ಇಲ್ಲಾ. ಈ ಕೆಲಸ ಕೇವಲ ನೀನು ಮಾಡಬಲ್ಲೆ. ಪರ್ಷಿಯಾದಿಂದ ಬಂದ ಯುದ್ದ ಸಾಮಗ್ರಿಗಳನ್ನು ಬಾಬಾಬುಡನ್ ಗಿರಿ ಬುಡದಲ್ಲಿ ಒಂದು ಗುಹೆಯಿದೆ, ಅದರ ರಹಸ್ಯ ನಿನಗೆ ತಿಳಿಸುತ್ತೇನೆ ಅದನ್ನು ತರುವುದು ನಿನ್ನ ಕೆಲಸ. ಅದರಿಂದ ಬ್ರಿಟಿಷರನ್ನ ತಡೆಯಬಹುದು. ಕೆಂಪು ಕೋತಿಗಳು ಪರದಾಡ ಬೇಕು ಅವರಿಗೆ ವಿಜಯ ಸಿಗಬಾರದು.

ಭೀಮ : ತಮ್ಮ ಅಪ್ಪಣೆ ಮಹಾಪ್ರಭು. ತಾವು ಹೇಳಿದ್ದನ ಶಿರಸಾವಹಿಸಿ ಮಾಡುತ್ತೇನೆ.

ಟಿಪ್ಪುಸುಲ್ತಾನ್ : ದೇಕೋ– ಇದು ಪೂರ್ವ, ಪಟ್ಟಣದಿಂದ ನೀವು ಹೀಗೆ ಹೋಗ್ತಿರಾ, ನೂರು ಮೈಲಿ ದೂರದಾಗೆ ಬಾಬಾ ಬುಡನ್ ಗಿರಿ ಪಹಾಡ್ ಆ ಪಹಡ್‌ಗೆ ಹೋದ ಮೇಲೆ ದೊಡ್ಡದೊಂದು ಬಂಡೆ ಕಾಣುತ್ತೆ, ಅದರ ಹಿಂದಿನ ಪೊದೆಯೊಳಗೆ ತೆವಳುತ್ತಾ ಹೋದರೆ ಕಲ್ಲು ಕಾಣುತ್ತೆ. ಅದನ್ನು ಸರಿಸಿದರೆ ಗುಫಾ ಕಾಣುತ್ತೆ. ನೀನು ವಾಪಾಸು ಬರ್ತಿಯಾ ಅಂತ ನನಗೆ ನಂಬಿಕೆಯಿದೆ. ಎಂಥ ಸರ್ಪಗಾವಲಿನಲ್ಲೂ ಇಡಿ ಕೋಟೆಗೆ ಆಹಾರಧಾನ್ಯವನ್ನು ತಲುಪಿಸಿದ್ದಿಯಾ. ಖುದಾ ಹಸೀಜ್.. ಮೇರೆ ಷೇರ್.

ಭೀಮ : (ಕಣ್ಣುತುಂಬ ಒಮ್ಮೆ ನೋಡಿ ಆಶೀರ್ವಾದ ಪಡೆದು) ಎಷ್ಟು ಜನ್ಮ ಮನುಷ್ಯನಾಗಿ ಹುಟ್ಟಿದರೂ ನಿಮ್ಮ ಸೇವಕನಾಗಿಯೇ ಹುಟ್ಟುತ್ತೇನೆ ಪ್ರಭು. ದೇವರು ನಿಮಗೆ ಜಯ ಕೊಡಲಿ ಗಾಳಿಯಂತೆ ಹೋಗಿಬರುವೆ. ನಿಮ್ಮ ವಿಜಯದಲ್ಲಿ ಭಾಗವಹಿಸುವ ಇಚ್ಛೆ ನನ್ನದು.

ಟಿಪ್ಪುಸುಲ್ತಾನ್ : ಸಾವಿರಾರು ಸೈನಿಕರು ಕಾಯುತ್ತಿದ್ದಾರೆ ಭೀಮ... ನೀನು ಯಾರೊ ಅನ್ನೋದೆ ಗೊತ್ತಿಲ್ಲಾ, ಗೆಳೆಯ, ಸೈನಿಕ, ಬಂದು ಎಲ್ಲವನ್ನು ಮೀರಿ ನನ್ನ ಸಹಾಯಕ್ಕೆ ನಿಂತಿರುವರು ನಿನ್ನ ಹೆತ್ತವರು ಧನ್ಯ ಮೆರೆ ಶೇರ್. ಹೋಗಿ ಬಾ, ಅಲ್ವಿದಾ.

* * *

ದೃಶ್ಯ ೪

ಸನ್ನಿವೇಶ ೮

(ಭೀಮ ರಹಸ್ಯ ಮಾರ್ಗ ಪ್ರವೇಶಿಸುವ ಮೊದಲೆ ಮೀರ್‌ಸಾಧಕ್ ಕಾಣುತ್ತಾನೆ.)

ಮೀರ್ ಸಾಧಕ್ : ಏಯ್, ನಿಲ್ಲು. ಪ್ರತಿಸಲ ನನ್ನ ಕೈಯಿಂದ ತಪ್ಪಿಸಿಕೊಳ್ಳಲಾರೆ ನೀನು ಬಂಜಾರ ಅಲ್ಪಾ.. ಒಳಗೆ ಏನು ಕೆಲಸ. ಯಾಕೆ ಬಂದಿದ್ದೆ ನಿನ್ನ ಒಳಗೆ ಬಿಟ್ಟವರು ಕೊನ್. ಪ್ರತಿಸಾರಿ ನನ್ನ ಕಣ್ಣಿಗೆ ಬೀಳ್ತಿಯಾ ಗಾಳಿಹಂಗೆ ಮಾಯ ಆಗ್ತಿಯಾ. ಬ್ರಿಟಿಷರು ಹದ್ದಿನ ಕಣ್ಣಿಟ್ಟು ಕಾಯ್ತದೆ ನಿಮ್ದು ಒಳಗೆ ಹೆಂಗೆ ಬರ್ತದೆ.

ಭೀಮ : ನಾನು ಒಳಗೆ ಬರದಿದ್ದರೆ ನೀವು ಮಣ್ಣು ತಿನ್ನ ಬೇಕಾಗುತ್ತೆ. (ಸ್ವಗತ) ಈ ಮಗನಿಂದಲೆ ಮಹಾಪ್ರಭು ಇಷ್ಟು ಚಿಂತಿತರಾಗುವುದು.

ಮೀರ್‌ಸಾಧಕ್ : ಕ್ಯಾ ಬೊಲೊ...ಇವನ ವಂಶ ನಿರ್ವಂಶ ವಾಗಬಾರದೆ, ಹಾಳಮನಿ ಧೂರ್ತ ಬೊಲೊ ಕ್ಯಾ ಬೊಲೆ. ಬೊಗಳು ಏನು ಹೇಳಿದೆ.

ಭೀಮ : ನಾವು ಬರದಿದ್ದರೆ, ಮಂತ್ರಿಯವರು ಉಪವಾಸದಿಂದ ಸಾಯಬೇಕಾಗುತ್ತೆ. (ಸ್ವಗತ) ನಮಕ್ ಹರಾಮ್, ನಿನಗೆ ಇದೆಲ್ಲಾ ಹೇಗೆ ತಿಳಿಯಬೇಕು ಮಹಾಪ್ರಭು ನಿನ್ನ ಕೆಂಪು ಮಂದಿಗೆ ಹೇಗೆ ಚೆಳ್ಳೆಹಣ್ಣು ತಿನ್ನಿಸುತ್ತಿದ್ದಾರೆಂದು.

ಮೀರ್‌ಸಾಧಕ್ : ಅದು ಬರಾಬರ್ ಅನ್ನು ಈಗ ಇಂತಹ ಕಠಿಣ ಸ್ಥಿತಿಯಲ್ಲಿ ಹೇಗೆ ಪಾರಾಗಿ ಬಂದೆ. ನಿನಗೂ ದೊಡ್ಡ ಛಾತಿ ಐತೆ. ಮಂದಿ

ಕೆಂಪಜನ ನೋಡಿ ಮೂರ್ಛೆ ಜಾತ ನೀವು ಒಳಗೆ ಬರ್ರಾ. ನಿಮ್ದು ಕೆಂಪು ಜನರ ಕೈಗೆ ಸಿಕ್ರೆ ಚಟ್ನಿ ಮಾಡ್ತಾ.

ಭೀಮ : ಈ ಬಂಜಾರ ಭೀಮನಾಯ್ಕನಿಗೆ ಯಾವುದು ಕಠಿಣವಲ್ಲ ಮಂತ್ರಿಗಳೆ ಕಳೆದ ಸಲ ನೀವೇ ನೋಡಿದರಲ್ಲಾ. ನೀವು ಹೇಳಿದಂಗೆ ನಾವು ಸಿಕ್ತಾ ಅವರು ಮಾಡ್ತಾ ನಾವು ಸಿಕ್ತಿಲ್ಲಾ ಅವರು ಚಟ್ನಿ ಮಾಡ್ತಿಲ್ಲಾ.

ಮೀರ್‌ಸಾಧಕ್ : ಆದರೂ ಕ್ಯಾಪ್ಟನ್ ಹ್ಯಾರಿಸ್‌ನಿಂದ ಎಚ್ಚರಿಕೆಯಿಂದಿರು. ಅವನು ಬದ್ಮಾಷ್, ನರ ರಾಕ್ಷಸ ಅದಾನು ಸಿಕ್ರೆ ಸುಟ್ಟು ಬಿಡ್ತಾನೆ.

ಭೀಮ : ನೀವು ಎಚ್ಚರದಿಂದ ಇರಿ ಪ್ರಭು, ನಮ್ಮದೇನು ಸಣ್ಣದೊಂದು ವ್ಯಾಪಾರ ಮಾಡಿ ಬದುಕುವ ಪರದೇಶಿಗಳು. ನೀವು ಸಾಮ್ರಾಜ್ಯವನ್ನಾಳುವ ಧಣಿಗಳು. ನಾಳೆ ನಿಮ್ಮ ಸಾಮ್ರಾಟರಾಗುವ ಕನಸು ನುಚ್ಚ ನೂರಾದಿತು. ಬಹಳ ಎಚ್ಚರದಿಂದಿರಿ.

ಮೀರ್‌ಸಾಧಕ್ : (ಮರ್ಮಾಂಗ ಘಾತವಾಗುತ್ತಲೆ) ಏಯ್, ಇದೆಲ್ಲಾ ನಿನಗೆ ಹೇಗೆ ಮಾಲೂಮ್. ನಾವು ಸಾಮ್ರಾಟ...ಝೂಟ್, ಬದ್ಮಾಷ್ ಕೋನ್ ಬೋಲಾ, ನಿನ್ನ (ಕತ್ತಿ ಹೊರಗೆ ತೆಗಿವನು) ಎನ್ಮಾಡ್ತಿನಿ ನೋಡು.

ಭೀಮ : ನನಗೇನು ತಿಳಿಯದು ಮಹಾಮಂತ್ರಿಗಳೆ ನಾನೊಬ್ಬ ಸಾಮಾನ್ಯ ಮನುಷ್ಯ. ಅಹಂ, ಕತ್ತಿ ಇರಿಬೇಡಿ, ಈಗ ಅದಕ್ಕೆ ಸಮಯವಿಲ್ಲ ಮಹಾಪ್ರಭುಗಳು ಒಳಗಿದ್ದಾರೆ, ಇಲ್ಲದಿದ್ದರೆ, ಒಂದು ಕೈ ತೋರಿಸುತ್ತಿದೆ.

ಮೀರ್‌ಸಾಧಕ್ : ಬಲೇ, ಹರಾಮಿ ಅದಿ ನೀನು. ಮಾತ್ನಾಗೆ ಯಾರಿಗ್ಗ ಸೋಲೊದಿಲ್ಲ. ನಿಲ್ಲು, ಏಯ್ ಶೆರ್.

ಭೀಮ : ನಾನು ಹೋಗಬಹುದೇ ತಮ್ಮ ಅಪ್ಪಣೆಯಾದರೆ.

ಮೀರ್‌ಸಾಧಕ್ : ಆಗಬಹುದು. (ಸ್ವಗತ) ಉಸಕೆ ಊಪರ್ ನಜರ್ ರಖ್.

ಭೀಮ : (ಸ್ವಗತ) ತಾಕತ್ತಿದ್ದರೆ ಹಿಡಿದು ನೋಡು ಚಾಲೊರೆ...ಎ ಬೂಡೇನ ಭುಗಡಾ ಖರಾನು. ಅಪಣಗೇಜಕೊಣ್ ಮಾಲಮನೇಣು. ಸಾರ್ದ್ಡೊ ಧುಂಡುಕರಣು ಹೈಂ ಕರೊ. ಮೋಟೊ ಚೋರ ಹಾವ ಈ. ನಡಿರಿ ಹೂಂ. (ಮಾಯವಾಗುವರು)

* * *

ದೃಶ್ಯ ೪

ಸನ್ನಿವೇಶ ೯

ಮೀರ್‌ಸಾಧಕ್ : ಕಾಡಿನಲ್ಲಿರೋ ಕಾಡಮನುಷ್ಯ ನಾಡಿನೊಳಗೆ ಯಾಕೆ ಬಂದ. ಜಲಿಲ್, ಖಬರ್‌ಕ್ಯಾ ಹೈ... ಎ ಬದ್ಮಾಷ್ ಬಂಜಾರ ಕಿಂವ್ ಆಯಾತ, ಕ್ಯಾ ಬಾತೆ ಹೂಯಿ. ದೇಕೋ ಮೇರೆ ಅರಮಾನಪರ್ ಪಾಣಿ ಮತ್ ಫೇರನಾ. ನಮ್ದುಕೆ ಬಾದಷ ಆಗಬೇಕು. ಟಿಪ್ಪುನ ಕೊನೆ ಆಗುತ್ತೆ. ಆಗ ಜಲೀಲ್ ನಮ್ದುಕೆ ಖಾಸ್ ಆದ್ಮಿ.

ಜಲಿಲ್ : ಹೂಜೂರ್ ಭೀಮ ರಹಸ್ಯ ಜಾಗಕೆ ಶಸ್ತ್ರಾಸ್ತ್ರ ತರೋದಕ್ಕೆ ಹೋಗ್ತಿದ್ದಾನೆ. ಮಹಾಪ್ರಭುಗಳು ಖುದ್ದಾಗೆ ಅವನಿಗೆ ನಕಾಶೆ ಕೊಟ್ಟಿದ್ದಾರೆ.

ಮೀರ್‌ಸಾಧಕ್ : ಕ್ಯಾ.. ಬಾಬಾಬುಡನ್‌ಗಿರಿ ಕೊ ಜಾರಹಾ ಕ್ಯಾ... ಅಚ್ಛಾ, ಎಲೋ ತುಮಾರ ಇನಾಮ್ ಔರ್ ಜಾವೊ ತುಮಾರೆ ಜಗೇಪರ್ ಮೇರೆಲಾವ ಯಾರಿಗೂ ಗೊತ್ತಗಬಾರದು

ಜಲಿಲ್ : ಜಿ ಹೂಜೂರು.......

ಮೀರ್‌ಸಾಧಕ್ : ಈ ಸುದ್ದಿ ಕ್ಯಾಪ್ಟನ್ ಹಾರಿಸ್‌ಗೆ ಹೇಳಬೇಕು. (ಸ್ವಗತ) ನಿಧಾನವಾಗಿ ಕೋಟೆಯನ್ನು ದಾಟಿ ಸುದ್ದಿ ತಿಳಿಸಬೇಕು. (ಹೊರಗೆ ಹೋಗುವನು).

ಜನರಲ್ ಹ್ಯಾರಿಸ್ : ಏನು ಸಮಚಾರ ಮೀರ್‌ಸಾಡಿಕ್, What is the news,

ಇಷ್ಟು ಹೊತ್ತಿಗೆ ಬಂದಿದಾನೆ ಅಂದರೆ ಏನೋ Message ಇರಬೇಕು ಹೇಳಿ. ಏನು ವಿಷಯ ತಂದರೆ

ಮೀರ್‌ಸಾಧಕ್ : ಹೂಜೂರ್ ಟಿಪ್ಪು ಕೋಟೆಯೊಳಗೆ ಕುಂತು ಏನೋ ಯೋಜನೆ ಕರ್‍ರಾ ಹೈ... ಬಹಳ ಗಂಭೀರವಾಗಿಯೆ ಯೋಚನೆ ಮಾಡ್ತಾರೆ.

ಜನರಲ್ ಹ್ಯಾರಿಸ್ : What ಯೋಜನೆ. ಏನು ಹಂಗದಂರೆ, ಅವನು....

ಮೀರ್‌ಸಾಧಕ್ : Plan ಹೂಜೂರ್ ಪ್ಲಾನ್, ನಿಮ್ಮ ವಿರುದ್ದ Plan ಮಾಡ್ತಾರೆ.

ಜನರಲ್ ಹ್ಯಾರಿಸ್ : ಓ Plan. ಏನು ಪ್ಲಾನ್, ಯಾರು ಇದ್ದಾನೆ ಜೊತೆಗೆ.

ಮೀರ್‌ಸಾದಕ್ : ಹೂಜೂರ್ ಟಿಪ್ಪುಸುಲ್ತಾನ್ ಭೀಮನಾಯ್ಕ ಎನ್ನುವ ಬಂಜಾರನನ್ನ ಬಾಬಬುಡನ್‌ಗಿರಿಗೆ ಕಳುಹಿಸಿದ್ದಾನೆ. ಅವನು ಅಲ್ಲಿಗೆ ಹೋಗಿ ಬಂದನೆಂದರೆ ಟಿಪ್ಪು ನಿಮ್ಮ ಹೆಡಮುರಿಗೆ ಕಟ್ತಾನೆ.

ಜನರಲ್ ಹ್ಯಾರಿಸ್ : Who is ಭೀಮನಾಯ್ಕ, ಭೀಮಾ, ಅವನು ಅಷ್ಟು ಪವರ್ ಫುಲ್.

ಜನರಲ್ ಹ್ಯಾರಿಸ್ : ನೀವು ಆ ಭೀಮನಾಯ್ಕನನ ನಮಗೆ ಒಪ್ಪಿಸಬೇಕು.

ಮೀರ್‌ಸಾಧಕ್ : ಹೂಜೂರ್ ಭೀಮನಾಯ್ಕನ ಹಿಡಿಯೋದು ಕಷ್ಟ. ಅವನು ಅದೆಷ್ಟೊ ಸಾರಿ ನಿಮ್ದುಕೆ ಕಣ್ಣು ತಪ್ಪಿಸಿ ಕೊಟೆ ಅಂದರ್ ಬಂದಾನೆ ಅಂತೀನಿ.

ಜನರಲ್ ಹ್ಯಾರಿಸ್ : What...ಭೀಮನಾಯ್ಕ ಅಷ್ಟು ಬಲಶಾಲಿನ allright, ಹೇಲಿ How he looks. ಅವನನ್ನು ನಾವು ನೋಡುತ್ತೇವೆ.

ಮೀರ್‌ಸಾಧಕ್ : ಬಲಶಾಲಿ ಅಲ್ಲ ಹೂಜೂರ್– ಚಾಣಾಕ್ಷ. ಅರಮನೆಯೊಳಗೆ ಎಷ್ಟು ಸಲ ಬಂದವ್ನೆ ಯಾರಿಗೂ ಗೊತ್ತಿಲ್ಲ. ನಿಮ್ಮ ಸೈನ್ಯ ಹದ್ದಿನ ಕಣ್ಣಿಟ್ಟು ಕೋಟೆಯನ್ನು ಕಾಯುತ್ತಿದ್ದರೂ ಅವನು ಮತ್ತು ಅವನ ಜನರು ಒಳಗೆ ಬಂದು ಸುಲ್ತಾನರನ್ನ ಭೇಟಿಯಾಗಿದ್ದಾರೆ ಅಂದಮೇಲೆ... ಅವನ್ದುಕೆ ತಾಕತ್ ಅಂದಾಜ್ ಆಗಿರಬೇಕು. ಶೇರ್ ಇಲ್ಲಾ ಸೈತಾನ್ ಅವನು, ರಾತ್ರಿ ಹಗಲು ಒಂದು ಇಲ್ಲಾ ಅವನ್ದುಕೆ ರಾತ್ರಿ ಅಡ್ತಾಡತಾನೆ.

ಜನರಲ್‌ಹ್ಯಾರಿಸ್ : ಏನು? ನಮ್ಮ ಕಣಗಾವಲಿನಿಂದ ತಪ್ಪಿಸಿಕೊಂಡು ಒಳಗೆ ಹೋದನೆ He must be crazy. ಯಾರು ಅವನು?

Who is he? ಹೇಳು ಯಾರು. ಅವನೇನು God? warrior ಯಾರು? He must be Punished, ಅವನಿಗೆ ಪಾಠ ಕಲಿಸಲೇ ಬೇಕು.

ಮೀರ್‌ಸಾಧಕ್ : ಹೂಜೂರ್, ಆಗಲೇ ಹೇಳಿದನಲ್ಲಾ ಅವನೊಬ್ಬ ಬಂಜಾರಾ ವ್ಯಾಪಾರಿ. ಟಿಪ್ಪು ಸೈನ್ಯ ಒಳಗೆ ಆರಾಮದಿಂದ ಇದೆ. ಅಂದರೆ ಅದಕ್ಕೆ ಭೀಮನಾಯ್ಕನೇ ಕಾರಣ. ಕಳೆದ ಆರು ತಿಂಗಳಿಂದಲೂ ಗೌಪ್ಯವಾಗಿ ಆಹಾರ ಸಾಮಗ್ರಿಯನ್ನು ಅವನೆ ಒಳಗೆ ಕಳುಹಿಸುತ್ತಿರುವುದು. ಅದು ಹೇಗೆ ಕಳುಹಿಸುತ್ತಿದ್ದಾನೊ ನಮಗೂ ಗೊತ್ತಿಲ್ಲಾ ಹೋಗಲಿ ನಿಮ್ಮ ಸೈನಿಕರು ಅವನನ್ನು ನೋಡಿಲ್ಲ ಅಂದರೆ, ಅವನು ಭಾರಿ ಬುದ್ದಿವಂತ ಹೂಜೂರ್......

ಜನರಲ್‌ಹ್ಯಾರಿಸ್ : Nonsense.. ಮೀರ್‌ಸಾಧಕ್ You are a big fool ಇಲ್ಲಿಯವರೆಗೆ ನಮಗೆ ಏಕೆ ಹೇಳಲಿಲ್ಲಾ. He must be punished. ಈಗ ಅವನೆಲ್ಲಿ? Where is he come on tell me ಎಲ್ಲಿ ಅವನು. I will kill him bastared. ನಮಗೆ ಮೋಸ ಮಾಡಿದನ ಬಂಜಾರ bastered ಅವರ ಕಾಟ ಹೆಚ್ಚಾಗಿದೆ. ಕಾಡಿನಲ್ಲಿ ಮೆರಿತಿದ್ದಾರೆ. ಅದನ್ನು ಬಿಟ್ಟು ಈಗ ಟಿಪ್ಪುಗೆ help ಮಾಡ್ತಿದ್ದಾನೆ ಅಂದರೆ ಅವನು ಬದುಕಬಾರದು.

ಮೀರ್‌ಸಾಧಕ್ : (ಸ್ವಾಗತ) ಕೊಲ್ತಿಯಾ ಬಿಳಿಯಾ, ಅವನೇನು ನೊಣವ ಕೊಲ್ಲೋದಕ್ಕೆ ಬಹದ್ದೂರ್ ಸಿಪಾಯಿ, ಶೂರ ದೇಶಭಕ್ತ ಅದು ಹೂಜೂರ್ ಅವನನ್ನು ಹಿಡಿಯುವುದು. ಅಷ್ಟು ಸುಲಭವಲ್ಲ, ಕಾಡಿನ ಎಲ್ಲಾ ದಾರಿಗಳು ಅವನಿಗೆ ಗೊತ್ತಿದೆ. ಕಾಡಿಗೆ ನೀವು ಹೊಸಬರು ಅವನು ಅಲ್ಲೇ ಜೀವನ ಮಾಡಿದವನು ಸ್ವಲ್ಪ ಜಾಗ್ರತೆ.

ಜನರಲ್ ಹ್ಯಾರಿಸ್ : What... ಅವನನ್ನ ಹಿಡಿಯುವುದು You mean ಕಷ್ಟ. ಟಿಪ್ಪುನ ಸೋಲಿಸಬೇಕಾದರೆ ಎಂಥ ಕಷ್ಟನಾದರೂ ಮಾಡಬೇಕು You Know. ಅದು ಅಲ್ಲದೆ ಅವನೊಬ್ಬ ವ್ಯಾಪಾರಿ. ಅವನನ್ನು ಟ್ರಾಪ್ ಮಾಡಿ ಇಲಿಯಂತೆ ಕೊಲ್ಲಬೇಕು. ಅವನು ಬದುಕಬಾರದು.

ಮೀರ್‌ಸಾಧಕ್ : ಅವನು ಗುಡ್ಡದಲ್ಲಿ ಕಾಣೆಯಾಗ್ತಾನೆ. ಕಾಡಿನಲ್ಲಿ ಮಾಯ ಆಗ್ತಾನೆ. ಎದುರಿಗಿದ್ರೆ ಹುಲಿಯಾಗ್ತಾನೆ. ಅವನ್ನ ಹಿಡಿಯಾಕೆ ಗುಂಡಿಗೆ ಬೇಕು ಹ್ಯಾರಿಸ್ ಸಾಹೇಬ್ (ಸ್ವಗತ) ಅಧಿಕಾರಕ್ಕೆ ಗಂಟುಬಿದ್ದ ನಾನು ನಿಮ್ಮ ಕಡೆ ಇದ್ದೇನೆ ನಿಜ. ನಾಳೆ ಟಿಪ್ಪುವಿನ ಹಾಗೆ ನನಗೆ ಮೋಸ ಮಾಡುವುದಿಲ್ಲ ಅನ್ನೋದಕೆ ಏನು ಸಾಕ್ಷಿ ಹೈ.

ಜನರಲ್‌ಹ್ಯಾರಿಸ್ : ಮೀರ್‌ಸಾಧಕ್ ನೀನು ನಮ್ಮ ಕಡೆಗೊ ಇಲ್ಲ ಟಿಪ್ಪು. ಅವನು ಹುಲಿ ಆದರೆ ನಾವು ಗುಂಡುನಿಂದ ಹೊಡೆಯುತ್ತೇವೆ. ಅವನ ಸುಳಿವು ಹೇಳಿ. ಅವನು ಗಾಲಿಯಾದರೆ ನಾವು ಹಿಡಿದು ಇಡುವ ಬ್ರಿಟೀಷರು.

ಮೀರ್‌ಸಾಧಕ್ : ಹೂಜೂರ್.. ನಾನು ನಿಮ್ಮ ಸೇವಕ. ಟಿಪ್ಪು ನಂತರ ನಿಮ್ಮ ಸೇವೆ ಮಾಡುವ ಪಟ್ಟಣದ ಭಾವಿರಾಜ...ನಾನೇಕೆ ಟಿಪ್ಪುಕಡೆಯಾಗಲಿ, ನನಗೆ ಗದ್ದಿ ಚಾಯಿಯೆ ಅದಕ್ಕೆ ನಾನೇನನ್ನು ಮಾಡಲು ಸಿದ್ಧ.

ಜನರಲ್‌ಹ್ಯಾರಿಸ್ : Yes ಹಾಗೆ ಹೇಳು. Now tell me ಈಗ ಅವನು ಎಲ್ಲಿ? ಹೇಗಾದರೂ ಮಾಡಿ ಅವನನ್ನು ಹಿಡಿದು ಅವನಿಗೆ ಏನು ಮಾಡುತ್ತೇನೆ. ನನಗೆ ಗೊತ್ತಿಲ್ಲಾ. come on tell, ಎಲ್ಲಿ ಹೋದ ಅವನು.

ಮೀರ್‌ಸಾಧಕ್ : ಟಿಪ್ಪು ಮತ್ತೆ ಅವನ ರಹಸ್ಯ ಭೆಟ್ಟಿಯ ನಂತರ ಇವತ್ತು ಮುಂಜಾನೆ ಅವನ ಜನರೊಂದಿಗೆ ಬಾಬಾಬುಡನ್‌ಗಿರಿ ಕಡೆಗೆ ಫ್ರಾನ್ಸ್‌ನಿಂದ ಬಂದ ಶಸ್ತ್ರಾಸ್ತ್ರಗಳನ್ನು ತರುವುದಕ್ಕೆ ಹೋಗಿದ್ದಾನೆ. ಒಂದು ವೇಳೆ ಅವನು ಕಾಮ್‌ಯಾಬ್ ಹೂವ ನಿಮ್ಮ ಗೆಲವು ಕಷ್ಟ ಹೂಜೂರ್

ಜನರಲ್‌ಹ್ಯಾರಿಸ್ : ಏನು? ನಮ್ಮ ಮೇಲೆ ಅನುಮಾನ You fool.

ಮೀರ್‌ಸಾಧಕ್ : ಅವನು ವಾಪಾಸು ಬಂದರೆ ನಿಮ್ಮ ಗೆಲುವು ಕಠಿಣ. ಹೇಗಾದರೂ ಮಾಡಿ ಅವನನ್ನು ಅಲ್ಲೆ ಹಿಡಿಯಿರಿ.

ಜನರಲ್‌ಹ್ಯಾರಿಸ್ : ಅವನು ಅಷ್ಟು ಬುದ್ಧಿವಂತ. Colonel Macky ಅವನನ್ನು Chase ಮಾಡಿ. ನನ್ನ ಎದುರಿಗೆ ಹಿಡಿದು ತನ್ನಿ ಹಾಂ... ಆದರೆ ಅವನು ಜೀವಂತವಾಗಿರಬೇಕು. Mind

it. ಅವನನ್ನ ನಾನು ನೋಡುತ್ತೇನೆ. ಹೇಗೆ ನನ್ನ ಕೈ ಯಾಗೆ ತಪ್ಪಿಸಿಕೊಳ್ಳುತ್ತಾನೆ.

ಕರ್ನಲ್‌ಮ್ಯಾಕಿ : Yes General. ನಾನು ಪ್ರಯತ್ನ ಮಾಡುತ್ತೇನೆ ಹಿಡಿಯಲು. ಅವನು ಯಾವ ಕಡೆಗೆ ಹೋದ.

ಮೀರ್‌ಸಾಧಕ್ : ಅವನು ಹೋದ ದಾರಿಯನ್ನು ನಮ್ಮ ಖಾಸ ಸೈನಿಕ ಮೆಹಬೂಬ್‌ಗೆ ಚೆನ್ನಾಗಿ ಗೊತ್ತಿದೆ. ಅವನು ನಿಮಗೆ ತೋರಿಸುತ್ತಾನೆ. ಮೊದಲು ಅವನನ್ನು ಹಿಡಿದು ಹೊಸಕಿ ಹಾಕಿ.

ಕರ್ನಲ್‌ಮ್ಯಾಕಿ : Come on ಅವನನ್ನು ಹಿಡಿದು ತರುವ... Soliders follow me. ಅವನನ್ನು ಬೇಗಹಿಡಿಯುವ.

ಕ್ಯಾ ಹ್ಯಾರಿಸ್ : Move ಅವರನ್ನು Chase ಮಾಡಿ ಹಿಡಿದು ತನ್ನಿ (ಹೊರಡುವರು). ನಮಗೆ ಗೊತ್ತಿಲ್ಲದೆ ಅವನು ಟಿಪ್ಪುಗೆ ಸಹಾಯಮಾಡ್ತಾನಂದರೆ ಏನು. After all Bangara. ಅವನಿಗೆ ಎಷ್ಟು ಧೈರ್ಯ. Let us see.

(ನಿರ್ಗಮನ)

* * *

ದೃಶ್ಯ ೫

ಸನ್ನಿವೇಶ ೧

ಭೀಮ : ಏಯ್, ದೇಕೋರ. ಕೋಯಿ ಆಡೊ ಆವತೋಯಿ ಅಪಣ ಜಾರೆ ಜಕೊ ಕಾಮ ಮಾತ್ರ ನ ಕೇಣು, ಅಪಣ್ ಜಾನ್ ಕಾನಿ ಜಾವ ಕಾಯಿಕೊ ಅಪಣ್ ವಾತೆ ಕೇನಿ ಕಳೇನಿ ಹ್ಯಂವೇನ ಅಪಣ ವಾತೇಮ- ವಾತೆಕರೊ, (ನೆನಪಿರಲಿ...ಯಾರು ಹಿಂದಿ, ಕನ್ನಡ ಮಾತಾಡಬೇಡ್ರಿ. ಗೋರ ಬೋಲಿ ನಮಗೆ ಇರುವ ವರ. ಯಾರಿಗೂ ಈ ಭಾಷೆ ತಿಳಿಯೋದಿಲ್ಲ. ಎಚ್ಚರ.)

ಜಾತು : ಆಯ್ತು ನಾಯಕ ನೀ ಹೆಂಗಂತಿ ಹಾಗೆನೆ ಆಗಲಿ. ನಿನ್ನ ಈ ದೇಶಸೇವೆಯ ಕೆಲಸದಲ್ಲಿ ನಮ್ಮನೂ ಭಾಗವಾಗಿ ಮಾಡಿದೆ ನಿನಗೆ ಋಣಿಯಾಗಿದ್ದೇವೆ. ಎಷ್ಟು ಕಷ್ಟ ಬಂದರು ನಿನಗೆ ಸಾಥ್ ಕೊಡ್ತಿವಿ. ನೀ ಏನು ಯೋಚನೆ ಮಾಡಬೇಡ ಜೀವ ಹೋದ್ರು ಜುಬಾನ ತಗಿಯಾಕಿಲ್ಲ.

ಹಾಮು : ಅಣ್ಣ, ಈ ಕೆಂಪಮಂದಿನ ನೋಡಿದ್ರ ಹೆದರಿಕೆ ಆಕೈತೊ ಮರಾಯ, ಅವರೇನು ದನ ತಿಂತಾರೇನು? ಹಿಂಗ ಅದಾರ ಇವ್ರಾಪ್ನ. ಅದೇನ ಎತ್ತರ, ಅದೇನು ದಪ್ಪ, ಒಬ್ಬರಿಗಿಂತ ಒಬ್ಬ ಚೋರ ಅದಾರ.

ಡಾವೇರಲಚ್ಚಾ : ಯಾಕ ನೀನು ತಿನ್ನಬೇಕಂದಿ. ಅವರು ದನ, ಹಂದಿ ಮಾಂಸ ತಿಂತಾರ ನೋಡು.

ಹಾಮು : ಏಯ್, ಎಂಥ ಮಾತಾಡ್ತಿಯೋ. ಗೋಮಾತೆಯನ್ನ ನಾವು ಕಾಯ್ತಿವಿ, ಪೂಜಿಸ್ತಿವಿ. ಥು, ಅದನ್ನ ಹೆಂಗಾನ ತಿಂತಾರೊ. ಅವರಾಪ್ನ ಹೆಂಗಾನ ತಿಂತಾರ

ಕಾರಬಾರಿಕಮಲ : ಭೀಮ, ಯಾರೊ ವೇಗದಿಂದ ಬರ್ತಿರೊ ಹಾಗಿದೆ ಜಾಗ್ರತರಾಗಿ. ದೇಕೊ ಕೋಯಿ ವಾತೆ ಕರೋಮತ್.

ಭೀಮನಾಯ್ಕ : ಸದ್ದು, ಕುದುರೆ ಕಾಲ ಸಪ್ಪಳ, ಇಲ್ಲೇ ಸಮೀಪ ಇರೋ ಹಾಗೆ ಅನಿಸುತ್ತೆ. ಅಂದ್ರೆ ನಮ್ಮ ಬೆನ್ನ ಹಿಂದೆ ಹೊರಟಿರಬೇಕು. ಇಲ್ಲ ತಡವಾಗಿ ಹೊರಟರು ನಮಗಿಂತ ಬಲಿಷ್ಠ ಕುದುರೆಗಳನ್ನ ಉಪಯೋಗಿಸಿರಬೇಕು. ಹೂಂ.. ವೇಗ ಹೆಚ್ಚಾಗಲಿ. ನಾಕುಮಂದಿ ಈ ಕಡೆಗೆ, ನಾಕುಮಂದಿ ಆ ಕಡೆಗೆ ನೇರಕ್ಕೆ ನಾಕುಮಂದಿ. ಯಾರನ್ನ ಹಿಡಿದರು ಯಾರ ಬಗ್ಗೆ ಮಾಹಿತಿ ಕೊಡಾಕಿಲ್ಲ. ಆ ಸೂಳಿ ಮಕ್ಕಳ ಕೈಗೆ ಯಾರು ಸಿಗಬೇಡ್ರ ಮಹಾ ಕ್ರೂರಿಗಳು ಸಾಯಾಕು ಬಿಡಲ್ಲ ಬದಕೋದಕ್ಕು ಬಿಡಲ್ಲ. ಬಹಳ ಜೋಪಾನ.

ಧಾವು : ಸಿಕ್ರೂ ಸಿಗದ ಹಾಕ್ತಾರ, ಹೂಂ...ಹೊರಾಡ್ರಿ, ಸಾಯೋದಿದ್ರು ಧೈರ್ಯದಿಂದಲೇ ಸಾಯಿರಿ. (ದಿಕ್ಕಾಪಾಲಾಗುವರು)

ಕರ್ನಲ್‌ಮ್ಯಾಕಿ : Come on.. move ಅವರು ಹೇಳಿದ ಜಾಗ ಇದೆ.ಇಲ್ಲೇ ಇರುತ್ತೆ ಹುಡುಕಿ ಹೋಗಿ. ಇಲ್ಲಿಂದ ದೂರ ಹೋಗೊಕೆ Chance ಇಲ್ಲ.

ಸೈನಿಕ : ಪ್ರಭು ಇಲ್ಲಿ ಯಾರ ಸುಳಿವೂ ಇಲ್ಲ.

ಕರ್ನಲ್‌ಮ್ಯಾಕಿ : ಅವನು ಸಿಗಲಿಲ್ಲಾ, ಅವನ ಜಾಗದಲ್ಲಿ I will Shoot you ಆಲೋಚಿಸು. ಅವನು ಸಾಯಬೇಕು ಇಲ್ಲಾ ನೀನು. Choice is Yours.

ಸೈನಿಕ : Yes Sir (ಹುಡುಕುವನು) (ಸ್ವಗತ) ಬದುಕಿದೆ ಇಲ್ಲಾ.

ಮತ್ತೊಬ್ಬ ಸೈನಿಕ : ಪ್ರಭು, ಯಾರು ಇಲ್ಲ.. ಯಾರೊ ನಿಮಗೆ ಸುಳ್ಳು ಹೇಳಿದ್ದಾರೆ.

ಕರ್ನಲ್‌ಮ್ಯಾಕಿ : You swine ನನ್ನೆದುರಿಗೆ ಮಾತಾಡ್ತಿಯಾ. (ಬಂದೂಕಿಂದ ಗುಂಡು ಹಾರಿಸಿ ಕೊಲ್ಲುವನು. ಸೈನಿಕರೆಲ್ಲಾ ಹೌಹಾರಿ ಶೋಧಕಾರ್ಯದಲ್ಲಿ ತೊಡಗುವರು.) You bloody Indian ನನಗೆ ಸುಳ್ಳು ಹೇಳುತ್ತಿರ.

ಢಾವು : ಯಾ ಭಗವಾನ್, ಏಕವಾತ ಕಿ ದೊ ಕೋನಿ ಮಾರನಾಕೊ.

ಭೀಮ : ಶ್! ವಾತೆಕರಮತ್. ಸಾಂಬಳಗೊಕತೊ ತಾರಜಾನ್ ಕಾಡಚ.

ಕರ್ನಲ್‌ಮ್ಯಾಕಿ : ಭೀಮ.. ಹೇಡಿಯಂಗೆ ಅಡಗಿಯಾ.. ನೀನು ಗಂಡಸು. ಆದರೆ ಹೊರಗೆ ಬಾ.. ಭೀಮ... ಟಿಪ್ಪು ಸಾಕಿರುವ ನಾಯಿ. I Know ನೀನು ಇಲ್ಲೆ ಹೇಡಿಯಂತೆ ಅವಿತುಕೊಂಡಿದ್ದರೂ,

ಜಾತು : ಭೀಯಾ, ಎಕ್ಕಜ ಮಾರುಕ ಮಾತೇನ. ಬೆಟ್ಟಾ ರಾತಡೊ ವಾಂದರ್.

ಭೀಮನಾಯ್ಕ : ಎಲ್ಲರ ಜೀವ ಕಳಿಬೇಕಂಥ ಮಾಡಿಯಾ. ಗಪ್ಪರ ವಾತೆ ಕರಾಮತ್

ಕರ್ನಲ್‌ಮ್ಯಾಕಿ : ಸೈನಿಕರೆ... ಎಲ್ಲಿ ಹೋದ, ಹುಡುಕಿ ನನ್ನ ಲೆಕ್ಕದಲ್ಲಿ ಅವರು ಇಲ್ಲೇ ಇರಬೇಕು. ಭೀಮ.. ನೀನು ಬರದಿದ್ದರೆ ನಮ್ಮ ಸೈನಿಕರು ಗುಂಡು ಹಾರಿಸುತ್ತಾರೆ. ನೀವೆಲ್ಲಾ ಕ್ರಿಮೀಗಳಂತೆ ಸುಟ್ಟು ಹೋಗ್ತಿರಾ.

ಹಾಮ : ಸಾಯುವುದಕ್ಕಿಂತ ಶರಣಾದರೆ ಜೀವ ಉಳಿಯುತ್ತದೆ. ಹೂಜೂರು... ಇಲ್ಲಿದ್ದಿನಿ... (ಹೊರಗೆ ಓಡುವನು)

ಕರ್ನಲ್‌ಮ್ಯಾಕಿ : I Know ನಿನ್ನ ಗುಂಪಿನಲ್ಲಿ ಹೇಡಿ ಇದ್ದಾರೆ. Come on... ನೀನು ಭೀಮನಾಯ್ಕ. Tell me ನೀನು ಭೀಮ

ಹಾಮ : ಏನು?

ಕರ್ನಲ್‌ಮ್ಯಾಕಿ : Are you Bheema. ಬೊಗಳು you Indian

ಹಾಮ : ಹಾಮನಾಯಕ...

ಕರ್ನಲ್‌ಮ್ಯಾಕಿ : (ಗುಂಡು ಹೊಡೆದು ಕೆಳಗುರುಳಿಸುವನು) Bloody fool...

ಭೀಮನಾಯ್ಕ : ಹಾಮ.. ಹಾಮ... ಏಯ್, ಕೆಂಪುಕೋತಿ ಮನುಷ್ಯರಂದರೆ ಏನಂದುಕೊಂಡಿಯಾ... (ಹಿಡಿಯಲು ಬಂದ ಸೈನಿಕರನ್ನು ಹೊಡೆದು ಉರುಳಿಸುವನು) ಏನ್ ಮಾಡಿಕೊಂಡಿಯಾ, ಇಂಥ ಮಕಲ ಯಾಕೆ ಬರೋದಕ್ಕೆ ಹೋದೆ. ಛೆ, ಸುಕಾಸುಮ್ಮನೆ ಜೀವ ಕಳ್ಕೊಂಡೆ ಈಗ ತಾಂಡದಲ್ಲಿ ಹೋಗಿ ಏನೂಂತ ಉತ್ತರ ಹೇಳಲಿ.

ಕರ್ನಲ್‌ಮ್ಯಾಕಿ : ಏ Worm ನಿನ್ನನ್ನು ಸುಟ್ಟುಬಿಡುವೆ... ನೀನ ಭೀಮ, ನಿನ್ನ ಬಗ್ಗೆ ಬಹಳ ಹೇಳಿದರು. ಆದರೆ ನೀನು

ಭೀಮ : (ಅವನ ಕೈಯಿಂದ ಬಂದೂಕು ಕಸಿದುಕೊಂಡು, ಎಲ್ಲರನ್ನು ಹೊಡೆಯುವನು, ಉಳಿದ ಸೈನಿಕರು ಗುಂಡು ಹಾರಿಸುವರು. ಡಾವೇರಲಚ್ಚ, ಜಾತು, ಕಾರಬಾರಿ ಕಮಲಗೆ ಗುಂಡು ಎದೆಗೆ ತಾಗಿ ಇರುವಯಂತೆ ನೆಲಕ್ಕುರುಳುವರು. ಭೀಮನ ಕಣ್ಣೆದುರಿಗೆ ಮಡಿದ ಗೆಳೆಯರನ್ನು ನೋಡಿ) ಜೈ ಮಹಾಂಕಾಳಿ.. ಮರಿಯಾಡಿ ಏಯ್ ಕೆಂಪು ಕುನ್ನಿಯ ನಾಯಿಗಳೇ (ಅಬ್ಬರಿಸಿದವನೆ ಕತ್ತಿಯಿಂದ ಇರಿದು ಹದಿನೈದು ಜನರನ್ನು ಸಾಯಿಸುವನು.) ಕಾಯಂಆಗಿ ಏನ್ ಮಾಡಿಕೊಂಡ್ರೂ, ಜಾತು ಎಕ್ ಬಾರ್ ಮಾತಾಡು.......

ಕರ್ನಲ್‌ಮ್ಯಾಕಿ : No.. ಭೀಮ... No... ಬೇಡ, ಹೊಡಿಬೇಡ..

ಸೈನಿಕ : You Indian (ಗುಂಡು ಹಾರಿಸುವನು ಕೈಯಲಿದ್ದ ಖಡ್ಗ ಕೆಳಗುರುಳುವುದು)

ಭೀಮ : ಏಯ್ ಕೆಂಪು ಕುನ್ನಿ (ಸಿಕ್ಕ ಕಟ್ಟಿಗೆಯ ತುಂಡಿನಿಂದ ಹೊಡೆದು ಕೆಳಗುರುಳಿಸುವನು). ಏನಂತ ತಿಳಿದೀಯ ಇದು ವೀರರು ಹುಟ್ಟಿರುವ ಪುಣ್ಯ ಭೂಮಿ ನಿನ್ನಂತ ಮೋಸಗಾರ, ಕಪಟಿಗೆ ಜನ್ಮ ಕೊಟ್ಟಿಲ್ಲ.

ಕರ್ನಲ್‌ಮ್ಯಾಕಿ : Come on catch him ಹಿಡಿಯಿರಿ ಈಗ ಅವನು ಸಿಗುತನೆ. Soliders catch ಮಾಡಿ. ಬಾಳ ಹಾರಾಡ್ತಾನೆ. ಅವನ ಕತೆ ಮುಗಿಸಿ.

ಭೀಮ : ನನ್ನ ಹಿಡಿಯುವುದು ಸುಲಭವಲ್ಲವೊ ನಾಯಿ...ನೀನು ನಿನ್ನಂತ ಕೆಂಪು ಕುನ್ನಿಗಳಿಗೆ ಸಿಗುವವನಲ್ಲ.

ಕರ್ನಲ್‌ಮ್ಯಾಕಿ : ಸೈನಿಕರೆ ಹೋಗಿ. ಮೊದಲು ಅವನ ಕಾಲಿಗೆ ಗುಂಡು ಹೊಡೆಯಿರಿ, come on. ಹೇಗಾದರೂ ಮಾಡಿ ಕಾಲಿಗೆ ಹೊಡೆದು ಕೆಳಗೆ ಬೀಳಿಸಿ.

ಕೈಗೆ ಹೊಡೆಯಿರಿ, ಆಮೇಲೆ easy ಯಾಗಿ ಸಗತಾನ.

ಸೈನಿಕ : Yes My Lord, (ಕಾಲಿಗೆ ಗುಂಡು ಹೊಡೆಯುವನು)

ಭೀಮ : ಓ ದೇವರೆ ನಾನು ನನ್ನ ಒಡೆಯನಿಗೆ ಕೊಟ್ಟ ಮಾತು ಉಳಿಸಿಕೊಳ್ಳಲಾಗಲಿಲ್ಲ, ಇಲ್ಲ ನಾನು ಸಾಯುವುದಿಲ್ಲ, ಜೀವಂತವಾಗಿ ಈ ಕುನ್ನಿಗಳಿಗೆ ಉತ್ತರ ಕೊಡುತ್ತೇನೆ.

(ಮರಕ್ಕೆ ಕಟ್ಟಿಹಾಕಲು ಪ್ರಯತ್ನ, ಭೀಮ ಕೊಸರಾಡಲು ಪ್ರಯತ್ನಿಸುತ್ತಿದ್ದಾನೆ). ಮೋಸ, ಇದೊಂದೆ ಶಬ್ದದಿಂದ ವ್ಯಾಪಾರ ಮಾಡುವುದನ್ನು ಕಲಿತು ಜಗತ್ತನ್ನೆ ಮುಗಿಸುವ ಹುನ್ನಾರ ಮಾಡಿರುವ ಈ ಕೆಂಪು ಜನರಿಗೆ ದೇವರೆ ಒಳ್ಳೆಯದನ್ನೆ ಮಾಡ್ತಿದ್ದಿಯಾ, ದೇಶ ಪ್ರೇಮಿಗಳಿಗೆ ಸಾವನ್ನು ಕೊಡುತ್ತಿದ್ದಿಯಾ, ಇದು ಯಾವ ನ್ಯಾಯ?

* * *

ದೃಶ್ಯ ೫

ಸನ್ನಿವೇಶ ೨

ಕರ್ನಲ್‌ಮ್ಯಾಕಿ : ಜನರಲ್ ಹ್ಯಾರಿಸ್ ಸಾಹೇಬರಿಗೆ ಸುದ್ದಿ ಹೋಯಿತಾ? ಈ ಕುನ್ನಿಯನ್ನು ಅವರ ಜೀವಂತ ನೋಡಿ ಮಕದ ಮೇಲೆ ಉಗಲ ಬೇಕಂತೆ.

ಸೈನಿಕ : Yes My Lord

ಕರ್ನಲ್‌ಮ್ಯಾಕಿ : ಅವರು ಬರುವುದು ಏಕೆ Late ಆಯಿತು? ಹಾಂ, ಇಷ್ಟು ವೇಳೆ ಅವರು ಇಲ್ಲಿ reach ಆಗಬೇಕಿತ್ತು. (ನೋವಿಂದ ಕಿರುಚುವನ್ನು) ಎ ಯಾ. ಮರಗಯೇ,

ಭೀಮ : ಅಮ್ಮ...

ಕರ್ನಲ್‌ಮ್ಯಾಕಿ : Call your ಅಮ್ಮ. Now tell me ಎಲ್ಲಿಗೆ ಹೊಂಟಿದೆ, ಯಾಕೆ ನಮ್ಮ ಮೇಲೆ Attack ಮಾಡಿದೆ. who are you? Bloody Indian Tipu ನಾಯಿ ನೀನೇನ. ನೀನು ವೀರ ಅಂದುಕೊಂಡಿದೆ.

ಭೀಮ : ನೀವೇ ನಮ್ಮವರನ್ನು ಕೊಂದ್ರಿ... ಅದಕ್ಕೆ, ನೀನು ಹೇಡಿ, ಜೀವ ರಕ್ಷಣೆಗೆ ನಾವು ಮೇಲೆ ಬಿದ್ವಿ, ನಾವು ಬಂಜಾರಗಳು.

ಕರ್ನಲ್‌ಮ್ಯಾಕಿ : Who are you? ಯಾರು ನೀನು? ಬಂಜಾರ ಅಂತ ಗೊತ್ತು ಏನು ಮಾಡುತ್ತಿದೆ. ಇಲ್ಲಿ

ಭೀಮ : ನಾನು ಒಬ್ಬ ಮನುಷ್ಯ ಮನುಷ್ಯನಿಗೆ ಏನು ಕೆಲಸ ಇರುವುದಿಲ್ಲವ ಹಾಗೆ.

ಕರ್ನಲ್‌ಮ್ಯಾಕಿ : What ಮನುಷ, ಅದು ನನಗೂ ಗೊತ್ತು. ಏನು ಕೆಲಸ ನಿನಗೆ ಇಲ್ಲಿ. ಕಾಡಿನಲ್ಲಿ ಗುಂಪು ಕಟ್ಟ ಯಾಕೆ ಬಂದೆ?

ಭೀಮ : ನಿನಗೇನು ಕೆಲಸ, ನಮ್ಮ ಈ ಕಾಡಿನಲ್ಲಿ ಸುಮ್ಮನೆ ಬಂದೆ.

ಕರ್ನಲ್‌ಮ್ಯಾಕಿ : What ನಮ್ಮದು. ಇದು ನಮ್ಮದು, ನಾವು ಇದರ ಒಡೆಯರು.

ಭೀಮ : ಟಿಪ್ಪು ಪ್ರಭು ಬದುಕಿರುವವರೆಗೆ ನೀವು ಕನಸು ಕಾಣಬೇಕು. ಇದು ನಿನ್ನ ಭ್ರಮೆ ಕಣೋ ಬಿಳಿಯ.

ಕರ್ನಲ್‌ಮ್ಯಾಕಿ : What Tippu? ಅವನ ಕತೆ ಮುಗಿತು. Tell me ನಿನಗೂ, ಟಿಪ್ಪುಗೂ ಏನು ಸಂಬಂಧ. ನೀನು ಯಾಕೆ ಈ ಜಾಗಕೆ ಬಂದೆ. Tell me (ಮರಕ್ಕೆ ಗುದ್ದುವನು) ನೀನು ಟಿಪ್ಪುನ ಖಾಸ್ ಸೈನಿಕ. ಮೊದಲು ನಿನ್ನ ಬಲಿ ನಂತರ ಟಿಪ್ಪು.

ಭೀಮ : ಕೆಂಪುಕೋತಿ.. ಟಿಪ್ಪು ಯಾರು ಅಂತ ಗೊತ್ತಿಲ್ಲಾ. ಅವನನ್ನು ಸೋಲಿಸುವ ಕನಸು ಕಾಣು ಅಷ್ಟೆ.

ಕರ್ನಲ್‌ಮ್ಯಾಕಿ : ಟಿಪ್ಪು ಯಾರು ಅಂತ ಗೊತ್ತಿಲ್ಲಾ ok ok ಸೈನಿಕರೆ ಅವನನ್ನು ಎಳೆದು ತನ್ನಿ, ಅವನ ಕಣ್ಣು ಕೀಳಿ...

ಸೈನಿಕ : Yes My Lord... (ಅವನ ಕಣ್ಣು ಕೀಳುವರು). ಅವನು ಜೋರಾಗಿ ಚೀರುವನು.

ಭೀಮ : ಥಾವು... ಏಯ್, ನಾಯಿಗಳ ನನಗೆ ಶಿಕ್ಷೆ ಕೊಡ್ರೊ. ಅಮಾಯಕರನ್ನ ಹೇಡಿಯಂತೆ ಹಿಂಸೆ ಕೊಡ್ತಿರಲ್ಲಾ ನಾಚಿಕೆಯಾಗುವುದಿಲ್ಲವೆ ನಿಮ್ಮ ಜನ್ಮಕೆ, ಆ ಥೂ! (ಅವನ ಮುಖದ ಮೇಲೆ ಉಗಿಯುವನು)

ಕರ್ನಲ್‌ಮ್ಯಾಕಿ : ಹ.. ಹ... ನಾವು ಸಾಮ್ರಾಜ್ಯ ಕಟ್ಟಲು ಬಂದವರು. British Empire. ಅದಕ್ಕೆ ನಿಮ್ಮಂತ Dog ಗಳನ್ನು ಬಲಿ ಕೊಡಬೇಕಲ್ಲ. ನಿನ್ನಂತ ನಾಯಿ ನರಿಗಳನ್ನು ಕೊಂದು ನರಬಲಿಯನು ಪೂರ ಮಾಡಿ ನಂತರ ಸೋಲಿಸಬೇಕು.

ಭೀಮ : ಒಂದಲ್ಲ ಒಂದು ದಿನ ನಿನಗೂ ಈ ಕಾಲ ಬಂದೆ ಬರುತ್ತೆ. ಇವತ್ತೇನೊ ಗೆದ್ದೆ ಅಂತ ಖುಷಿಪಡ್ತಿದ್ದಿಯಾ ನಾಳೆ

ಸೋಲಾಗುತ್ತೆ. ಆದಾಗ ನೀನು ನನ್ನ ಹಾಗೆ ಮಂಡಿಯೂರಿ ದೈನ್ಯತೆಯಿಂದ ಜೀವಕ್ಕಾಗಿ ಪರಿತಪಿಸುತ್ತಿ.

ಕರ್ನಲ್‌ಮ್ಯಾಕಿ : ಸೋಲು Never ನಮಗೆ ಸೋಲು ಅನ್ನುವುದೇ ಇಲ್ಲ.. ಸೈನಿಕರೆ ಅವನ ಇನ್ನೊಂದು ಕಣ್ಣು ಕಿತ್ತು ಬೆಟ್ಟದ ಮೇಲಿಂದ ದೂಕಿಬಿಡಿ. ಇಂಥ ಕ್ರಿಮಿಕೀಟಗಳು ಬದುಕಿ ಏನು ಮಾಡುತ್ತವೆ ಈ ಭೂಮಿ ಮೇಲೆ. ಭೀಮನ ಗೆಲೆಯಗೆ ಬಾಯ್ ಹೇಳು ಅವನು ಬದುಕಿ waste ನಿಮ್ಮಂತವರಿಗೆ ಸಾವು ಗತಿ.

ಭೀಮ : ಥಾವು.. ಬೇಡ, ಬಿಡ್ರಿ ಅವನನ್ನ. ಕ್ಷಮಿಸು ಗೆಳೆಯ ಈ ಪಾಪಿಗಳ ರಾಜ್ಯದಲ್ಲಿ ನೆಮ್ಮದಿಯಿಂದ ಒಂದಾಗಿ ಬದುಕದ ನಾವುಗಳು ಮೇಲೆ ಆದರೂ ಒಟ್ಟಿಗೆ ಬದುಕೋಣ. ನನ್ನ ಅಸಹಾಯಕತೆಗೆ ಧಿಕ್ಕಾರ.. ನಿಮ್ಮನ್ನ ಕಾಪಾಡದೆ ಹೇಡಿಯಾದೆ.

ಸೈನಿಕ : ಹೂಂ.. ಎಳೆಯಿರಿ ಇವನನು

ಕರ್ನಲ್‌ಮ್ಯಾಕಿ : Take him ತಳ್ಳಿ ಮೇಲಿಂದ, ಈಗ ಹೇಳು ಯಾಕೆ ಬಂದಿದ್ದೆ.

ಭೀಮ : ಏಯ್, ಕೆಂಪುಮುಖದ ಕುನ್ನಿ ನನ್ನ ಗೆಳೆಯರನ್ನ ಕೊಂದು ನನಗೆ ಧೈರ್ಯತಂದೆ. ಅವರು ಬದುಕಿದ್ದರೆ ಅವರ ಜೀವಕ್ಕಾಗಿ ಹೆದರುತ್ತಿದ್ದೆ. ಎಂಥ ಮುಠ್ಠಾಳ ಕಣಯ್ಯ ನೀನು. ಒಬ್ಬನ ದೌರ್ಬಲ್ಯ ಅವನ ಸಂಗಡಿಗರು ಅನ್ನುವ ಸಾಮಾನ್ಯ ಜ್ಞಾನವಿಲ್ಲದೆ ಭಾರತವನ್ನ ಆಳೋದಕ್ಕೆ ಹೊರಟಿಯಲ್ಲ ನಿನ್ನ ಮಕಕ್ಕೆ ಬೆಂಕಿ ಹಾಕ.

ಕರ್ನಲ್‌ಮ್ಯಾಕಿ : Nonsense ನಿನ ಸಂಗಡಿಗರನ್ನು ಮುಗಿಸಿ ನಿನ್ನ ಸುಲಭವಾಗಿ ಸಾಯುಸುತ್ತೇವೆ ಅಂದುಕೊಂಡೆಯ, No ನಿನ್ನ ಚರ್ಮವನು ಇಂಚು, ಇಂಚು ಕಿತ್ತು ನರಕಯಾತನೆ ಕೊಡುತ್ತೇವೆ. Understand. ಮತ್ತೊಮ್ಮೆ ಯಾವ Indians ಬ್ರಿಟಿಷರ ಕಡೆಗೆ ಕಣು ಹಾಕಬಾರದು ಹಂಗೆ ಮಾಡುವೆ.

ಭೀಮ : ಹೇಡಿಯಾದ ನೀನು ಇನ್ನೇನು ಮಾಡಬಲ್ಲೆ... ಎದುರು ನಿಂತ ಯುದ್ಧ ಮಾಡುವ ತಾಕತ್ತು ಇಲ್ಲದ ನೀನು ಹಿಂದಿನಿಂದ ಗೆಲ್ಲುತ್ತಿಯಾ ಹೇಡಿ.

ಕರ್ನಲ್‌ಮ್ಯಾಕಿ : ಹೇಡಿ ಅಂದರೆ... what ಯಾರಲ್ಲಿ, what is ಹೇಡಿ?

ಸೈನಿಕ : Caward...

ಕರ್ನಲ್‌ಮ್ಯಾಕಿ : You call me caward, ನಾನು ಹೇಡಿ (ಚರ್ಮ ಕೀಳುವನು) ಹೇಳು ಯಾಕೆ ಬಂದಿದ್ದೆ. ಟಿಪ್ಪು ನಿನ್ನನ್ನು ಏಕೆ ಕರೆಸಿದ. ಕಾಡಲಿ ನಾಕು ಜನರ ಕಟಿಕೊಂಡು ನಮ್ಮನು ಸೋಲಿಸುವ ಆಲೋಚನೆ ಮಾಡ್ತಿದ್ದಾನ ಟಿಪ್ಪು ಹೇಲು. Come on ..ಬಾಯಿ ಬಿಡು.

ಭೀಮನಾಯ್ಕ : ಯಾಡಿ ಏ.. ಬಾ.. ನನ್ನ ಜೀವದ ಕೊನೆಯ ಉಸಿರಿರುವವರೆಗೂ ಹೇಳುವುದಿಲ್ಲ. (ಅಲ್ಲೇ ಮೂರ್ಛೆ ಹೋಗುವನು) ಹೀಗೆ ಹಿಂಸೆ ಕೊಡುವ ಬದಲು ಸುಡು ನಿನ್ನ ಬಂದೂಕಿನಿಂದ.

* * *

ದೃಶ್ಯ ೫

ಸನ್ನಿವೇಶ ೩

ಜನರಲ್‌ಹ್ಯಾರಿಸ್ : What is the news ಮ್ಯಾಕಿ, ಏನಾದರೂ ಬಾಯಿಬಿಟ್ಟ.

ಕರ್ನಲ್‌ಮ್ಯಾಕಿ : No my lord he is so stubarn and tuff guy. ಅವನ ಕಡೆಯವರನ್ನು ಒಬ್ಬೊಬ್ಬರಿಗೆ ಸಾಯಿಸಿದರೂ ಹೇಳಲಿಲ್ಲ.

ಜನರಲ್‌ಹ್ಯಾರಿಸ್ : You fool ಅವರನ್ನು ಉಳಿಸಿ ಹಿಂಸೆ ಕೊಟ್ಟರೆ ಬಾಯಿ ಬಿಡುತ್ತಿದ್ದ. ಎಲ್ಲಿ ಅವನು ನಾನು ಪ್ರಯತ್ನಿಸುತ್ತೇನೆ, ಭೀಮ like a good boy ಎಲ್ಲಾ ಒಪ್ಪಿಕೊ, ನಿನ್ನನ್ನು ಬದುಕಿಸುತ್ತೇವೆ.

ಭೀಮ : (ಮಾತಾಡಲು ಶಕ್ತಿ ಇಲ್ಲದೆ) ನೀನೇನು ಬದುಕಿಸುತ್ತಿಯೋ.. ಆಂ, ಸ್ವಲ್ಪ ಹೊತ್ತಿನ ಮುಂಚೆ ನಿನ್ನ ಸೈನಿಕರು ಗುಂಡು ಹೊಡೆಯದಿದ್ದರೆ ನಾನು ನಿನ್ನ ಬದುಕಿಸ ಬೇಕಿತ್ತು. ಆದರೆ ಭಗವಂತನ ಆಟ ಭಗವಂತ ಬದುಕಿಸಬೇಕು.

ಜನರಲ್‌ಹ್ಯಾರಿಸ್ : ನೋಡು ಭೀಮ, ನಿನ್ನ ಬಿಟ್ಟು ಬಿಡುತ್ತಾನೆ. ಟಿಪ್ಪುವಿನ ಎದುರಲ್ಲಿ ಅವನು ಹೇಳಿದನು ಹೇಳಿಬಿಡು.. ಹೂಂ ಆಮೇಲೆ ನಿನ್ನನ್ನು ಗೌರವದಿಂದ ಬಿಟ್ಟುಬಿಡುತ್ತಾನೆ. ಒಪ್ಪಿಕೊ.. Agree my boy. ಅವನ ಸಲುವಾಗಿ ನೀನು ಜೀವ ಕೊಡುವುದು ಬೇಡಾ.

ಕರ್ನಲ್‌ಮ್ಯಾಕಿ : No my lord he is very tuff. ಅವನು ಹೀಗೆ ಕೇಳುವುದಿಲ್ಲ.. (ಚಿಮಟದಿಂದ ಚರ್ಮವನ್ನು ಕೀಳುತ್ತಾನೆ ಭೀಮ ಸಹಿಸದ ನೋವಿಂದ ಚಿತ್ಕಾರ ತೆಗೆಯುತ್ತಾನೆ.) ಹ್ಹಾ ಹ್ಹಾ ನೋವಾಗತ್ತು ನರಲು, ಇನ್ನೂ ಜೋರು.

ಭೀಮ : ಯಾ.. ಬಾ.. ಕೊಂದುಬಿಡ್ರೋ... ಯಾಕೆ ಹಿಂಸೆ ಕೊಡ್ತಿರಾ.

ಜನರಲ್‌ಹ್ಯಾರಿಸ್ : ಸೈನಿಕರೆ ನೀರು ಕೊಡಿ, ಅವನನ್ನು ಸಾಯಲು ಬಿಡಬೇಡಿ. ಅಷ್ಟು ಬೇಗನೆ ಅವನ ಕತೆ ಮುಗಿದರೆ. ನಮಗೆ ಮಜಸಿಗುವುದಿಲ್ಲ.

ಜನರಲ್‌ಮ್ಯಾಕಿ : ಅವನು bastard my lord ಅವನು ಇಷ್ಟುಬೇಗ ಸಾಯುವುದಿಲ್ಲ. ಅವನನ್ನು ಹೀಗೆ ಹಿಂಸೆಕೊಡಿ.

ಜನರಲ್‌ಹ್ಯಾರಿಸ್ : Keep him alive. Let all sympathievs of Tippu see him. ಅವರನ್ನು ಎಳೆದುತನ್ನಿ.

ಒಬ್ಬ : ಅಯ್ಯೋ... ಶಿವ ಇನ್ನೂ ಯಾಕೆ ಬದುಕಿಸಿಯಾ. (ಅವನ ಮಾಂಸ ಹೊರಗೆ ಬಿದ್ದಿದೆ, ರಕ್ತ ಜಿನುಗುತ್ತಿದೆ.)

ಇನ್ನೊಬ್ಬ : ಇದು ಅನ್ಯಾಯ ಅವನನ್ನು ಕೊಂದುಬಿಡಿ. ಇವನಿಗೆ ಅವನ ಮೇಲೆ ಮರುಕ ಬಂತು. Listen ಯಾರಿಗಾದರು sentiment ಇದರೆ ಅವರಿಗೂ ಇದೆ ಗತಿ.

ಜನರಲ್‌ಮ್ಯಾಕಿ : You pig ಅವನಲ್ಲ ನೀನು ಸಾಯಿ (ಗುಂಡು ಹೊಡೆಯುವನು). Indian bastarders are sentimental

ಭೀಮ : ಹೇ, ಸೇವಾಲಾಲ್, ಸಾವನ್ನ ಕೊಡಬಾರದೆ. ಈ ಚಿತ್ರಹಿಂಸೆ ತಾಳಲಾರೆ. ಇಡೀ ದೇಹದ ಚರ್ಮವನ್ನು ಕಿತ್ತಾರ ತಾಳಲಾರೆ.. ತಾಳಲಾರೆ...

ಸೈನಿಕ : My lord ಭೀಮನಾಯ್ಕ ಸತ್ತ...

ಜನರಲ್‌ಹ್ಯಾರಿಸ್ : What ದೇಶಭಕ್ತ ಇಷ್ಟು ಬೇಗ ಸತ್ತ... Bastered ಇನ್ನು ಬದುಕ ಬೇಕಿತ್ತು. ಅವನಿಗೆ ಚಿತ್ರಹಿಂಸೆ ಕೊಡುವುದು ತಪ್ಪಿತು.

ಕರ್ನಲ್‌ಮ್ಯಾಕಿ : Oh! my god... ನಾಕುದಿನ ಅವನ ಚರ್ಮವನ್ನು ಇಂಚಿಂಚು ಸುಲಿದರು. ಬಾಯಿ ಬಿಡಲಿಲ್ಲಾ. He is great. ನಿಜವಾಗಿಯೂ you are great ಭೀಮ. ಹಿಂಸೆಕೊಟ್ಟರು ಬಾಯಿ ಬಿಡಲಿಲ್ಲಾ ಟಿಪ್ಪು ನಿನ್ನ ಚೆನ್ನಾಗಿ ಬೆಳೆಸಿದ್ದಾನೆ.

ಜನರಲ್‌ಹ್ಯಾರಿಸ್ : You are praising him, the traitor he deserve this. ಅವನ ದೇಹವನ್ನು ಅರಮನೆ ಮುಂದೆ ನೇತುಹಾಕಿ, ದೇಶಭಕ್ತರಿಗೆ ಆಗುವ ಗತಿಯನ್ನು ಜನ ಕಣ್ಣತುಂಬ ನೋಡಲಿ. ದೇಶಭಕ್ತರ ಎದೆ ನಡುಗಲಿ.

ಸೈನಿಕ : My lord... ಮತ್ತೆ ಯಾರು ಬ್ರಿಟಿಷರ ವಿರುದ್ಧ ಮಾತಾಡಬಾರದು.

* * *

ದೃಶ್ಯ ೫

ಸನ್ನಿವೇಶ ೪

ಜನ : ಅಯ್ಯೋ ಪಾಪ! ಈ ಹೆಣ ಯಾರದಂತ ಗೊತ್ತೇ ಆಗುವುದಿಲ್ಲ. ದೂರ ಸರಿಯಿರಿ.. ಯಾರೊ ಕುದುರೆ ಸವಾರ...

ಸೈನಿಕ : ಯಾ.. ಅಲ್ಲಾ.. ಇಲ್ಲಿಲ್ಲಾ... ಭೀಮನಾಯ್ಕ... ಎಂಥ ತ್ಯಾಗ ಮಾಡಿದೆ ದೋಸ್ತ್ ಖುದಾಹಪೀಜ್... ಈ ಸುದ್ದಿ ಬಾದಾಷಗೆ ಹೇಳಬೇಕು. (ಕುದುರೆ ಸವಾರ ಒಳಗೆ ಹೋಗುವನು)

ಬ್ರಿಟಿಷ್ ಸೈನಿಕ : ಸರಿಯಿರಿ.. ಯಾರು ಟಿಪ್ಪುಗೆ ಸಹಾಯ ಮಾಡುತ್ತಿರೋ ಅವರಿಗೆ ಇದೇ ಗತಿಯಾಗುತ್ತೆ. ಯಾರಾದರೂ ಬ್ರಿಟಿಷರನ್ನ ವಿರೋಧಿಸಿ, ಟಿಪ್ಪುಗೆ ಸಹಾಯ ಮಾಡಿದಿರೊ ನಿಮಗು ಇದೆ ಗತಿಯಾಗುತ್ತೆ. ಹುಷಾರ್.

ಜನ : ಈ ದುಷ್ಟರ ಸಹವಾಸ ಬೇಡ ಹೊರಡಿ ಹೊರಡಿ...

ಸೈನಿಕ : ಕೇಳಿ, ಬ್ರಿಟಿಷ್‌ರಿಗೆ ಸಹಾಯ ಮಾಡಿದರೆ ನಾಳೆ ನೀವು ನೆಮ್ಮದಿಯಿಂದ ಇರಬಹುದು. ಬ್ರಿಟೀಷರು ಕೆಟ್ಟವರಲ್ಲ. ಅವರು ನಮ್ಮನ್ನ ಚೆನ್ನಾಗಿ ಆಳುವ ಪ್ರಭುಗಳು. ಅವರಿಗೆ ಸಹಾಯ ಮಾಡಿ.

ಮುದುಕ : ಹೆಂಗೆ ಅಲ್ಲಿ ನೇತಾಡುತ್ತಿದೆಯಲ್ಲಾ ದೇಶಪ್ರೇಮಿಯ ದೇಹ ಹಾಗ. ಕಾಲ ಎಕ್ಕುಟಿ ಹೋಯಿತು. ತಾಯಿ ನಾಡಿಗೆ ಹೋರಾಡಿದವನಿಗೆ

ಚರ್ಮ ಸುಲಿದು ನೇತಾಕಿರೊ ಬಡ್ಡಿ ಹೈಕಳು ನಮ್ಮನ್ನ ಕಾಪಾಡ್ತಾರೆ. ಈ ಹುಚ್ಚು ಭ್ರಮೆಯಲ್ಲಿ ಇರಬೇಡ್ರಿ.

ಸೈನಿಕ : Beat him bastard ನಮ್ಮ ವಿರುದ್ಧ ಮಾತಾಡ್ತಿದ್ದಾನೆ.

ಮುದುಕ : ಅಯ್ಯೋ... ಅವನ ಚರ್ಮ ಸುಲಿಯಿರಿ, ಏನಂದ್ಕೊಂಡವ್ನೆ. ಸತ್ತೆ. ಹೊಡಿರೊ, ನಿಮ್ಮ ಅಧಿಕಾರಕ್ಕಿಂತ ಸಾವೆ ಲೇಸು.

* * *

ದೃಶ್ಯ ೫

ಸನ್ನಿವೇಶ ೫

ಟಿಪ್ಪುಸುಲ್ತಾನ್ : ಯಾ.. ಅಲ್ಲಾ... ಎಂಥ ಸುದ್ದಿ ತಂದೆ ಅಫ್ಜಲ್ ಚಾಚ. ಭೀಮ, ಸಹೋದರ.. ನಿನ್ನ ತ್ಯಾಗಕ್ಕೆ ಕಣ್ಣೀರಿಡಲು ಆಗದ ಪರಿಸ್ಥಿತಿಯಲ್ಲಿದ್ದೇನೆ.. ಇಲ್ಲ ಈ ರಹಸ್ಯ ಬ್ರಿಟಿಷರಿಗೆ ಹೇಗೆ ತಿಳಿಯಿತು. ಯಾರು ? ಛೆ, ಎಂಥ ಪರಿಸ್ಥಿತಿ. ಅವನ ಮುಖವನ್ನು ನೋಡದ ಪರಿಸ್ಥಿತಿ ಬಂತಲ್ಲಾ.

ಮೀರ್‌ಸಾಧಕ್ : ಹೂಜೂರ್.. ನನಗನಿಸುತ್ತೆ ನಮ್ಮೊಳಗೆ ಯಾರೊ ಬ್ರಿಟಿಷರ ಪರ ಕೆಲಸ... ಮಾಡುತ್ತಿದ್ದಾರೆ. ಅವರನ್ನ ಪತ್ತೆ ಹಚ್ಚಿ ಸರಿಯಾಗಿ ಶಿಕ್ಷೆ ಕೊಡಬೇಕು. ತಾವು ಅಪ್ಪಣೆ ಮಾಡಿದರೆ

ಟಿಪ್ಪುಸುಲ್ತಾನ : ಆ.. ಆದ್ಮಿ ನೀವೆ ಯಾಕೆ ಆಗಿರಬಾರದು ಹೊರಡಿ ಮೊದಲು ಆ ಕೆಲಸವನ್ನು ಮಾಡಿ.

ಮೀರ್‌ಸಾಧಕ್ : ಪ್ರಭು, ನಾನು ನಿಮ್ಮ ಗುಲಾಮ, ಸೇವಕ, ನಾನು ಹಾಗೆ ಮಾಡಲು ಸಾಧ್ಯವೆ? ತಾವು ಅನ್ಯತ ಭಾವಿಸಬಾರದು. ನಿಮ್ಮ ನಮಕ್ ತಿಂದು ಭಗವತ್ ಮಾಡಲಾಗುವುದೆ. ಅಲ್ಲಾ ನೋಡ್ತಾನೆ.

ಟಿಪ್ಪುಸುಲ್ತಾನ : ಇನ್ನೂ ತಡ ಬೇಡ, ಯಾರು ಆ ವಿದ್ರೋಹಿ ಪತ್ತೆಹಚ್ಚಿ ತಕ್ಕ ಶಿಕ್ಷೆಯನ್ನು ಕೊಡಿ. ಭೀಮನ ಸಾವಿಗೆ ಕಾರಣನಾದವನು ಬದುಕಬಾರದು. ಅವನ ಶಿರಛೇದನವಾಗಲಿ.

ಮೀರ್‌ಸಾಧಕ್ : ಆಯ್ತು ಹೂಜೂರು ನಾಳೆ ಬೆಳಕು ಹರಿಯುವುದರಲ್ಲಿ ಪತ್ತೆ ಹಚ್ಚುತ್ತೇನೆ. ಆ ಹರಾಮ್‌ಖೋರನನ್ನು ನಿಮ್ಮ ಎದುರಿಗೆ ಹಾಜರು

ಪಡಿಸುತ್ತೇನೆ. ಅವನು ಯಾರೆ ಇದ್ದರು ಸರಿ, ಎಲ್ಲೆ ಇದ್ದರೂ ಸರಿ ಬದುಕಿಸುವುದಿಲ್ಲ. ತಮ್ಮ ಅಪ್ಪಣೆಯಂತೆ ಶಿಕ್ಷೆಕೊಡುತ್ತೇನೆ. ಖುದಾಹಪೀಜ್.

ಟಿಪ್ಪುಸುಲ್ತಾನ : ಅಫ್ಜಲ್‌ಖಾನ್‌ರನ್ನು ನಿಮ್ಮ ಸಂಗಡ ಸೇರಿಸಿಕೊಳ್ಳಿ, ಭೀಮನ ಹತ್ಯೆಗೆ ಪ್ರತಿಕಾರ ತೆಗೆದುಕೊಳ್ಳಲೇ ಬೇಕು. ಅಷ್ಟು ಸುಲಭವಾಗಿ ಬ್ರಿಟಿಷರಿಗೆ ಮಣಿಯುವವನೆ ಅಲ್ಲಾ ಏನೋ ಮೋಸವಾಗಿದೆ, ಏನದು ಮೋಸ ನನಗೆ ಗೊತ್ತಾಗಲೇಬೇಕು.ಇಲ್ಲ ನಿಮ್ಮ ತಲೆ ದಂಡ ತೆಗೆದುಕೊಳ್ಳ ಬೇಕಾಗುತ್ತದೆ.

ಮೀರ್‌ಸಾಧಕ್ : ಅಫ್ಜಲ್‌ಖಾನ್ ಏಕೆ ಪ್ರಭು ನಾನೇ ಪತ್ತೆಹಚ್ಚುತ್ತೇನೆ. ಸೈನ್ಯದ ಕೆಲಸ ಬಹಳ ಇದೆ ಅವರು ಅದನ್ನು ಮಾಡಲಿ. ನಾನಿದ್ದಿನಲ್ಲಾ

ಟಿಪ್ಪುಸುಲ್ತಾನ : ಯಾಕೆ ಅವರಿದ್ದರೆ ನಿಮ್ಮ ಕೆಲಸಕ್ಕೆ ಏನಾದರೂ ಅಡ್ಡಿಯಾಗುವುದೆ. (ಸ್ವಗತ) ಮೀರ್ ಸಾಧಕ್ ನಿನ್ನಂತ ಹರಾಮ್ ಖೋರ್, ನಮಕ ಹರಾಮ್ ನಿಂದಾಗಿಯೆ ನಮಗೆ ಈ ಅವಸ್ಥೆ ಬಂದಿರುವುದು ನನಗೆ ಗೊತ್ತು. ಹೊರಡಿ ಅಫ್ಜಲ್ ಚಾಚ ನಿಮ್ಮ ಜೊತೆ ಇರ್ತಾರೆ.

ಮೀರ್‌ಸಾಧಕ್ : ಇಲ್ಲಿ ಪ್ರಭು.. ಹಾಗೇನು ಇಲ್ಲ ಹಿರಿ ಜೀವಿ ಅಂದ್ಕೊಂಡೆ. ತಾವು ಅಪ್ಪಣೆ ಮಾಡಿದರೆ ಆಯಿತು. ಅವರು ಇರಲಿ ಬಿಡಿ. (ಸ್ವಗತ) ಟಿಪ್ಪು ಎಷ್ಟು ದಿನ ನಿನ್ನ ಪಾಪದಕೊಡ ತುಂಬಿದೆ. ಭೀಮನ ಕಳುಹಿಸಿದ ಮೇಲೆ ಕೆಂಡ ಮಂಡಲವಾಗಿರುವ ಬ್ರಿಟಿಷರು ಯಾವಾಗ ಬೇಕಾದರು ನಿನ್ನ.......

ಅಫ್ಜಲ್‌ಖಾನ್ : ವಯಸ್ಸಾದರೂ ದೇಶಕ್ಕಾಗಿ ಮಡಿಯುವ ಅದಮ್ಯ ಚೈತನ್ಯವಿದೆ. ಬೇರೆಯವರಂತೆ ಭಗಾವತ್ ಮಾಡುವ ಬುದ್ದಿ ಇಲ್ಲ. ಮಹಾಪ್ರಭು ಯೋಚನೆ ಮಾಡಿದರೆ ಅದರಲ್ಲಿ ಒಳ್ಳೆಯದೆ ಇದೆ.

* * *

ದೃಶ್ಯ ೫

ಸನ್ನಿವೇಶ ೬

ಅಫ್ಜಲ್‌ಖಾನ್ : ಬ್ರಿಟಿಷರ ಕಣ್ಣು ತಪ್ಪಿಸಿ ಹೇಗಾದರೂ ಭೀಮನಾಯ್ಕ ದೇಹವನ್ನು ಇಳಿಸಿ ಅವನ ತಾಂಡಕ್ಕೆ ಕಳುಹಿಸಬೇಕು. ಕೊನೆಯ ಸಲ ತಾಂಡವನ್ನ ರಕ್ಷಿಸಿದ ಈ ತ್ಯಾಗಭೂಮಿಯನ್ನು ರಕ್ಷಿಸಿದ ಈ ವೀರನ ಮುಖವನ್ನು ತಾಂಡದ ಮಂದಿ ನೋಡಲೆ ಬೇಕು. ಹೇಗಾದರು ಮಾಡಿ ಇದನ್ನು ಒಯ್ಯಲೇ ಬೇಕು.

ಸೈನಿಕ 1 : ಹೂಜೂರು, ಗಂಡಾಂತರವನ್ನು ಏಕೆ ಕೊಂಡುಕೊಳ್ಳಬೇಕು. ಬ್ರಿಟಿಷರಿಗೆ ಗೊತ್ತಾದರೆ ನಮ್ಮ ತಲೆ ನಮ್ಮ ಬುಜದ ಮೇಲೆ ಇರುವುದಿಲ್ಲ. ಒಮ್ಮೆ ಯೋಚಿಸಿ.

ಅಫ್ಜಲ್‌ಖಾನ್ : ಅವನು ದೇಶ ಪ್ರೇಮಿ. ದೇಶಕ್ಕಾಗಿ ಮಡಿದ ಯೋಧನಿಗೆ ನಾವು ಅಷ್ಟು ಮಾಡದಿದ್ದರೆ. ನಮ್ಮದು ಒಂದು ಬದುಕೆ ದೇಶಕ್ಕಾಗಿ ಅವನು ಪ್ರಾಣವನ್ನೆ ಕೊಡಲಿಲ್ಲವೆ, ಬಹುದ್ದೂರ್ ಶಿಫಾಯಿ ಹೀಗೆ ಯೋಚನೆ ಮಾಡುವುದಿಲ್ಲ.

ಸೈನಿಕ 2 : ಬ್ರಿಟಿಷರಿಗೆ ತಿಳಿದರೆ ಅವರ ತಾಂಡವನ್ನೇ ಧ್ವಂಸ ಮಾಡುತ್ತಾರೆ. ಯೋಚನೆ ಮಾಡಿ. ಪಾಪ ಒಂದು ಹೆಣದ ಬದಲಿಗೆ ಹೆಣದ ರಾಶಿಯನ್ನ ಹಾಕುವುದು ಬೇಡ.

ಅಫ್ಜಲ್‌ಖಾನ್ : ಗೊತ್ತಾದರೆ. ಗೊತ್ತಾಗದಂತೆ ಮಾಡಬೇಕು. ಭೀಮನ ಪ್ರಾಣಕ್ಕೂ ಮುಕ್ತಿ ಸಿಗಬೇಕು.

ಸೈನಿಕ : ಅಂದರೆ, ಗೊತ್ತಾಗದಂತೆ ಮಾಡುವುದು.

ಅಫ್ಜಲ್‌ಖಾನ್ : ನನ್ನ ಬಳಿ ಉಪಾಯವಿದೆ, ಹೇಗೂ ಭೀಮನ ದೇಹ ಕೊಳೆಯುತ್ತಿದೆ. ನಮ್ಮ ಸ್ಮಶಾನದಲ್ಲಿರುವ ಒಂದು ದೇಹವನ್ನು ತಂದು ಇಲ್ಲಿ ಕಟ್ಟಿ ಇದನ್ನು ಅವನ ತಂದೆ-ತಾಯಿಗೆ ತಲುಪಿಸುವ. ಮಗನ ದೇಹವನ್ನು ನೋಡಿಯಾದರೂ ನೆಮ್ಮದಿಪಡಲಿ. ಕೊನೆಗಾಲದಲ್ಲಿ ಅವರಿಗೆ ಸಹಾಯಮಾಡಲಿಲ್ಲಾ, ಛೇ....

ಸೈನಿಕ : ಹರೆಯದ ಮಗನ ದೇಹ ನೋಡಿ ಎದಿಹೊಡೆದು ಚೂರು ಚೂರಾಗುವುದರಲ್ಲಿ ಯಾವ ಸಂಶಯವೇ ಇಲ್ಲ. ಪಾಪಿಗಳು ಇಡೀ ಮೈಚರ್ಮ ಸುಲಿದು ವಿಕಾರಗೊಳಿಸಿದ್ದಾರೆ. ಪ್ರಭು ಮನುಷ್ಯ ಇಷ್ಟು ಕ್ರೂರಿ ಇರಲು ಸಾಧ್ಯನ.

ಅಫ್ಜಲ್‌ಖಾನ್ : ಮಾತು ಬೇಡ. ಭೀಮನ ಋಣದಲ್ಲಿದ್ದೀನಿ. ಈ ರೂಪದಲ್ಲಾದರೂ ತೀರಿಸಬೇಕು. ಪಾಪದ ಹುಡುಗ ವ್ಯಾಪಾರ ಮಾಡಿಕೊಂಡು ಬದುಕಿದ್ದ. ಸುಲ್ತಾನರ ಖಾಸ್ ಆದ್ಮಿಯಾಗಿದ್ದ. ಹೀಗೆ ಕಣಪ್ಪ ಯಾರದೊ ಪಿತೂರಿಗೆ ಯಾರೊ ಬಲಿಯಾಗುತ್ತಾರೆ. ನಮ್ಮ ಒಳಗಿನ ಶತ್ರುವಿನ ಒಳಸಂಚಿನಿಂದ ಯೋಧ ಭೀಮ ಪ್ರಾಣ ಕಳೆದುಕೊಂಡ.

ಸೈನಿಕ : ಹೂಜೂರು ಕೆಲಸವನ್ನು ರಾತ್ರಿ ಕತ್ತಲೆಯೊಳಗೆ ಮಾಡುವುದು ಒಳ್ಳೆಯದು. ಮಂದಿಯಾರು ಈ ಕಡೆ ಬರುವುದಿಲ್ಲ.

ಅಫ್ಜಲ್‌ಖಾನ್ : ಹೌದು ರಾತ್ರಿ ಎರಡನೇಯ ಪಹರಿಗೆ ಕೆಲಸ ಮುಗಿಯಬೇಕು. ರಥದ ವ್ಯವಸ್ಥೆಯನ್ನು ನಾನು ಮಾಡುತ್ತೇನೆ. ಪಾಂಡುಪರ ಮಾರ್ಗವಾಗಿ ದಟ್ಟ ಅಡವಿಗೆ ಸೇರಿಕೊಂಡರೆ ಯಾರು ಹಿಡಿಯಲಾರರು. ಒಮ್ಮೆ ಕಾಡು ಪ್ರವೇಶಿಸಿದರೆ ಒಳಗೆ ದಾರಿಗಳು ನೂರ

ಸೈನಿಕ : ಆಯ್ತು ಒಡೆಯ ನಿಮ್ಮಪ್ಪಣೆ.

* * *

ದೃಶ್ಯ ೫

ಸನ್ನಿವೇಶ ೭

ಸೈನಿಕ 1 : ಖಾನ್‌ಸಾಹೇಬರು ಯಾಕೆ ತಡ ಮಾಡಿದರು. ಈಗ ಸರಿಯಾದ ಸಮಯವಿತ್ತು. ಬ್ರಿಟಿಷರ ಸೈನವೂ ಕಾಣುತ್ತಿಲ್ಲ ಮಂದಿಗೂ ಗೊತ್ತಾಗುವುದಿಲ್ಲ.

ಸೈನಿಕ 2 : ತಮ್ಮ ಕೆಂಪುಮಂದಿನ ಆಟು ಹಡ್ಡಂತ ತಿಳಿಬ್ಯಾಡ ಈಗ, ಆಗ ಅನ್ನಾಕ ಹೋಗಬ್ಯಾಡ ಯಾವಾಗಲೂ ಕಾಳಜಿ ಪೂರ್ವಕ ಇರ್ತಾರ. ಈಗ ನಾವು ಮಾಡ್ತಿರೋದು ಏನಾರ ಕಂಡುಹಿಡಿದ್ರ ನಮ್ಮ ಗತಿನೂ ಇದ ಆಕೈತಿ.

ಸೈನಿಕ : ಅಂದಂಗ ನಾವು ತಂದ ಹೆಣ ಎಲ್ಲಿ?

ಸೈನಿಕ 2 : ನಿನ್ನ ಬಾಜೂಕ

ಸೈನಿಕ : ಎಲ್ಲೋ ನನ್ನ ಬಾಜೂಕ ಕಾಣವಲ್ದು.

ಸೈನಿಕ 2 : ಸರಿನೋಡು, ಹೆಣಗಳು ಓಡಾಡ್ತವಂತ. ಇದು ಎದ್ದು ಅಡ್ಡಾಡಾಕ ಹ್ವಾದಗೀದೀತು.?

ಸೈನಿಕ : ಏಯ್, ಥೂ, ಗಪ್ಪಾಗು. ಯಾಕಿಂಗ ಸುಕಾ ಸುಮ್ಮನೆ ಹೆದರಿಸ್ತಿಯಾ

ಸೈನಿಕ 2 : ಅರ್ಧ ಘಳಿಗೆಯೊಳಗ ಖಾನ್ ಸಾಹೇಬ ಕುದುರೆ ಗಾಡಿ ಬರುತ್ತದೆ ಅಷ್ಟರಲ್ಲಿ ಈ ಕೆಲಸ ಮುಗಿಬೇಕು ಇಲ್ಲ, ನಮ್ಮ ಸ್ಥಿತಿ ಹಿಂಗ ಆಗೋದು. ನೆಪ್ಪಿರಲಿ ನಿನಗ.

ಸೈನಿಕ : ಗಾಡಿಸದ್ದು ಕೇಳಾಕ ಹತ್ತಿಲ್ಲ ನಿನಗ.

ಸೈನಿಕ 2 : ಹೌದು ಇದೆ ಇರಬೇಕು, ಅದನ್ನ ಬಿಚ್ಚಿ ಇದನ್ನ ಕಟ್ಟು.

ಸೈನಿಕ : ಮದಲು ಇದನ್ನು ಮೇಲೆ ಕಟ್ಟಿ ಅದನ್ನು ಇಳಿಸೋಣವೊ. ಇಲ್ಲ.

ಸೈನಿಕ 2 : ಭಾರಿ ಶ್ಯಾಣ ಅದಿ ನೋಡಲೇ ನೀನು ಎರಡ ಎರಡು ಹೆಣಗಳನ್ನು ನೋಡಿದ್ರ ಮಂದಿ ಬಿಟ್ಟಾರೇನು. ಮದ್ಲು ಬಿಚ್ಚಿ ಮೇಲಿಂದನ್ನ ನಂತರ

ಸೈನಿಕ : ಆಯ್ತು...

ಅಫ್ಜಲ್‌ಖಾನ್ : ಗಡಾನ ಮಾಡ್ರಿ. ಬೆಳಕ ಹರಿತಂದ್ರ ನಮ್ಮ ಕೆಲ್ಸ ಆಗಾಕಿಲ್ಲ. ಹೂಂ ಮೆಲ್ಲಗೆ. ಕುದುರೆಗಾಡಿಯಲ್ಲಿ ಛೇ.. ಏನು ಕೊಳತು ಹೋಗೈತಿ. ಕ್ಷಮಿಸು ಬೇಟಾ ಭೀಮನಾಯ್ಕ. ನಿಮದುಕೆ ಈ ಸ್ಥಿತಿ ಬರಬಾರದಾಗಿತ್ತು. ತುಂಬು ಗರ್ಭಿಣಿಯಾದ ಅವನ ಹೆಂಡತಿಗೆ ಏನು ಹೇಳುವುದು. ಎಂಥ ಕ್ರೂರಿಗಳು ಭೀಮನ ಹೆಣ ಗುರ್ತುಸಿಗದಂತೆ ಚರ್ಮ ಸುಲಿದು ವಿಕಾರ ಗೊಳಿಸಿದ್ದಾರೆ.

* * *

ದೃಶ್ಯ ೫

ಸನ್ನಿವೇಶ ೮

ಅಫ್ಜಲ್‌ಖಾನ್ : ಸಮಾಧಾನ ಮಾಡ್ಕೊ ನಾನೂಸಾದ್. ಆಗಬಾರದಿತ್ತು, ಆಗಿಹೋತು. ನಿನ್ನ ಮಗನ ವೀರ ಸ್ವರ್ಗ ಸೇರಿದ. ಅವನ ತ್ಯಾಗ ಸಣ್ಣದಲ್ಲ, ಟಿಪ್ಪು ಬಾದಷಾ ಹೆಸರಿನೊಂದಿಗೆ ಆತನ ಹೆಸರು ಸದಾ ನೆನಪಿರುತ್ತದೆ.

ನಾನೂಸಾದ್ : ಅಯ್ಯೋ ಭೀಮ, ಈ ಸ್ಥಿತಿ ಬರುತ್ತೆ ಅಂತ ಅಂದ್ಕೊಂಡಿರಲಿಲ್ಲ ಮಗನೆ. ನೋಡೊ ಮಗ ನಿನ್ನ ಹೆಂಡತಿ ಆರುತಿಂಗಳ ಗರ್ಭಿಣಿ. ಅವಳಿಗೆ ಏನು ಹೇಳಲೊ ಮಗನೆ. ನಾಳೆ ಹುಟ್ಟದ ನಿನ್ನ ಮಗನಿಗೆ ಅಪ್ಪ ಸ್ವರ್ಗಕ್ಕೆ ಹೋದ ಎಂದು ಯಾವ ಬಾಯಿಯಿಂದ ಹೇಳಲಿ ಮಗನೆ ಭೀಮ, ಇಲ್ಲೆ ಇದ್ದೆಯಲ್ಲೋ ಯಾಕೆ ಹೀಗಾಯ್ತು.

ರಾಮಿಬಾಯಿ : ಭೀಮ, ಏಳುಮಗನೆ, ಹೂಂ, ಯಾಕೆ ಇಷ್ಟೊತ್ತು ಮಲಗಿಯ ನೋಡು, ನಿನ್ನ ಹೆಂಡತಿ ಗೋಮ್ಲಿ ಬಂದಾಳ ನೋಡು. ಹೋಗುವಾಗ ಮಾತು ಕೊಟ್ಟಿದ್ದೆ. ಬೇಗನೆ ವಾಪಾಸು ಬರ್ತಿನಿ ಅಂತ. ಆದ್ರ ಬಹಳ ತಡಮಾಡಿದೆ. ಎರಡು ತಿಂಗಳು ಪಾಪಾ, ಹುಡುಗಿ ನಿನ್ನ ದಾರಿ ಕಾಯುತ್ತಿದ್ದಾಳೆ. ನೋಡು ಮಗ ಅವಳಿಗ ನಿನ್ನ ಮಗುವಿಗೆ ತಾಯಿ ಆಗ್ತಿದ್ದಾಳೆ. ಅವಳನ್ನ ಒಮ್ಮೆ ನೋಡು

ಅವಳು ಇಷ್ಟು ದಿನ ಕಾದದು ಮರಿತಾಳ. ಏಳು ಮಗ. ಅಯ್ಯೊ, ನನ್ನ ಒಡಲು ಇಷ್ಟು ಬೇಗ ಒಂಟಿಯಾಯಿತೆ.

ಅಫ್ಜಲ್‌ಖಾನ್ : ನಾನೂಸಾದ್, ರಾಮಿಬಾಯಿ ಸತ್ಯನ ಅರ್ಥ ಮಾಡಿಕೊಳ್ಳಾಕ ಪ್ರಯತ್ನ ಮಾಡ್ರಿ. ಭೀಮ ಬದುಕಿಲ್ಲ. ಮಹಾರಾಜ ಟಿಪ್ಪುನ ಸೇವೆಯಲ್ಲಿ ಹುತಾತ್ಮನಾದ. ಕೆಂಪುಮಂದಿ, ಅವನ ಧೈರ್ಯವನ್ನ ಸಹಿಸದೆ, ಅವನಿಗೆ ಹೆದರಿ ಕೊಂದರು. ಗೋಮ್ಲಿ ಬೇಟಿ ನೀನಾದರೂ ಹೇಳು. ವಾಸ್ತವ ಬೇರೆ ಇದೆ. ಇಬ್ಬರು ಅಳದಿದ್ದರೆ ಪಾಗಲ್ ಆಗ್ತಾರೆ. ಅಳಿತು, ಕಣ್ಣಲ್ಲಿ ನೀರು ಬರಲಿ ನಾಳೆ ಬರಲಿರುವ ಭೀಮನ ಬೆಟನ ಸಲುವಾಗಿ ಯಾದರು ಅವರು ಜಿಂದಾ ಇರಬೇಕು.

ಜೇಮು : ನಾನು ಬಂದಿದ್ದರೆ ನಿನಗೆ ಈ ಗತಿ ಬರುತ್ತಿರಲಿಲ್ಲಾ ಕ್ರೂರಿ ಕೆಂಪುಮಂದಿ ನಿನ್ನ ಬಲಿ ತೆಗೆದುಕೊಂಡರ ಭೀಮ ನಿನ್ನ ಹೆಂಡತಿಗೆ ಏನು ಹೇಳಿ ಸಮಾಧಾನ ಮಾಡಲಿ. ಖಾನ್ ಸಾಬ್, ಇದೆಲ್ಲಾ ಹೇಗಾಯ್ತು, ಹುಲಿಯಂತ ನನ್ನ ಅಳಿಯನಿಗೆ ಬೆರಹಮಿಸೆ ಕೊಂದಿದ್ದಾರೆ. ಅವರ ವಂಶನಿರ್ವಂಶ ಆಗಲಿ.

ಅಫ್ಜಲ್‌ಖಾನ್ : ಜೇಮು, ನಾನು ಹೊರಡಬೇಕು. ಪ್ರಭುಗಳು ತೊಂದರೆಯಲ್ಲಿದ್ದಾರೆ.ಯಾವಾಗ ಬ್ರಿಟಿಷ್‌ರ ಸಾತ್ ಜಂಗ್ ಆಗುತ್ತೊ ಗೊತ್ತಿಲ್ಲ. ಆದರೆ ಭೀಮನಾಯ್ಕನ ತ್ಯಾಗ ಐತಿಹಾಸಿಕವಾಗಿದ್ದು ಬಂಜಾರ ಸಮುದಾಯ ಬದುಕಿರುವವರೆಗೆ ಭೀಮನಾಯ್ಕ ಬದುಕಿರ್ತಾನ.

ಗೋಮ್ಲಿ : ಭೀಮ, ಏಳು ನನ್ನೊಡೆಯ. ನೋಡು ನಿನ್ನ ವಂಶದ ಕುಡಿ ನನ್ನ ಹೊಟ್ಟೆಯಲ್ಲಿ ಬೆಳೆಯುತ್ತಾ ಇದೆ. ಹಿಂಗ ಹಠಮಾಡಬೇಡ, ನೀನು ಜಾಣನಲ್ಲವ. ಏಳು ಮೇಲೇಳು ಅಯ್ಯೊ ಭೀಮ ಎಂಥ ಭಯಾನಕ ಸಾವು ನೋಡಲಾರೆ. ಖಾನ್ ಚಾಚ, ಭೀಮ (ದುಃಖಿಸುವಳು, ಅಳುವಳು)

ಅಫ್ಜಲ್‌ಖಾನ್ : ಬೇಟಿ ನಮ್ದುಕೆ ಮಾಫ್‌ಕರನಾ. ಬದುಕಿ ಬಾಳಬೇಕಾದ ಭೀಮ ಕೆಂಪುಮಂದಿಯ ಕ್ರೌರ್ಯಕ್ಕೆ ಬಲಿಯಾದ.

ಗೋಮ್ಲಿ : ಖಾನ್ ಚಾಚ, ಭೀಮ ಬಹದ್ದೂರ್ ಅದಾನ, ಅವನಿಗೆ ಏನೂ ಆಗಿಲ್ಲ. ಅವನಿಗೆ ಏನು ಆಗಿಲ್ಲಾ, ಏನೂ ಆಗಿಲ್ಲ.

ಅಫ್ಜಲ್‌ಖಾನ್ : ಖುದಾಹಪೀಜ್ ಬೇಟಿ. ನಾನು ಹೊರಡಲೇಬೇಕು. ಭೀಮ ಅಮರನಾದ. ಅಲ್ಲಾ ಒಬ್ಬನೆ ನಿನಗೆ ಕಾಪಾಡಬೇಕು.

ನಾನೂಸಾದ್ : ನಿಮ್ಮ ಋಣ ಹೇಗೆ ತೀರಿಸಲಿ ಖಾನ್‌ಸಾಹೇಬ, ನಿಮ್ಮ ಜೀವವನ್ನು ಸಂಕಷ್ಟದಲ್ಲಿಟ್ಟು ಭೀಮನ ಕಳೆಬರಹವನ್ನು ನಮ್ಮ ತಾಂಡಕ್ಕೆ ತಂದ್ರಿ ಎಂತ ತೊಂದರೆ ತಗೊಂಡು ಭೀಮನ ಮೇಲಿನ ವಿಶ್ವಾಸದಿಂದ ನೀವು ಹಾಗೆ ಮಾಡಿದಿರಿ.

ಖುದಾಹಪೀಜ್...

* * *



ವೇರಾಳು

ಬಂಜಾರ ಬೌದ್ಧಿಕ ವಲಯ ಇಲ್ಲದೆ ಇರುವುದರಿಂದಾಗಿ ಎಲ್ಲಿಯೂ ಅದು ಸಲ್ಲದಾಗಿದೆ. ಇಂತಹ ಚೂರುಪಾರು ಇತಿಹಾಸವನ್ನ ಸಂಗ್ರಹಿಸಿ, ಈ ದೇಶಕ್ಕಾಗಿ, ಈ ಮಣ್ಣಿಗಾಗಿ ಮಡಿದ ಯೋಧರ ಚಿರನೆನಪು ಇರಲೆಂದು ಸಾಹಿತ್ಯದ ರೂಪದಲ್ಲಿ ಪ್ರಸ್ತುತಪಡಿಸಿ ಅವರ ತ್ಯಾಗ, ಬಲಿದಾನ ವ್ಯರ್ಥವಾಗದಿರಲಿ ಎಂದು ಬಗೆದು ಈ ನಾಟಕವನ್ನು ಬರೆದಿದ್ದೇನೆ. ಈ ತುಣುಕು ಸುದ್ದಿಯನ್ನ ಪ್ರಕಟಿಸಿದ ಪ್ರಜಾವಾಣಿ ದಿನಪತ್ರಿಕೆಗೆ ನಾನು ಋಣಿಯಾಗಿದ್ದೇನೆ. ಬುಡಕಟ್ಟು, ಆದಿವಾಸಿ, ನಿರ್ವಂಚಿತ ಜನಸಮುದಾಯಗಳ ಇತಿಹಾಸ ಹೊರಬಾರದೆ ಇರುವುದು. ಈ ಜನರ ಇತಿಹಾಸವನ್ನ ಅವರೆ ಖುದ್ದಾಗಿ ಬರೆದುಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಈ ನಾಟಕ ಬಹಳ ಅಪರೂಪದ ಕೃತಿ. ಎಲ್ಲೊ ಸಿಕ್ಕ ತುಣುಕು ಮಾಹಿತಿ ಹಿಡಿದು ಬಳ್ಳಾರಿಯವರೆಗೆ ಬಂದು ಅದನ್ನ ಮನಸ್ಸಿನೊಳಗೆ ಕೊಳೆಹಾಕಿ, ಸರಿಯಾದ ಸಂದರ್ಭದಲ್ಲಿ ಸಿಕ್ಕ ಮಾಹಿತಿ ಕಲೆಹಾಕಿ, ಬಂಜಾರ ಜನಸಮುದಾಯ ಬ್ರಿಟೀಷರ ವಿರುದ್ಧ ಈ ಹಿಂದೆ ಸಾಕಷ್ಟುಸಲ ಮುಖಾ-ಮುಖಿಯಾಗಿದೆ ಎನ್ನುವುದನ್ನ ಪ್ರತಿಪಾದಿಸಿದ್ದೇನೆ..

- ಶಿರಗಾನಹಳ್ಳಿ ಶಾಂತನಾಯ್ಕ

ISBN 978-81-942307-1-7
9 788194 230717 >

ಗಗನ
ಪ್ರಕಾಶನ